


ಮನುಷ್ಯನು ತನ್ನ ದೌರ್ಬ ಲ್ಯದಿಂದಲೇ ಸ್ವಾತಂತ್ರ್ಯ ವನ್ನು ಕಳೆದುಕೊಳ್ಳುವನು ಎಂದು ನನ್ನ ಮನವರಿಕೆ ಯಾಗಿದೆ.

ತಾವು ಸ್ವತಂತ್ರ ಸ್ತ್ರೀಪುರು ಷರಾಗಿ ಬಾಳುವದು ಸಾಧ್ಯ ವಾಗದೆ ಹೋದರೆ ನಾವು ಸಾಯುವುದರಲ್ಲಿ ಸಮಾಧಾನ ಪಡುವದು ಲೇಸು.

ಉಣ್ಣಲು, ತಿನ್ನಲು, ಉಸುರಾಡಿಸಲು ಪ್ರತಿ ಯೊಂದು ದೇಶವು ಯೋಗ್ಯ ವಿದ್ದಂತೆ ಅದು ತನ್ನ ರಾಜ್ಯ ವನ್ನು ನಡೆಸಲು, ಅದು ಹೇಗೆಯೇ ನಡೆಸಲಿ, ಯೋಗ್ಯವೇ ಇರುವದು.

ನನ್ನ ಕಲ್ಪನೆಯ ಪ್ರಕಾರ, ಪ್ರಜಾಪ್ರಭುತ್ವ ಹಾಗೂ ತನ್ನ ಅಮಲು ನಡೆಸಲು ಹಿಂಸೆಯ ಉಪಯೋಗ, ಇವು ಪರಸ್ಪರ ವಿಸಂಗತವಿರುವವು.

ರಾಷ್ಟ್ರದಲ್ಲಿಯ ವಿವಿಧ ಹಿತ ಸಂಬಂಧಗಳನ್ನು ಪ್ರತಿಯೊ ಬ್ಬನು ಪ್ರಾತಿನಿಧಿಕವಾಗಿ ಪ್ರತಿ ಪಾದಿಸಬಲ್ಲನೆಂಬುದೆ ಪ್ರಜಾ ಪ್ರಭುತ್ವದ ತಿರುಳು ಇರು ವದು. ವಿಶಿಷ್ಟ ಹಿತಸಂಬಂಧ ಗಳನ್ನು ವಿಶಿಷ್ಟ ಪ್ರತಿನಿಧಿಗಳ ಮೂಲಕ ಪ್ರತಿಪಾದಿಸಲು ಪ್ರಜಾಪ್ರಭುತ್ವದಲ್ಲಿ ಅನುವು ಇದ್ದರೂ ಅದೇನೂ ಅದರ ಒರೆಗಲ್ಲಲ್ಲ. ಅದು ಆ ಪ್ರಜಾ ಪ್ರಭುತ್ವದ ಅಪೂರ್ಣತೆಯ ಕುರುಹು.

— ಗಾಂಧೀಜಿ

ಸಂಪಾದಕರು : ಹ. ರಾ. ಪುರೋಹಿತ   ಸಂಸ್ಥಾಪಕರು : ರಂ. ರಾ. ದಿವಾಕರ

ಸಂಪುಟ ೨೦]   [ಸಂಚಿಕೆ ೪೦

ಹುಬ್ಬಳ್ಳಿ ತಾ. ೩೧—೧—೪೯

ಬೆಲೆ : ೩ ಆಣೆ

ಕರ್ಮವೀರ

ಹರಿಜನ ಅಗ್ರಲೇಖ

ನಿರಪೇಕ್ಷ ಪ್ರೇಮದ ಸಿದ್ಧಾಂತ

ಚಕ್ರವರ್ತಿ ರಾಜಗೋಪಾಲಾಚಾರಿಯವರಿಂದ

ಆಕಾಶಬುಟ್ಟಿಗಳು ಮೇಲೇರುವದನ್ನೂ ಆಕಾಶದಲ್ಲಿ ನಕ್ಷತ್ರಗಳಂತೆ ಪ್ರಜ್ವಲಿಸಿ ಮುಂದೆ ಅದೃಶ್ಯವಾಗುವದನ್ನೂ ನಾವೆಲ್ಲರೂ ನೋಡಿದ್ದೇವೆ. ಆಗ ನಾವೆಲ್ಲರೂ ಕೆಲ ಕ್ಷಣ ಗಗನವನ್ನೇ ದಿಟ್ಟಿಸುತ್ತ ನಿಲ್ಲುತ್ತೇವೆ, ಆದರೆ ಎಲ್ಲೆಲ್ಲಿಯೂ ಶೂನ್ಯ. ಅದೇ ಬಗೆಯಾಗಿ ಬಾಪುವೂ ಅದೃಶ್ಯರಾದರು. ಹನ್ನೆರಡು ತಿಂಗಳ ಹಿಂದೆ ಅವರು ಅತ್ಯಂತ ತೇಜಃಪುಂಜರಾಗಿ ಬೆಳಗಿ ಹಠಾತ್ತಾಗಿ ಕಣ್ಮರೆಯಾಗಿ ಹೋದರು. ನಾವು ಆಕಾಶದತ್ತ ಕಣ್ಣುನಟ್ಟು ಕಾದೆವು, ತೇಜಃಪಿಂಡವಿದ್ದಲ್ಲಿ ಬರಿ ಕಪ್ಪು ಕಲೆಗಳನ್ನು ಕಂಡೆವು. ೧೯೪೭ರ ಉತ್ತರಾರ್ಧದಲ್ಲಿ, ಭಾರತಕ್ಕೆ ಸ್ವಾತಂತ್ರ್ಯ ದೊರೆತಿದ್ದರೂ ಅದು ಅನರ್ಥ, ಪ್ರಕ್ಷೋಭಗಳಿಂದ ಪೀಡಿತವಾಗಿತ್ತು; ಆ ಅನರ್ಥ, ಪ್ರಕ್ಷೋಭಗಳು ಬಾಪುವನ್ನು ಸ್ವತಃ ಅವರು ಕೂಡ ಕಲ್ಪಿಸಿರದಷ್ಟು ವ್ಯಾಕುಲಗೊಳಿಸುವಷ್ಟು ಘೋರವಿದ್ದವು. ಅವರ ಪರಿಪೂರ್ಣ ತೇಜಸ್ಸು ಪ್ರಜ್ವಲಿಸಿದ್ದು ಆ ಸಂಧಿಯಲ್ಲಿ.

ನನ್ನ-ಅವರ ಅಪ್ತಸಹಯೋಗದ ಕಳೆದಇಪ್ಪತ್ತೆಂಟು ಅಮೂಲ್ಯ ವರ್ಷಗಳ ಉದ್ದಕ್ಕೂ ಅವರಲ್ಲಿ ನನಗೆ ಅಪೂರ್ವ ಪ್ರೀತ್ಯಭಿಮಾನಗಳಿದ್ದವು. ಅಷ್ಟು ಪ್ರೀತ್ಯಭಿಮಾನಗಳನ್ನು ಯಾರೂ ಯಾರಲ್ಲಿಯೂ ಇರಿಸಿರಲಾರ. ಆದರೆ ಬಾಪುವಿನ ಬಗ್ಗೆ ನನ್ನ ಆಶ್ಚರ್ಯವೂ ಆದರವೂ ಪರಮಾವಧಿಯನ್ನು ಮುಟ್ಟಿದ್ದು ೧೯೪೭ರ ಕೊನೆಯ ತಿಂಗಳುಗಳಲ್ಲಿಯೆ.

"ನನ್ನ ಅಭಿಪ್ರಾಯ ನಿಮಗೆ ಸಮ್ಮತವೆ? ಪ್ರೇಮದಲ್ಲಿ ಸಾಧನೆಯ ನಿರಪೇಕ್ಷ ಸಿದ್ಧಾಂತವನ್ನು ನೀವು ಒಪ್ಪುವಿರಾ?" ಎಂದು ಅವರು ಒಂದು ದಿನ ನನ್ನನ್ನು ಕೇಳಿದರು.

"ಅನ್ಯಮಾರ್ಗವೇ ಇಲ್ಲ," ನಾನು ನಿಶ್ಶಂಕನಾಗಿ ಹುರುಪಿನಿಂದ ಉತ್ತರವಿತ್ತೆ.

"ನಿಜ ನಿಜ," ಅವರು ಆನಂದಗೊಂಡು ಘೋಷಿಸಿದರು. ನನ್ನ ಸಮ್ಮತಿ ದೊರೆತಾಗಲೆಲ್ಲ ಅವರಿಗೆ ತೀವ್ರ ಸಂತೋಷವಾಗುತಿತ್ತು. ಇದು ಆತ್ಮಪ್ರಶಂಸೆಯಲ್ಲ!

"ಪ್ರತಿಪಕ್ಷದ ಸಹಾನುಭೂತಿ ಬೇಡವೇ?" "ಪ್ರತಿಪಕ್ಷವೇನೂ ಸಹಕರಿಸುವದಿಲ್ಲ, ಅಂದಮೇಲೆ ಇದರಿಂದೇನು ಫಲ?" ಈ ಎಲ್ಲ ಶಂಕೆಗಳು ಅಸಂಬದ್ಧವೆನಿಸುತ್ತಿದ್ದವು, ಅವಕ್ಕೆ ತಲೆಯೆತ್ತಲು ಅವಕಾಶವೇ ಇದ್ದಿಲ್ಲ; ದಾರಿ ನೇರವಾಗಿ, ನಿಚ್ಚಳವಾಗಿತ್ತು.

ಜೀವನ ಮತ್ತು ಕರ್ಮ ಇವುಗಳ ಬಗ್ಗೆ ಬಾಪುವಿನ ಸಿದ್ಧಾಂತ ಮೊದಲಿಂದಲೂ ಇದೇ ಆಗಿತ್ತು. ನಮ್ಮಲ್ಲಿ ಕೆಲವರಿಗೆ ಇದು ತಿಳಿದೂ ಇತ್ತು. ಆದರೆ ಆಗ ಬಾಪು ಅವಿರತವಾಗಿ ನಿರರ್ಗಳವಾಗಿ ಆ ಸಿದ್ಧಾಂತದಲ್ಲಿ ತುಂಬುತಿದ್ದ ಅದಮ್ಯ ವಿಶ್ವಾಸದ ಜೀವಕಳೆಯನ್ನಾಗಲಿ ಸಾಭಿಪ್ರಾಯತೆಯನ್ನಾಗಲಿ ಹಿಂದೆಂದೂ ಯಾರೂ ತುಂಬಿದ್ದಿಲ್ಲ.

ಜನವರಿ ೩೦, ೧೯೪೮ನೆ ದಿನ ಆಕಾಶಬುಟ್ಟಿ ಸಿಡಿಯಿತು, ಅದೆಂಥ ಪ್ರೋಜ್ವಲ ಪ್ರಕಾಶ! ಈಗ ಎಲ್ಲವೂ ಕಗ್ಗತ್ತಲು; ಅಂದು ನಮ್ಮ ಕಣ್ಣುಕುಕ್ಕಿದ ವರ್ಣವಿನ್ಯಾಸದ ವಿಪರೀತವನ್ನು ನಾವಿಂದು ಕಾಣುತಿದ್ದೇವೆ.

ನಮಗೆ ಪರಮಾತ್ಮನಲ್ಲಿ ವಿಶ್ವಾಸವಿದೆಯೆ? ಇದ್ದರೆ, ಅವನ ಸಾಕಾರ ಮೂರ್ತಿ ಪ್ರೇಮದಲ್ಲಿ ವ್ಯಕ್ತವಾದಷ್ಟು ಶುಭ್ರವಾಗಿ ಬೇರೆಲ್ಲಿಯೂ ವ್ಯಕ್ತವಾಗಿಲ್ಲ— ತಾಯಿಯ ಪ್ರೇಮ, ಮಗುವಿನ ಪ್ರೇಮ, ಮನುಷ್ಯ ಪ್ರೇಮ, ಮೃಗ ಪಕ್ಷಿಗಳು ತಮ್ಮ ಮರಿಗಳಲ್ಲಿ ತೋರುವ ಪ್ರೇಮ, ಮಿತ್ರ ಪ್ರೇಮ, ಅಥವಾ ಪ್ರಣಯಿಗಳ ನಲುಮೆ ಇವೆಲ್ಲ ಸಾಕಾರ ಪರಮಾತ್ಮ. ಸರ್ವ ಜೀವಿಗಳ ದೇಹಗಳಲ್ಲಿ ಪರಮಾತ್ಮನ ಅಧಿವಾಸವಿದೆಯೆಂದು ನಾವು ಕಲಿತಿದ್ದೇವೆ. ಅದು ನಿಜವಾಗಿದ್ದರೆ, ಎಲ್ಲೆಲ್ಲಿ ದಯೆಯಿದೆಯೋ, ಎಲ್ಲಿ ಪರೋಪಕಾರ, ಅನುತಾಪ, ಸಹಾನುಭೂತಿ ಇವೆಯೋ, ಎಲ್ಲಿ ಯಾವದೇ ರೂಪದ ಪ್ರೇಮವು ಒಬ್ಬನಿಂದ ಇನ್ನೊಬ್ಬನತ್ತ ಹರಿಯುವದೋ ಅಲ್ಲೆಲ್ಲ ನಾವು ಪರಮಾತ್ಮನ ವಿಭೂತಿಯನ್ನು ಕಾಣುತ್ತೇವೆ. ಪ್ರೇಮಕಣ್ಮರೆಯಾದಲ್ಲಿ ಪರಮಾತ್ಮನಿಗೂ ಬಹಿಷ್ಕಾರ.

"ಈಶಾವಾಸ್ಯಮಿದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್"

ಎಂಬೀ ತತ್ವದಲ್ಲಿ ಸ್ಥಿರ ವಿಶ್ವಾಸವಿಟ್ಟು ನಾವು ಪ್ರೇಮದಲ್ಲಿ ದೇವರನ್ನು ಕಾಣೋಣ. ಆಗ ಆತಂಕಗಳೆಷ್ಟೇ ಇದ್ದರೂ ಎಲ್ಲವೂ ಕಲ್ಯಾಣಪರ್ಯವಸಾಯಿಯಾಗುವವು.

"ಅಹಿಂಸೆ", "ಸವಿನಯ ಕಾಯದೆಭಂಗ" ಮೊದಲಾದವೆಲ್ಲ ವಿಶಿಷ್ಟ ಪಾರಿಭಾಷಿಕ ಶಬ್ದಗಳು. ಮೂಲಾರ್ಥವೆಂದರೆ ಪ್ರೇಮದ ನಿರಪೇಕ್ಷ ಸಾಧನೆ. ಪ್ರೇಮವು ನಮ್ಮ ಅಂತರಂಗದಲ್ಲಿ ಪರಮಾತ್ಮನ ಅವತಾರ. ನಮ್ಮ ಮನೋವಾಕ್ಕಾಯಗಳು ಪ್ರೇಮದಿಂದ ತುಂಬಿ ಹರಿಯಲಿ. ನಿರಪೇಕ್ಷ ಪ್ರೇಮದ ಪ್ರತಿಯೊಂದು ಕಾರ್ಯವೂ ಉಪಕಾರವೂ ಗಾಂಧೀಜಿಯ ಶ್ರಾದ್ಧಕರ್ಮವೇ ಸರಿ.

ಗಾಂಧೀ ಅವಶೇಷಗಳ ವಸ್ತು ಸಂಗ್ರಹಾಲಯ

ಕಾಕಾ ಕಾಲೇಲಕರರಿಂದ ಸಂಗ್ರಹದ ಉಪಕ್ರಮ

ಗಾಂಧೀ ರಾಷ್ಟ್ರೀಯ ಸ್ಮಾರಕ ನಿಧಿಯ ಅಧ್ಯಕ್ಷರಾದ ಡಾ. ರಾಜೇಂದ್ರ ಪ್ರಸಾದರು ಜನೆವರಿ ೮ ನೇ ದಿನ ಈ ಕೆಳಗಿನ ಹೇಳಿಕೆ ಹೊರಡಿಸಿದ್ದಾರೆ:

ಕೈಮೀರಿ ಹೋಗುವ ಮೊದಲೇ ಮಹಾತ್ಮಾ ಗಾಂಧಿಯವರಿಗೆ ಸಂಬಂಧಿಸಿದ ಎಲ್ಲ ಮಹತ್ವದ ವಸ್ತುಗಳನ್ನು ಸಂಗ್ರಹಿಸುವದು ತೀರ ಅವಶ್ಯವಾಗಿದೆ. ಐತಿಹಾಸಿಕ ವಸ್ತುಗಳನ್ನು ಕುರಿತು ಅವಜ್ಞೆ ತೋರಿಸುವದರಲ್ಲಿ ಭಾರತ ಹೆಸರುವಾಸಿಯಾಗಿದೆ. ಆ ಬಗ್ಗೆ ಅದು ಯಾವಾಗಲೂ ಖಂಡನೆಗೆ ಗುರಿಯಾಗಿದೆ. ಗಾಂಧೀಜಿಯ ಜೀವನಕ್ಕೂ ಕೃತಿಗಳಿಗೂ ಸಂಬಂಧಿಸಿದ ಸಮೃದ್ಧವಾದ ವಸ್ತುವೈಪುಲ್ಯವನ್ನು ಕಡೆಗಣಿಸಿ ಮತ್ತೊಮ್ಮೆ ನಾವು ಆದೇ ಅಪವಾದವನ್ನು ತಲೆಯ ಮೇಲೆ ಹೊರೋಣ ಬೇಡ.

ಗಾಂಧೀ ಸ್ಮಾರಕ ನಿಧಿಯವರು ಒಂದು ಗಾಂಧೀ ಸಂಗ್ರಹಾಲಯವನ್ನು ಕಟ್ಟಬೇಕೆಂದು ನಿರ್ಧರಿಸಿದ್ದು ಅದರಲ್ಲಿ ಗಾಂಧೀಜಿಯ ಈ ಕೆಳಗಿನ ಅವಶೇಷಗಳನ್ನು ಸಂಗ್ರಹಿಸಿಡಬೇಕೆಂದು ಮಾಡಿದೆ:- ಮಹಾತ್ಮಾ ಗಾಂಧಿಯವರು ಸ್ವಂತಕ್ಕಾಗಿ ಉಪಯೋಗಿಸುತಿದ್ದ ವಸ್ತುಗಳು ಮತ್ತು ಅವರಿಗೆ ಸಂಬಂಧಿಸಿದ ಐತಿಹಾಸಿಕ ಅಥವಾ ಭಾವನಾತ್ಮಕ ಮಹತ್ವವುಳ್ಳ ವಸ್ತುಗಳು; ಅವರು ಬರೆದ ಅಥವಾ ಹೇಳಿ ಬರೆಸಿದ ಪತ್ರಗಳು, ಲೇಖಗಳು ಮತ್ತು ಇತರ ದಾಖಲೆಗಳು; ಅವರ ಧ್ವನಿಯ ರಿಕಾರ್ಡುಗಳು, ಛಾಯಾಚಿತ್ರಗಳು, ವರ್ಣಚಿತ್ರಗಳು, ವ್ಯಂಗ್ಯಚಿತ್ರಗಳು ಇತ್ಯಾದಿ; ಮಹಾತ್ಮಾ ಗಾಂಧಿಯವರ ಜೀವನ ಸನ್ನಿವೇಶಗಳಿಗೆ ಸಂಬಂಧಪಟ್ಟ ಕಾವ್ಯಗಳು, ಜಾನಪದ ಗೀತಗಳು; ಮಹಾತ್ಮಾ ಗಾಂಧಿಪ್ರಣೀತವಾದ ಅಥವಾ ಅವರನ್ನು ಕುರಿತ ಎಲ್ಲ ಭಾಷೆಗಳಲ್ಲಿನ ಎಲ್ಲ ಸಾಹಿತ್ಯ; ಇವೆಲ್ಲವನ್ನು ಕೂಡಿಸಿ ಕಾಪಾಡಿ ಸಾರ್ವಜನಿಕರಿಗೆ ಲಭ್ಯವಾಗಿ ಮಾಡಲಾಗುವದು. ಅವರ ಜೀವನದ ಕೆಲ ಘಟನೆಗಳ ಚಲಚಿತ್ರಗಳನ್ನೂ ಸಂಗ್ರಹಿಸಿ ರಕ್ಷಿಸಲಾಗುವದು.

ಸಂಗ್ರಹದ ಉಪಕ್ರಮ ಮಾಡಲು ಶ್ರೀ ಕಾಕಾಸಾಹೇಬ ಕಾಲೇಲಕರರು ಒಪ್ಪಿದ್ದಾರೆ. ಗಾಂಧೀ ಸ್ಮಾರಕ ನಿಧಿಯ ಪರವಾಗಿ ಅವನ್ನು ಸಂಗ್ರಹಿಸಿ, ಶಾಶ್ವತ ವಸ್ತುಸಂಗ್ರಹಾಲಯವೊಂದನ್ನು ಕಟ್ಟಿ ಅಲ್ಲಿ ಅವುಗಳನ್ನು ತಂದಿಡುವ ವರೆಗೆ ಯಾವುದಾದರೂ ಅನುಕೂಲ ಸ್ಥಳದಲ್ಲಿ ಅವುಗಳನ್ನು ಶೇಖರಿಸಿ ಪ್ರದ

-೩ನೆಯ ಪುಟಕ್ಕೆ

ಪೂರ್ಣ ಮಾನವ — ಗಾಂಧಿ

ಲೇ: ಡಾ। ಪಟ್ಟಾಭಿ ಸೀತಾರಾಮಯ್ಯನವರು

ಬಹುಮುಖ ವಸ್ತುವಿನ ಪೂರ್ಣ ದರ್ಶನವನ್ನು ಒಂದೇ ನೋಟದಲ್ಲಿ ಪಡೆಯುವದು ಅಸಾಧ್ಯ. ಮನುಷ್ಯಪ್ರಾಣಿ ತ್ರಿವಿಧ ಪರಿಮಾಣಗಳುಳ್ಳ ವಸ್ತು. ಅವನ ಪಾರ್ಶ್ವದರ್ಶನವನ್ನೂ ಅಭಿಮುಖದರ್ಶನವನ್ನೂ ಪೃಷ್ಠದರ್ಶನವನ್ನೂ ಏಕಕಾಲದಲ್ಲಿ ಪಡೆಯುವದು ಸಾಧ್ಯವೆಂದು ನಿಮಗೆ ಎಂದಾದರೂ ಅನಿಸಿದೆಯೆ? ಈ ಮೂರೂ ದರ್ಶನಗಳನ್ನೂ ಒಮ್ಮೆಲೇ ತೆಗೆದುಕೊಳ್ಳಲು ಬಾರದು. ಆದರೆ ಆವು ಮೂರೂ ಇಲ್ಲದೆ ನಿಮ್ಮ ದರ್ಶನ ಪೂರ್ತಿಯಾಗಲಾರದು. ಇಷ್ಟೇ ಅಲ್ಲ; ಒಂದು ನಿಟ್ಟಿನ ದರ್ಶನ ಸುಂದರವಾಗಿರಬಹುದು, ಇನ್ನೊಂದು ವಿಕೃತವಾಗಿ ಕಾಣಬಹುದು. ಅವುಗಳನ್ನು ತಪ್ಪುತಿಳಿದು ಒಂದಕ್ಕೊಂದು ಹೋಲಿಸಿ ಇದು ಸುಂದರ, ಇದು ವಿಕೃತವೆಂದು ಭಾವಿಸಿಕೊಳ್ಳುವದಾಗಲಿ ಅದರ ಮೇಲೆ ಕಟುತರ ವಾದವಿವಾದಗಳನ್ನೆಬ್ಬಿಸುವದಾಗಲಿ ಅವರವರಿಗೆ ಸೇರಿದ ಮಾತು.

ಸುವ್ಯಕ್ತ—ಸುಗ್ರಾಹ್ಯವಾಗಿರುವ ಮನುಷ್ಯನ ಬಾಹ್ಯ ರೂಪದ ದರ್ಶನವೇ ಇಷ್ಟು ಕಷ್ಟಸಾಧ್ಯವಾಗಿರುವಾಗ, ಮನುಷ್ಯನ ಚರಿತ್ರವನ್ನೂ ವ್ಯಕ್ತಿತ್ವವೆಂದು ಕರೆಯಲ್ಪಡುವ ಆ ಗುಣವಿಶೇಷವನ್ನೂ ನಿರ್ಮಿಸುವ ಅಸ್ಪಷ್ಟ ಅಗ್ರಾಹ್ಯ ರೂಪದ ಹೃದಯ ಬುದ್ಧಿಗಳ ವ್ಯಾಪಾರಗಳನ್ನು ಚಿತ್ರಿಸಿಕೊಳ್ಳುವದು ಇನ್ನೆಷ್ಟು ದುಸ್ಸಾಧ್ಯವಿರಬೇಕು! ಸಾಮಾನ್ಯ ಜನರಲ್ಲಿಯೂ ಬಹುವಿಧ ಸ್ವಭಾವಗಳನ್ನು ನಾವು ಕಾಣುತ್ತೇವೆ-ಹಲಬಗೆಯ ಮನೋಲಹರಿಗಳು, ಭಾವಗಳು ನಮಗೆದುರಾಗುತ್ತವೆ. ಅವನ್ನು ಪರೀಕ್ಷಿಸಿ ಅರ್ಥಮಾಡಿಕೊಳ್ಳುವದು ಸುಲಭವಾಗಿರುವದಿಲ್ಲ. ಒಬ್ಬ ದಾರ್ಶನಿಕನನ್ನೋ ಪ್ರವಾದಿಯನ್ನೋ ಸಾಧುವನ್ನೋ ಋಷಿಯನ್ನೋ ತಿಳಿದುಕೊಳ್ಳಬೇಕಾದರೆ ಈ ಕಷ್ಟ ಇನ್ನಷ್ಟು ತೀವ್ರವಾಗಬಹುದೆಂದು ಯಾರಾದರೂ ತಿಳಿದುಕೊಳ್ಳಬಹುದು- ಆದರೂ ಅದು ಹಾಗಿರಬೇಕೆಂದಿಲ್ಲ. ಮನುಷ್ಯ ಎಷ್ಟು ಎತ್ತರದಲ್ಲಿ ಕಾಣಿಸಿಕೊಳ್ಳುವನೋ ಅಷ್ಟುಮಟ್ಟಿಗೆ ಅವನಲ್ಲಿರುವ ಚರಿತ್ರವೆಂಬ ಆ ಗುಣಸಮೂಹದ ಸರಿಯಾದ ದರ್ಶನ ಸುಕರವಾಗುತ್ತದೆ. ಮಹಾತ್ಮಾ ಗಾಂಧಿಯವರು ಅಂಥ ಉನ್ನತ ವೇದಿಕೆಯಲ್ಲಿ ನಿಂತವರು. ಮೇಲಾಗಿ ಅವರ ಚರಿತ್ರ ಗಾಜಿನಂತೆ ಸಂಪೂರ್ಣ ಪಾರದರ್ಶಕವಾಗಿತ್ತು. ಅದರಲ್ಲಿ ಎಲ್ಲಿಯೂ ಒಂದಿಷ್ಟು ಕೂಡ ಅಸ್ಫುಟ ಅಂಶವಿದ್ದಿಲ್ಲ. ಅವರ ಭಾವ ಸ್ವಭಾವಗಳನ್ನು, ವಿಚಾರಲಹರಿಗಳನ್ನು, ಅಭಿಪ್ರಾಯ- ಅಭೀಷ್ಟಗಳನ್ನು, ರಾಗವಿರಾಗಗಳನ್ನು, ಪಕ್ಷಪಾತ ಪೂರ್ವಗ್ರಹಗಳನ್ನು ಮಂದಿಯ ಕಣ್ಣಿಂದ ಮರೆಮಾಡುವ ಭಾಗ ಯಾವುದೂ ಇದ್ದಿಲ್ಲ. ಅವರು ಮಾನವ ಜೀವಿಯೇನೋ ನಿಜ. ಆದರೆ ತಮ್ಮ ಚರಿತ್ರದ ಪ್ರತಿಯೊಂದು ಮುಖವನ್ನೂ ಜಳಜಳ ತಿಕ್ಕಿ ಜನರ ದೃಷ್ಟಿಯ ಪೂರ್ಣವೇಧಕ್ಕೆ ತೆರವಾಗಿ ಇಟ್ಟವರವರು. ಅವರ ಕಲ್ಪನೆಯಲ್ಲಿ ಸತ್ಯವೆಂದರೆ ಎಲ್ಲ ಸತ್ಯಾಂಶಗಳನ್ನೂ ಸ್ಪಷ್ಟವಾಗಿ ತೆರೆದಿಡುವದು ಮಾತ್ರವಾಗಿದ್ದಿಲ್ಲ, ಆ ಬಗ್ಗೆ ಯಾವೊಂದುಇಂಗಿತವನ್ನೂ ಬಚ್ಚಿಡದಿರುವದು ಆಗಿತ್ತು. ೧೯೧೭ರಲ್ಲಿ ಚಂಪಾರಣ್ಯದ ಜಿಲ್ಹಾ ಮ್ಯಾಜಿಸ್ಟ್ರೇಟರು ಮಹಾತ್ಮಾಜಿಯವರಿಗೆ ತಾವು ಬರೆದಿದ್ದ ಅವಮಾನಕಾರಕ ಪತ್ರವನ್ನು ಹಿಂತೆಗೆದುಕೊಂಡಾಗ ಇವರು ಆ ಪತ್ರದ ಒಂದು ಪ್ರತಿಯನ್ನು ಸತ್ಯಾಗ್ರಹದಚಾರಿತ್ರಿಕ ಭಾಂಡಾರದಲ್ಲಿ ಇರಿಸಿಕೊಳ್ಳಲು ಕೂಡ ನಿರಾಕರಿಸಿದರು. ಅವರ ಸತ್ಯಸಂಧತೆಗೆ ಆಗಲೆ ಪ್ರಮಾಣ ದೊರೆತುಹೋಯಿತು, ೧೯೩೧ ಫೆಬ್ರುವರಿ ೨೨ರ ಸುಮಾರಿಗೆ, ದಿಲ್ಲಿಯಲ್ಲಿ, ಗಾಂಧಿ ಆಯರ್ವಿನ್ ಮಾತುಕತೆಯ ಪ್ರಥಮ ವಾರದಲ್ಲಿ, ಆಗ ಗೃಹಕಾರ್ಯದರ್ಶಿಯಾಗಿದ್ದ ಎಮರ್ಸನ್ನರು ತಾವು ಗಾಂಧೀಜಿಗೆ ಬರೆದ ಅವಮಾನಕರ ಪತ್ರವನ್ನು ಹಿಂತೆಗೆದುಕೊಂಡ ಪ್ರಸಂಗದಲ್ಲಿಯೂ ಇಂಥದೇ ಪರಿಸ್ಥಿತಿ ಉದ್ಭೂತವಾಗಿತ್ತು. ಅದೇ ಪ್ರಕಾರ ಅವರ ಅಹಿಂಸೆಯ ಮಾನದಂಡವೂ ಕಾಂಗ್ರೆಸಿನಗೌರವಿತ ಮುಂದಾಳುಗಳ ವಿಷಯದಲ್ಲಿ ವ್ಯಂಗ್ಯ ಅಥವಾ ವಕ್ರವಾಕ್ಯಗಳನ್ನಾಡಿದರೆ ಸಹಿಸುತಿದ್ದಿಲ್ಲ. ಪ್ರಸ್ತುತ ಲೇಖಕನು ದಿವಂಗತ ನೇತಾರೊಬ್ಬರನ್ನು ಕುರಿತು ವ್ಯಂಗ್ಯೋಕ್ತಿಯಾಡಿದಾಗ, ಗಾಂಧೀಜಿಯವರಿಂದ ಗಂಟುಹುಬ್ಬಿನ ಮುಳಿತನೋಟದ ನ್ಯುಡು ನಿಷೇಧಕ್ಕೆ ಗುರಿಯಾಗಬೇಕಾಯಿತು.

ಗಾಂಧೀಜಿ ಪರಿಪೂರ್ಣ ಜೀವನವನ್ನು ನಡೆಸುತಿದ್ದರೆಂದು ಹೇಳಿಬಿಟ್ಟರೆ ಸಾಲದು. ಅವರು ಪ್ರತಿಯೊಬ್ಬ ಸತ್ಯಾಗ್ರಹಿಯಿಂದಲೂ ಉತ್ತಮ ಜೀವನವನ್ನು ಅಪೇಕ್ಷಿಸುತಿದ್ದರು. ಬರಿ ನೂತರೆ ಸಾಲದು, ಉತ್ತಮವಾಗಿ ನೂಲಬೇಕು. ಒಬ್ಬಾನೊಬ್ಬ ಮುಸ್ಲಿಮನೊಡನೆ ಸ್ನೇಹ ಬೆಳಸಿದರೆ ಸಾಲದು, ಜಾತೀಯ ಸೌಹಾರ್ದವನ್ನು ಹೆಚ್ಚಿಸಲಿಕ್ಕೂ ಹೆಣಗಬೇಕು. ಅಸ್ಪೃಶ್ಯತೆಯನ್ನು ನಿವಾರಿಸಿದರೆ ಸಾಲದು, ಅದು ಬರಿ ಬಾಹ್ಯ; ಕೆರೆಬಾವಿ, ಸಲ್ಲಿ, ಸಾಲೆ, ಕಾರಖಾನೆ, ವಸತಿಗೃಹ, ಆಸ್ಪತ್ರೆಗಳಲ್ಲಿ ಅವರಿಗೆ ಪ್ರವೇಶಕೊಟ್ಟು ಹರಿಜನರಿಗೆ ಸಮಾನತ್ವವನ್ನೀಯಬೇಕು. ಅಷ್ಟು ಸಾಲದು. ಅವರನ್ನು ಗುಡಿಗುಂಡಾರಗಳಿಗೂ ಬಿಡಬೇಕು. ಇಷ್ಟಾದರೂ ಇನ್ನೂ ಉಳಿಯುವದು— ಹರಿಜನರ ಆರ್ಥಿಕ ಸ್ಥಿತಿಯನ್ನು ಸುಧಾರಿಸಬೇಕು. ಅವರು ಹೊಲದ ಕೂಲಿಕಾರರಾಗಿ, ನೆಲವನ್ನು ಉಳುವವರಾಗಿದ್ದರೂ ಇನ್ನೂ ಹೆಸರಿನಲ್ಲದಿದ್ದರೂ ನಿಜವಾಗಿ ಜೀತದಾಳುಗಳಾಗಿಲ್ಲವೆ? ಗಾಂಧೀಜಿಯ ಅಪರಿಗ್ರಹ ತತ್ವವೆಂದರೆ, ಹೊಸ ಸಮಾಜರಚನೆಯ ತಳಹದಿಯಾಗಿರಬೇಕಾದ ತತ್ವಗಳ ಅತ್ಯಂತಿಕ ಶುದ್ಧರೂಪ. ಆ ಸಮಾಜದಲ್ಲಿ ಯಾರೂ ಸ್ವಾರ್ಜಿತ ಅಥವಾ ಪಿತ್ರಾರ್ಜಿತ ಸಂಪತ್ಸಂಗ್ರಹದ, ಬಡ್ಡಿಯಿಂದಾಗಲಿ, ಲಾಭಾಂಶದಿಂದಾಗಲಿ, ಅಂಥ ಸಂಪತ್ತಿಯಿಂದ ಬರಬಹುದಾದ ಬಾಡಿಗೆಯಿಂದಾಗಲಿ ಜೀವನ ಮಾಡಕೂಡದು. ಸಾಮ್ಯವಾದವಾಗಲಿ ಕಮ್ಯುನಿಸ್ಟ ವಾದವಾಗಲಿ ಮೇಲೆ ಹೇಳಿದ ಅಸಂಗ್ರಹ ತತ್ವದ ವ್ಯವಹಾರಿಕ ಸ್ವರೂಪವಲ್ಲದಿದ್ದರೆ ಮತ್ತೇನು? ಸಂಗ್ರಹದಿಂದುದ್ಭವಿಸುವ ಲಾಭವನ್ನು ಉಪಯೋಗಿಸುವದೆಂದರೆ ಅದೊಂದು ಕಳ್ಳತನವೇ. ಈ ಶ್ರೇಷ್ಠ ತತ್ವಗಳನ್ನು ಎಲ್ಲೆಡೆಯಲ್ಲಿಯೂ ಇದ್ದಕ್ಕಿದ್ದಂತೆ ಅನ್ವಯಿಸತಕ್ಕವಲ್ಲ. ಎಲ್ಲರೂ ಬ್ರಹ್ಮಚಾರಿಗಳಾದರೆ ನಾಳೆ ಜಗತ್ತೇ ಉಳಿಯಲಿಕ್ಕಿಲ್ಲ. ನೈತಿಕ ಚ್ಯುತಿಯ ಫಲವಾಗಿ ನಾಳೆ ಬರಬಹುದಾದ ವಿನಾಶವನ್ನು ಕುರಿತು ನೀತಿಗೇಡಿಗಳನ್ನು ಎಚ್ಚರಿಸುವದಕ್ಕಾಗಿ ಈ ಬಗೆಯ ಜೀವನಪದ್ಧತಿಯನ್ನು ನಿರ್ದೇಶಿಸಲಾಗಿದೆ. ಈ ತತ್ವವನ್ನೆ ಸುಲಭವಾದ ಸ್ವರೂಪದಲ್ಲಿ ಭೀಷ್ಮನು ಧರ್ಮರಾಜನಿಗೆ ಉಪದೇಶಿಸಿದ್ದನು. ಅವರಲ್ಲಿ ಹೀಗೆ ವಿಧಿಸಿ ಆಚಾರಲಕ್ಷಣಗಳನ್ನು ವಿವರಿಸಲಾಗಿದೆ:

"ನಿತ್ಯಾತಿಥ್ಯ" ಅಂದರೆ ಒಂದೇ ಪಂಕ್ತಿಯಲ್ಲಿ ಅತಿಥಿಗಳಿಗೆ ದಿನವೂ ಭೋಜನ ಮಾಡಿಸುವದು.

"ನಿತ್ಯಬ್ರಹ್ಮಚರ್ಯಾ" ಅಂದರೆ ಸ್ವಪತ್ನೀವ್ರತಸ್ಥನಾಗಿರುವದು; ಮತ್ತು

"ನಿತ್ಯೋಪಹಾರ" ಅಂದರೆ ಭೋಜನ ವೇಳೆಯಲ್ಲಲ್ಲದೆ ನಡುನಡುವೆ ಏನನ್ನೂ ತಿನ್ನದಿರುವದು.

ಒಂದು ಸಲ ಮಹಾಭಾರತದ ವೇಳ್ಯಾಣಿಸಿದ ಅಂಶವನ್ನು ನಾನು ಗಾಂಧೀಜಿಯ ಗಮನಕ್ಕೆ ತಂದೆ. "ನೋಡ್ರಿ ನೋಡ್ರಿ" ಎಂದುಅವರು ಅಸಂತುಷ್ಟ ಸ್ವರದಿಂದ ಹೇಳಿದರು. ಏಕೆಂದರೆ ಈ ಲಕ್ಷಣಗಳು ಅತಿಥ್ಯ, ಬ್ರಹ್ಮಚರ್ಯ, ಉಪವಾಸಗಳ ಬಗ್ಗೆ ಅವರಿಟ್ಟುಕೊಂಡಿದ್ದ ಕಠೋರ ನಿಯಮಗಳಿಗೆ ಸರಿಹೋಗುತಿರಲಿಲ್ಲ.

ಪರಿಪೂರ್ಣ ಜೀವನದ ಬಗ್ಗೆ ಮಹಾತ್ಮರು ಹಾಕಿದ ನಿಯಮಗಳು ನೀವು ಅಸ್ಪೃಶ್ಯತೆಯನ್ನು ಹೋಗಲಾಡಿಸಿದ್ದರಿಂದ ಇಲ್ಲವೆ ಜಾತೀಯ ಐಕ್ಯವನ್ನು ಪ್ರಚುರಪಡಿಸಿದ್ದರಿಂದ ಮಾತ್ರವೇ ಪೂರ್ಣವಾಗುವದಿಲ್ಲ. ದೇಶದ ಆರ್ಥಿಕ ಸಮೃದ್ಧಿಗೆ ನೆರವಾಗಲು ನೀವು ಗ್ರಾಮೋದ್ಯೋಗಗಳನ್ನು ಉದ್ಧಾರ ಮಾಡ

ಬೇಕು; ಗ್ರಾಮೋದ್ಯೋಗಗಳಲ್ಲಿ ಖಾದಿಯೇ ಚಕ್ರವರ್ತಿ; ಇವುಗಳನ್ನು ಬೆಳಸಿದರೆ ರಾಷ್ಟ್ರ ಸ್ವಯಂಪೂರ್ಣವಾಗುವದು, ಅದು ಕಲಾಭಿಜ್ಞವಾಗುವದು, ಅದು ಉತ್ಪಾದಕ ಕಾರ್ಯದಲ್ಲಿ ಆಸಕ್ತವಾದಂತಾಗುವದು. ಒಂದು ಸಲ ನಾನು ಗಾಂಧೀಜಿಯ ಮುಂದೆ, ನಾನು ಧರಿಸಿದ್ದು ನಾನೇ ನೂತ ನೂಲಿಂದ ಕೈಮಗ್ಗದಲ್ಲಿ ನೇಯ್ದ ಖಾದಿಯೆಂದು ಹೇಳಿದಾಗ, ನಾನು ಹಾಕಿಕೊಂಡ ಜೋಡು ಸತ್ತ ಪಶುವಿನ ಚರ್ಮದ್ದೋ ಕೊಂದ ಪಶುವಿನದೊ ಎಂದು ಅವರು ಕೇಳಿದರು. ಅನುಕೂಲ ಉತ್ತರ ಕೊಟ್ಟ ಕೂಡಲೆ ಅವರಿಗೆ ತುಂಬ ಆನಂದವಾಯಿತು. ಆದರೆ ಆನಂದ ಪರಿಪೂರ್ಣವಾಗಬೇಕಾದರೆ, ನಾನು ನನ್ನ ಮಕ್ಕಳನ್ನು ಶಾಲೆಗೆ ಕಳಿಸಬಾರದು, ಶಾಸನ ಸಭೆಗಳಲ್ಲಿ ಸ್ಥಾನವನ್ನು ಕೋರಬಾರದು, ಕೋರ್ಟು ಕಚೇರಿಗಳಲ್ಲಿ ವ್ಯಾಜ್ಯ ಹೂಡಬಾರದು. ಎಲ್ಲ ಪ್ರಶ್ನೆಗಳಿಗೂ ಅನುಕೂಲ ಉತ್ತರ ದೊರೆತರೆ ಮಾತ್ರ ಅವರಿಗೆ ಪೂರ್ಣಾನಂದ. ಪ್ರೋತ್ಸಾಹಕ್ಕಾಗಿಯಾದರೂ ಶಿಷ್ಯರನ್ನು ಅಪ್ರಸ್ತುತವಾಗಿ ಪ್ರಶಂಸಿಸುವ ಗುರು ಅವರಲ್ಲ, ಬದಲಿಗೆ ಶಿಷ್ಯನ ದೋಷಗಳನ್ನೆ ಎತ್ತಿತೋರಿಸಿ ಎಲ್ಲಿ ಸುಧಾರಣೆಗೆ ಅವಕಾಶವಿದೆಯೆಂದು ತಿಳಿಸುವವರು. ನಿರ್ದೋಷ ಗುಣಪೂರ್ಣ ಜೀವನವೇ ಅವರ ಧ್ಯೇಯ. ದಪ್ತರವನ್ನು ಕಟ್ಟಿದ್ದು ಸರಿಯಾಗಿಲ್ಲವೆಂದು ಮೀರಾಬೆನರನ್ನು ಅವರು ಜರೆದುದರಿಂದ ಅವರಿಗೆ ಕಣ್ಣೀರು ಬರುವಂತಾಯಿತು. ಒಗೆದ ಕರವಸ್ತ್ರದಲ್ಲಿ ಹೇಗೊ ಉಳಿದು ಹೋದ ಒಂದು ಬಣ್ಣದ ಕಲೆಯಿಂದಾರಂಭಿಸಿ ಬಡಿಸುವಾಗ ತಪ್ಪಿ ಹೆಚ್ಚಾಗಿ ಬಿದ್ದ ಒಂದೇ ಒಂದು ಉತ್ತತ್ತಿ ವರೆಗೆ ಎಲ್ಲ ನ್ಯೂನಾತಿರೇಕಗಳೂ ಅವರ ಟೀಕೆಗೆ ಗುರಿಯಾಗುತ್ತಿದ್ದವು. ಅವರು ತಪ್ಪುಗಳನ್ನು ತಿದ್ದುವದರಲ್ಲಿ ಯಾರ ಮೋರೆಯನ್ನೂ ನೋಡುತ್ತಿದ್ದಿಲ್ಲ. ಜನರಿಂದ ನಿರ್ದೋಷತೆಯ ಅತಿರೇಕವನ್ನು ಅವರು ಬಯಸುತ್ತಿದ್ದರು. ಆಂಧ್ರ ಸಂಚಾರದ ಒಂದು ಪ್ರಸಂಗದಲ್ಲಿ ಅವರು ಮುಂಜಾನೆ ಆರು ಗಂಟೆಗೆ ಹೊರಡಬೇಕಾಗಿತ್ತು, ಆರೇ ಗಂಟೆಗೆ ಮೋಟಾರು ಹೊಕ್ಕರು. "ಯಾಕೆ ತಡ?" ಎಂದರವರು. ಅಮುಕ ಮಹಾಶಯರ ಕೈಚೀಲ ಕಾಣೆಯಾಗಿದೆಯೆಂದೊಡನೆ, ಬಂತು ವಜ್ರಸ್ವರೂಪವಾದ ಆಘಾತ: "ಅಲ್ಲವೇ ಮತ್ತೆ? ಕೆಲವರ ತಲೆಯೇ ಕಾಣೆಯಾಗಿ ಬಿಡುತ್ತದೆ!" ತಮ್ಮ ಸಿಬಂದಿಯಲ್ಲೊಬ್ಬರಿಂದಲೇ ತಡವಾದ ಇನ್ನೊಂದು ಸಂದರ್ಭದಲ್ಲಿ ಅವರು ಸಿಡಿನುಡಿದುದು: "ಅಹಾ! ಪ್ಯಾರೇಲಾಲ ಕವಿಯೇ ಸರಿ!" ದಡ್ಡರನ್ನು ಅವರು ಸುಮ್ಮನೆ ಸೈರಿಸುತ್ತಿದ್ದಿಲ್ಲ, ಠಕ್ಕರನ್ನಂತೂ ಇಲ್ಲವೇ ಇಲ್ಲ. ಆದರೆ ಒಮ್ಮೆ ತಪ್ಪು ಒಪ್ಪಿಕೊಂಡ ಮೇಲೆ ಅವರು ಎಲ್ಲವನ್ನೂ ಮರೆತು ಕ್ಷಮಿಸಿ ಬಿಡಲು ಮತ್ತು ಆತ್ಮಸಮರ್ಥನೆಗಾಗಿ ಹೇಳಿದೆಲ್ಲ ಮಾತುಗಳನ್ನು ಸತ್ಯವೆಂದೊಪ್ಪಿಕೊಳ್ಳಲು ಯಾವಾಗಲೂ ಸಿದ್ಧರೇ ಇರುತ್ತಿದ್ದರು. ಅವರು ಪ್ರತಿಯೊಬ್ಬನನ್ನೂ ಪ್ರಾಮಾಣಿಕನೆಂದೇ ತಿಳಿಯುತ್ತಿದ್ದರು. ತಮ್ಮ ಸಂಗಡಿಗರ ಮೇಲೆ ಎಂದೂ ಶಂಕಿತರಾಗುತ್ತಿದ್ದಿಲ್ಲ. ಹಾಗೆ ಮಾಡುವದು ಹಿಂಸೆಯೆಂದು ಅವರ ಭಾವನೆ.

ಸತ್ಯವಾದವೆಂಬದು ಗಂಡಾಂತರದ ಕೆಲಸವೆಂದು ಅವರಿಗೆ ಗೊತ್ತಿತ್ತು. ಆದರೆ ಸತ್ಯದ ಗಂಡಾಂತರವೇ ಮಾತುಹಾರಿಸುವದರಿಂದ ದೊರೆವ ಕ್ಷೇಮಕ್ಕಿಂತ ಒಳಿತೆಂದು ಅವರು ಬಗೆಯುತ್ತಿದ್ದರು. ಕೋಮಗಟ ಮಾರು ಘಟನೆಯಿಂದ ಪ್ರಸಿದ್ಧಿಗೆ ಬಂದಿದ್ದ ಬಾಬಾ ಗುರುದತ್ತಸಿಂಗರು ಡಂ. ಡಂ (೧೯೧೪-೧೫) ಗೋಳೀಬಾರಿನ ನಂತರ ಏಳು ವರ್ಷ ಕಾಲ ತಲೆಮರೆಸಿಕೊಂಡು ಅಡ್ಡಾಡುತ್ತಿದ್ದಾಗ ಗಾಂಧೀಜಿ ಅವರಿಗೆ ಪೋಲೀಸರ ವಶವಾಗುವದೊಳಿತೆಂದು ಉಪದೇಶಿಸಿದರು. ಅದೇ ಪ್ರಕಾರ ೧೯೨೧ ನವೆಂಬರದಲ್ಲಿ ಗಾಂಧೀಜಿಯ ಮೂಲಕವೇ ಅವರು ಪೋಲೀಸರ ವಶವಾದರು. ಅಂತೆಯೇ ರಾಜಮಹೇಂದ್ರಿಯಿಂದ ಪಂಜಾಬಿಗೆ ತಮ್ಮನ್ನು ವರ್ಗಾಯಿಸುವಾಗ ಪೋಲೀಸರ ಕೈಯಿಂದ ತಪ್ಪಿಸಿಕೊಂಡು ೧೯೨೧ ರಿಂದ ೧೯೩೭ ರ ವರೆಗೆ ಕಣ್ಮರೆಯಾಗಿದ್ದ ಸರದಾರ ಪೃಥ್ವೀಸಿಂಗರಿಗೂ ಗಾಂಧೀಜಿ ಪೋಲೀಸರ ವಶವಾಗಲು ಸೂಚನೆ ಕೊಟ್ಟರು. ಆಗಲೂ ಅದೇ ಹಳೆಯ ಮಾದರಿಯನ್ನೇ ಅನುಸರಿಸಲಾಯಿತು. ಸತ್ಯಾಚರಣೆಗೆ ಅದೊಂದೇ ಹಾದಿಯಾಗಿತ್ತು. ಎರಡೂ ಪ್ರಸಂಗಗಳಲ್ಲಿ ತಾವೇ ತಂದುಕೊಂಡ ಏಳು ಮತ್ತು ಹದಿನಾರು ವರ್ಷಗಳ ಶಿಕ್ಷೆಯ ಬದಲು ನ್ಯಾಯಸ್ಥಾನ ಹೊರಿಸಿದ ಶಿಕ್ಷೆ ಬರಿ ಒಂದು ವರ್ಷದ್ದಾಗಿತ್ತು. ಎರಡೂ ಪ್ರಸಂಗಗಳಲ್ಲಿ ಮೊದಲು ಆತ್ಮಕ್ಕೆ ನಿರ್ಬಂಧವೂ ದೇಹಕ್ಕೆ ಸ್ವಾತಂತ್ರ್ಯವೂ ಇತ್ತು; ಜೀವನ ಕುಂಠಿತವಾಗಿತ್ತು. ಆದರೆ ಸತ್ಯಮಾರ್ಗದ ಮೂಲಕ, ದೇಹಕ್ಕೆ ಮಾತ್ರ ಒಂದು ವರ್ಷದ ಪ್ರಾಯಶ್ಚಿತ್ತವಾದರೂ ಆತ್ಮ ವಿಮೋಚನೆಹೊಂದಿ ಉನ್ನತ ವಿಚಾರಗಳಲ್ಲಿಯೂ ಉತ್ತಮ ಭಾವನೆಗಳಲ್ಲಿಯೂ ಸಂಚರಿಸುವ ಆನಂದಕ್ಕೆ ಭಾಗಿಯಾಯಿತು. ಗಾಂಧೀಜಿಗೆ ಬೇಕಾದುದು ಬರಿ ಜೀವನವಲ್ಲ, ಪರಿಪೂರ್ಣ ಜೀವನ, ಬಹುಮುಖ ಜೀವನ, ಜಗತ್ತನ್ನೇ ಗೆಲ್ಲುವ ಇಚ್ಛಾಶಕ್ತಿಗೆ ಮಾತ್ರವಲ್ಲ, ದಿವ್ಯಭಾವೋಪೇತವಾದ ಆತ್ಮಕ್ಕೆ ನಿರಾತಂಕವಾಗಿ ಪ್ರವರ್ತಮಾನವಾಗಲೆಡೆಯುಳ್ಳ ನಾನಾ ಸ್ವರೂಪದ ಜೀವನ ಅವರಿಗೆ ಬೇಕಾಗಿತ್ತು. ಕಾರಾಗೃಹವಾಸವನ್ನು ಅಂಗೀಕರಿಸುವದರ ತತ್ವಜ್ಞಾನವೂ ಉಪವಾಸದಲ್ಲಿ ಅಡಕವಾದ ಅರ್ಥವೂ ಸ್ವಾಯತ್ತ ಮೌನದ ಅಭಿಪ್ರಾಯವೂ ಅದೇ. ಅವರ ಸತ್ಯಾಗ್ರಹಿ ಜೀವನವು ಅವರು ತಮಗಾಗಿ ಬಯಸಿಕೊಂಡ ಪರಿಪೂರ್ಣ ಜೀವನದ ಉದಾಹರಣೆ. ಇತರರು ಸಾಧಿಸಬೇಕಾದ ಮಟ್ಟದ ಮೇಲ್ಪಂಕ್ತಿ. ಅವರ ಉಪದೇಶಕ್ಕೂ ಆಚರಣೆಗೂ ಅಚ್ಯುತವಾದ ಮೇಳವಿತ್ತು. ಅವರು ಸತ್ಯವಾಕ್ಕಕ್ಕೆ ಅಂಟಿಕೊಂಡವರು, ಯಾವಾಗಲೂ ಬಗೆದದ್ದನ್ನೇ ನುಡಿದವರು, ನುಡಿದುದನ್ನೆ ಬಗೆದವರು.

(ಹರಿಜನ)

(೧ನೆಯ ಪುಟದಿಂದ)

ರ್ಶನಕ್ಕಿಡಲು ಶ್ರೀ ಕಾಲೇಲಕರರನ್ನು ಅಧಿಕರಿಸಲಾಗಿದೆ. .. ಸಮಸ್ತ ಭಾರತದ ಮತ್ತು ಹೊರಗಿನ ಜನರು ತಮ್ಮಲ್ಲಿರಬಹುದಾದ ಉಕ್ತಸ್ವರೂಪದ ವಸ್ತುಗಳನ್ನು ಅವರಿಗೆ ಕಳಿಸುವ ಮೂಲಕ, ಅಥವಾ ಏನಿಲ್ಲೆಂದರೂ ಅವುಗಳಿಗೆ ಸಂಬಂಧಿಸಿದ ತಿಳವಳಿಕೆಯನ್ನು ಅವರಿಗೊದಗಿಸುವ ಮೂಲಕ ಕಾಕಾ ಸಾಹೇಬರೊಡನೆ ಸಹಕರಿಸಬೇಕೆಂದು ಕೋರಲಾಗಿದೆ. ಆಗ ಅವರಿಗೆ ಸಾಧ್ಯವಾದಲ್ಲೆಲ್ಲ ಅವುಗಳನ್ನು ಸಂಪಾದಿಸಲು ಪ್ರಯತ್ನಿಸಲು ಅನುಕೂಲವಾದೀತು. ವಿಶಿಷ್ಟ ವಸ್ತು ಸಂಗ್ರಹಾಲಯ ಪ್ರತಿಷ್ಠೆಯಾಗುವವರೆಗೆ ಅವುಗಳ ರಕ್ಷಣೆಗಾಗಿ ಅವರು ಮುಂಬಯಿಯ ಪ್ರಿನ್ಸ್ ಆಫ್ ವೆಲ್ಸ ವಸ್ತು ಸಂಗ್ರಹಾಲಯದಲ್ಲಿಯೂ ರಾಯಲ್ ಏಶ್ಯಾಟಿಕ್ ಸೊಸಾಯಿಟಿಯ ಪುಸ್ತಕಾಲಯದಲ್ಲಿಯೂ ಸಾಕಷ್ಟು ವ್ಯವಸ್ಥೆಗಳನ್ನು ಮಾಡಿದ್ದಾರೆ.

ವಿಶೇಷತಃ, ಮಹಾತ್ಮಾ ಗಾಂಧಿಯವರಿಗೆ ಸಂಬಂಧಿಸಿದ ಎಲ್ಲ ಪುಸ್ತಕಗಳ ಸಾಕಷ್ಟು ಪ್ರತಿಗಳನ್ನು ಅವು ಅನುಪಲಭ್ಯವಾಗುವ ಮೊದಲೇ ಕೂಡಿಸಿಡಬೇಕೆಂದು ಅಪೇಕ್ಷಿಸಲಾಗಿದೆ. ಹಾಗಾದರೆ ಭಾರತದಲ್ಲಿಯೂ ವಿದೇಶಗಳಲ್ಲಿಯೂ ಪರಿಪೂರ್ಣವಾದ ಗಾಂಧಿ ಪುಸ್ತಕಾಲಯಗಳನ್ನು ಸ್ಥಾಪಿಸಬೇಕೆಂಬ ವಿಚಾರ ಸುಸಾಧ್ಯವೆನಿಸದು. ಭಾರತದಲ್ಲಿಯೂ ದೇಶಾಂತರಗಳಲ್ಲಿಯೂ ಮಹಾತ್ಮಾ ಗಾಂಧಿ, ಅವರ ಜೀವನ, ಅವರ ವಿಚಾರಾಚಾರಗಳಿಗೆ ಸಂಬಂಧಿಸಿದ ಪುಸ್ತಕಗಳನ್ನು ಪ್ರಕಟಿಸುವ ಪ್ರಕಾಶಕರು ತಮ್ಮ ಪ್ರಕಟನೆಗಳ ಪ್ರತಿಗಳನ್ನು ಶ್ರೀ ಕಾಕಾ ಕಾಲೇಲಕರ, ಗಾಂಧೀ ಸ್ಮಾರಕ ಸಂಘ, ಟೌನ್ ಹಾಲ್, ಮುಂಬಯಿ, ಈ ವಿಳಾಸಕ್ಕೆ ಕಳಿಸಬೇಕೆಂದು ಕೋರಿದೆ.

(ಹರಿಜನ)

"ಅಹಂಭಾವದ ಸಂಪೂರ್ಣ ನಾಶವೇ ನಿರ್ವಾಣ. ಅದರ ಸ್ವರೂಪ ಹೀಗೆಯೇ ಎಂದು ವರ್ಣಿಸಲಿಕ್ಕೆ ಬರದಿದ್ದರೂ ಅದು ಅನುಭವಕ್ಕೆ ಬರುವಂತಹದಾಗಿದೆ. ಈ ಜಗತ್ತಿನಲ್ಲಿ ಅನುಭವಿಸಲು ಸಾಧ್ಯವಿದ್ದ ಯಾವದೇ ಅತ್ಯಂತಿಕ ಸುಖಕ್ಕಿಂತಲೂ ಅದು ಶ್ರೇಷ್ಠವಾದುದು ಎಂಬುದು ನಮಗೆಲ್ಲರಿಗೆ ತಿಳಿದ ವಿಷಯ"

— ಗಾಂಧೀಜಿ ೨೯-೧೨-೩೨

ಶ್ರದ್ಧಾನುಸಾರವಾಗಿಯೇ ಅವರು ವರ್ತಿಸುತ್ತಿದ್ದರು

ಲೇ: – ಶ್ರೀ. ಕೊಂಡಾ ವೆಂಕಟಪ್ಪಯ್ಯ

ಮಹಾತ್ಮಾ ಗಾಂಧಿಯವರು ಕೊಲೆಗಡಕನಿಂದ ಹತರಾಗಿ ಹನ್ನೊಂದು ತಿಂಗಳು ಗತಿಸಿ ಹೋದವು. ಆದರೂ ನಮ್ಮ ಹೃದಯದಲ್ಲಿ ಅದೇಕೆ ಅವರನ್ನು ಬಲ್ಲಪ್ರತಿಯೊಬ್ಬನ ಹೃನ್ಮಂದಿರದಲ್ಲಿ ಅವರು ಮನೆ ಮಾಡಿಕೊಂಡಿರುವರು. ಈ ಕಾಲದಲ್ಲಿಯ ಮಹಾಜನಗಳಲ್ಲಿ ಅವರು ದೊಡ್ಡವರಾಗಿದ್ದರು. ಬ್ರಿಟಿಶರಂಥ ಬಲಾಢ್ಯ ರಾಷ್ಟ್ರದ ವಿರುದ್ಧ ಅಹಿಂಸಾತ್ಮಕವಾಗಿಯೇ ಹೋರಾಡಿ ಅವರು ಹಿಂದುಸ್ಥಾನದಲ್ಲಿಯ ೪೦ ಕೋಟಿ ಪ್ರಜೆಗಳಿಗೆ ಸ್ವಾತಂತ್ರ್ಯವನ್ನು ದೊರಕಿಸಿಕೊಟ್ಟರೆಂದೇ ಅವರು ದೊಡ್ಡವರೆಂದು ಅನೇಕರು ಅವರನ್ನು ಸ್ತುತಿಸುತಿರುವರು. ಅವರ ಜೀವನದಲ್ಲಿ ಅದೊಂದು ಶ್ರೇಯಸ್ಕರವಾದ ಕಾರ್ಯವೆಂಬಲ್ಲಿ ಸಂದೇಹವಿಲ್ಲ. ಅವರ ಹೊರತು ಬೇರೆಯವರಿಗೆ ಅದು ಸಾಧ್ಯವಿರಲಿಲ್ಲೆಂಬುದೂ ನಿಃಸಂಶಯವಾದುದು. ಅವರು ನಮ್ಮ ಸಲುವಾಗಿಯೇ ಸ್ವಾತಂತ್ರ್ಯವನ್ನು ಸಂಪಾದಿಸಿದ್ದಾಗಿದೆ. ಆದರೆ ನಮಗೆ ಅತ್ಯಂತ ಲಾಭಕರವಾದ ರೀತಿಯಲ್ಲಿ ಆ ಸ್ವಾತಂತ್ರ್ಯದ ಉಪಯೋಗ ಮಾಡಿಕೊಳ್ಳುವುದು ನಿಮ್ಮಿಂದಾಗಲೊಲ್ಲದೆಂಬುದು ನಮ್ಮ ನಿದರ್ಶನಕ್ಕೆ ಬರುತ್ತಿದೆ. ಮಹಾತ್ಮಾಜಿಯವರೊಡನೆ ಆದ್ಯಾದಿ ಅವರಿಂದ ಕೂಡಿಕೊಂಡೇ ನಾವು ಕೆಲಸ ಮಾಡಿದ್ದರೂ ಇಂಥ ಪ್ರಚಂಡ ಶಕ್ತಿಯನ್ನು ಅವರು ಎಂತು ಸಂಪಾದಿಸಿದ್ದರು ಎಂಬುದನ್ನು ನಾವು ತಿಳಿದುಕೊಂಡಿಲ್ಲ. ಈ ಶಕ್ತಿಯು ಇಷ್ಟೊಂದು ವಜ್ರಸಮಾನ ಮತ್ತು ಬೇರೆ ಯಾರ ಜೀವನದಲ್ಲಿಯೂ ಕಾಣಸಿಗದ, ಅನುಪಮವಾಗಿದ್ದಿತು. ಅದೇನು ದೈಹಿಕ ಶಕ್ತಿಯಾಗಿರಲಿಲ್ಲೆಂಬುದು ನಮಗೆಗೊತ್ತು; ಅಲ್ಲದೆ ಅವರ ಬುದ್ಧಿಶಕ್ತಿಯ ಪರಿಣಾಮದಿಂದ ಅದು ಬಂದುದಲ್ಲ. ಆಧ್ಯಾತ್ಮಿಕ ಉನ್ನತಿಯಿಂದಲೆ ಅದು ಲಭ್ಯವಾದುದು. ಕೇವಲ ಬುದ್ಧಿಶಕ್ತಿಯ ಪರಿಣಾಮವಾಗಿ ಅದು ಬರುತಿದ್ದರೆ ನಮ್ಮ ದೇಶದಲ್ಲಿಯೂ ಪರದೇಶಗಳಲ್ಲಿಯೂ ಆಗಿ ಹೋದ ಮಹಾಬುದ್ಧಿವಂತರಿಗೆ ದೊರೆಯುತ್ತಿತ್ತು. ಆದರೆ ಅಂಥ ಜನರಾರಿಗೂ ತಮ್ಮ ಬುದ್ಧಿ ಶಕ್ತಿಯ ಬಲದಿಂದ ಯಾವದೇ ದೇಶದ ಸ್ವಾತಂತ್ರ್ಯವನ್ನು ಸಂಪಾದಿಸುವದು ಶಕ್ಯವಾಗಿರುವದಿಲ್ಲ. ತಮ್ಮ ಸಲುವಾಗಿ ಸ್ವಾತಂತ್ರ್ಯ ಸಂಪಾದಿಸುವದಕ್ಕಾಗಲಿ ಇಲ್ಲವೆ ಎರಡನೆಯವರ ಮೇಲೆ ಪ್ರಭುತ್ವ ನಡೆಸುವುದಕ್ಕಾಗಲಿ ಯುದ್ಧ ಮತ್ತು ರಕ್ತಪಾತ ಇವೆರಡೆ ಸಾಧನಗಳು ಈ ವರೆಗೆ ಮಾನವಲೋಕಕ್ಕೆ ಗೊತ್ತಿದ್ದವು.

ಆದುದರಿಂದ ಗಾಂಧೀಜಿಯ ಶಕ್ತಿಯು ಕೇವಲ ಆಧ್ಯಾತ್ಮಿಕ ಶಕ್ತಿಯಾಗಿದ್ದಿತು. ಪರಮಾತ್ಮನಲ್ಲಿ ಸರ್ವಾರ್ಪಣ ಬುದ್ಧಿಯಿಂದ ನಿಸ್ವಾರ್ಥ ವಿಶ್ವಾಸವನ್ನಿಟ್ಟು ಮತ್ತು ಆತ್ಮಸಂಯಮ ಮತ್ತು ಇಂದ್ರಿಯನಿಗ್ರಹಗಳ ಮಾರ್ಗದಿಂದಲೆ ಮಹಾತ್ಮರು ಇಂಥ ಶಕ್ತಿಯನ್ನು ಸಂಪಾದಿಸಿದ್ದರು. "ಸತ್ಯಶೋಧನ" ಎಂದು ಹೆಸರಿಟ್ಟು ಅವರೇ ಬರೆದ ಆತ್ಮಚರಿತ್ರೆಯನ್ನು ನೋಡಿದ್ದಾದರೆ, ಇಂಥ ಅತ್ಯದ್ಭುತ ಆಧ್ಯಾತ್ಮಿಕ ಸಂಸ್ಕೃತಿಯನ್ನು ಸಂಪಾದಿಸುವುದಕ್ಕಾಗಿ ಯಾವ ಮಾರ್ಗವನ್ನು ಅವರು ಅನುಸರಿಸಿದರು ಎಂಬುದು ಸ್ಪಷ್ಟವಾಗಿ ಗೊತ್ತಾಗುವದು. ಮಾತಿನಲ್ಲಿ ಕೃತಿಯಲ್ಲಿ ಅವರು ಆತ್ಮಸಂಯಮವು ಸ್ಪಷ್ಟವಾಗಿದ್ದಿತು. ದೈನಿಕ ಅಹಾರ ವಿಹಾರ ಪಾನಗಳಲ್ಲಿಯೂ ಅದು ಅತ್ಯಂತ ದೃಢವಾಗಿದ್ದಿತು. ಅವರು ಬಾಲ್ಯಾವಸ್ಥೆಯಿಂದಲೆ ಪ್ರಾರಂಭಿಸಿದ ಸತ್ಯಶೋಧನೆಯಲ್ಲಿ ಆಚಾರ ವಿಚಾರಗಳು ಅತ್ಯಂತ ಪರಿಶುದ್ಧವಾಗಿರಬೇಕಾದುದು ಅತ್ಯಂತ ಅವಶ್ಯವೆಂದು ತಮ್ಮ ಅಭಿಪ್ರಾಯವಾಗಿದೆಂದು ಹೇಳಿರುವರು. ಉಪವಾಸ ಮತ್ತು ಪ್ರಾರ್ಥನೆಯ ಮಾರ್ಗವನ್ನು ಅನುಸರಿಸುವದೂ ಅವಶ್ಯವೆಂದು ಅವರ ಅಭಿಪ್ರಾಯವಾಗಿದ್ದಿತು. ತಮ್ಮ ಜೀವನದ ಧ್ಯೇಯವಾವುದೆಂಬುದನ್ನು ಅವರು ಮೊಟ್ಟಮೊದಲು ತಿಳಿದುಕೊಂಡಿದ್ದರು. ಜನತೆಯ ಸೇವೆಯ ಮೂಲಕ ಜನಾರ್ದನನ ಸೇವೆ ಮಾಡುವದೇ ಆಧ್ಯಾತ್ಮಿಕ ಸ್ವಾತಂತ್ರ್ಯದ ನಿಶ್ಚಿತವಾದ ಮಾರ್ಗವೆಂದು ಅವರ ಅಭಿಪ್ರಾಯವಿತ್ತು. ಆದುದರಿಂದ ಅವರು ಬಳಲುತಿರುವ ಜನಾಂಗ ಸೇವೆಯ ಸಂಧಿಯನ್ನು ಹುಡುಕಿ ಅದರ ಸಂಕಷ್ಟಗಳ ನಿವಾರಣೆ ಮಾಡಲು ಪ್ರಯತ್ನಿಸುತಿದ್ದರು. ಕುಷ್ಠರೋಗಿಯಾದ ಬಡವನೊಬ್ಬನು ಅವರ ಮನೆಗೆ ಬಂದರೆ ಅವನಿಗೆ ಊಟಕ್ಕೆ ಹಾಕಿದ ಮಾತ್ರಕ್ಕೆ ಅವರ ಸಮಾಧಾನವಾಗುತಿರಲಿಲ್ಲ. ಆದರೆ ಅವರು ಅವನ ಗಾಯಗಳನ್ನೆಲ್ಲ ತೊಳೆದು ಕೆಲದಿನಗಳ ವರೆಗೆ ಅವನನ್ನು ಮನೆಯಲ್ಲಿ ಇಟ್ಟುಕೊಂಡು ಅನಂತರ ಅವನನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ಸಾಗಿಸುತಿದ್ದರು.

ಅವರು ದಕ್ಷಿಣ ಆಫ್ರಿಕೆಯಲ್ಲಿದ್ದಾಗ ಅತ್ಯಂತ ಉಗ್ರವಾದ ಪ್ಲೇಗ ಬೇನೆ ಹಿಂದೀಯರಿದ್ದ ವಸಾಹತಿನಲ್ಲಿ ಒಮ್ಮೆಲೆ ಸುರುವಾಯಿತು. ಅವರಿಗೆ ಈ ಸುದ್ದಿ ತಿಳಿದ ಕೂಡಲೆ ಅಲ್ಲಿಗೆ ಧಾವಿಸಿದರು; ಪ್ಲೇಗ ಬಂದ ರೋಗಿಗಳನ್ನೆಲ್ಲ ಬೇರೆ ಕಡೆ ಸಾಗಿಸಿ, ತೆರವಿದ್ದ ಮನೆಯಲ್ಲಿ ಅವರನ್ನು ಹಾಕಿಸಿದರು. ಅಲ್ಲದೆ ತಮ್ಮ ಜೀವಕ್ಕೆ ಬರಬಹುದಾದ ಗಂಡಾಂತರವನ್ನು ಕೂಡ ಲೆಕ್ಕಿಸದೆ ಹಲವಾರು ದಿನಗಳ ವರೆಗೆ ಅವರನ್ನು ಉಪಚರಿಸಿದರು. ವಿಲಾಯತಿ ಔಷಧಗಳ ಚಿಕಿತ್ಸೆ ಅವರಿಗೆ ಕೊಡಲಾಗುತಿತ್ತು. ಆದರೆ ಇಬ್ಬರನ್ನುಳಿದು ಉಳಿದವರೆಲ್ಲರೂ ಮರಣ ಹೊಂದಿದರು; ಆ ಇಬ್ಬರಿಗೆ ಮಾತ್ರ ಮಹಾತ್ಮರು, ತಮಗೆ ಚೆನ್ನಾಗಿ ಗೊತ್ತಿದ್ದ ಮಣ್ಣು ಮತ್ತು ನೀರಿನ ಚಿಕಿತ್ಸೆಯನ್ನು ಮಾಡುತಿದ್ದರು.

ಭಗವದ್ಗೀತೆಯ ಪಾರಾಯಣದಲ್ಲಿ ಅವರಿಗೆ ಶ್ರದ್ಧೆ ಬಹಳ. ಇಡೀ ಜೀವನದಲ್ಲಿ ಅದನ್ನು ತಮ್ಮ ಮಾರ್ಗದರ್ಶಕವೆಂದು ಅವರು ಇಟ್ಟುಕೊಂಡಿದ್ದರು. ಈ ಪುಸ್ತಕದಲ್ಲಿ ಬೋಧಿಸಿದ ತತ್ವಗಳು ಅವರ ಜೀವನದ ತಳಹದಿಯಾಗಿದ್ದವು. ಸತ್ಯ, ಅಹಿಂಸಾ, ಅಪರಿಗ್ರಹ, ಬ್ರಹ್ಮಚರ್ಯ ಈ ಮೊದಲಾದ ಮಹಾ ತತ್ವಗಳು ಅವರಿಗೆ ಕರತಲಾಮಲಕವಾಗಿದ್ದವು. ಭಗವದ್ಗೀತೆಯ ಅಖಂಡ ಅಭ್ಯಾಸದಿಂದ ಸುದೃಢ ಮನಸ್ಸು ಮತ್ತು ನಿಶ್ಚಲ ಮನೋಧೈರ್ಯ ಇವುಗಳಿಂದ ಇದು ಅವರಿಗೆ ಶಕ್ಯವಾಗಿದ್ದಿತು. ಎಲ್ಲಿಂದಲೆ ದೊರೆಯಲಿ ಸತ್ಯ ಮತ್ತು ಉಚ್ಚ ತತ್ವಗಳನ್ನು ಅರಗಿಸಿಕೊಳ್ಳಲು ಅವರು ಯಾವಾಗಲೂ ಸಿದ್ಧರಿರುತಿದ್ದರು. ದಕ್ಷಿಣ ಆಫ್ರಿಕೆಯಲ್ಲಿ ಅವರ ಸಹಕಾರಿಗಳಾಗಿದ್ದ ಶ್ರೀ. ಪೋಲಕರು, ರಸ್ಕಿನ್‌ರು ಬರೆದ 'ಅನ್‌ಟುದ ಲಾಸ್ಟ' ಎಂಬ ಪುಸ್ತಕವನ್ನು ಪ್ರವಾಸದಲ್ಲಿದ್ದಾಗ ರೇಲ್ವೆ ಡಬ್ಬಿಯಲ್ಲಿ ಕೊಟ್ಟಿದ್ದರು. ಇಡೀ ರಾತ್ರಿಯೆಲ್ಲ ಗಾಂಧೀಜಿ ಅದನ್ನು ಓದಿ ಮುಗಿಸಿಬಿಟ್ಟರು. ಇಷ್ಟೇ ಅಲ್ಲದೆ, ಅದರಲ್ಲಿ ಹೇಳಿದ ಸತ್ಯದ ಬಗ್ಗೆ ದೃಢ ನಿರ್ಧಾರಕ್ಕೆ ಬಂದು, ನಿರ್ದಿಷ್ಟ ಸ್ಥಳಕ್ಕೆ ಹೋದ ಮರುದಿನದಿಂದ ಆ ತತ್ವಗಳನ್ನೆಲ್ಲ ಆಚರಣೆಯಲ್ಲಿ ತರಲು ಪ್ರಾರಂಭಿಸಿದರು.

ಅಪರಿಗ್ರಹ ತತ್ವವು ಅವರ ಜೀವನವನ್ನು ವ್ಯಾಪಿಸಿಬಿಟ್ಟಿದ್ದಿತು. ತತ್ಪರಿಣಾಮವಾಗಿ ಅವರಿಗಿದ್ದ ಆಸ್ತಿಪಾಸ್ತಿಗಳ ಮೇಲಿನ ಒಡೆತನವನ್ನೆ ಅವರು ಬಿಟ್ಟುಗೊಟ್ಟರು. ದಕ್ಷಿಣ ಆಫ್ರಿಕೆಯಲ್ಲಿ ವಕೀಲಿಯಿಂದ ಗಳಿಸಿದ ಹಣಕ್ಕೆ ತಾವು ಧರ್ಮದರ್ಶಿ ಮಾತ್ರಎಂದು ಅವರು ಭಾವಿಸಿದ್ದರು; ಮತ್ತು ತಮಗೆ ಹಾಗು ತಮ್ಮ ಕುಟುಂಬದ ಉದರಪೋಷಣೆಗೆ ತೀರ ಅವಶ್ಯವಾದುದಷ್ಟನ್ನೇ ಇಟ್ಟುಕೊಂಡು ಉಳಿದ ಹಣವನ್ನೆಲ್ಲ ಸಾರ್ವಜನಿಕರ ಕಲ್ಯಾಣಕ್ಕಾಗಿ ವಿನಿಯೋಗಿಸುತಿದ್ದರು.

ಪ್ರಾಣಿಮಾತ್ರರನ್ನೆಲ್ಲ ಅವರು ಪ್ರೀತಿಸುತಿದ್ದರು. ಎರಡನೆಯವರಿಗೆ ಕಾಯಾ ಮನಸಾ

–೩೧ನೆಯ ಪುಟಕ್ಕೆ

ಬಾಪುವಿನ ಜೀವನದ ಗುರಿ*

ಅನುವಾದಕರು : ಸುಬ್ರಹ್ಮಣ್ಯ, ವಿಶಾರದ

ಗಾಂಧೀಜಿಯವರು ತಾವು ಸನಾತನಿ ಹಿಂದುವೆಂದು ಹೇಳಿಕೊಂಡು ಅದಕ್ಕಾಗಿ ಹೆಮ್ಮೆಪಡುತ್ತಿದ್ದರು. ಏಕೆ ಗೊತ್ತೆ? ಅವರು ನಿಜವಾದ ಹಿಂದೂ ಆಗಿದ್ದರು. ಹಿಂದಿನ ಶಾಸ್ತ್ರಕಾರರು ಹೇಳಿರುವ ಎಲ್ಲ ವೈದಿಕ ನಿಯಮಗಳೂ ಅವರಲ್ಲಿ ಮೂರ್ತಿಮತ್ತವಾಗಿದ್ದವು. ಗಾಂಧೀಜಿ ಹಿಂದೂ ಧರ್ಮದ ಈಗಿನ ಅಂಧ ವಿಶ್ವಾಸ ಹಾಗೂ ಕೆಟ್ಟ ನಡವಳಿಕೆಗಳಿಂದ ಮುಸುಕು ಕವಿದು ತೇಜೋಹೀನವಾಗಿದ್ದ ಅಲ್ಲದೆ ರೂಢಿಯ ಹಿಡಿತದಲ್ಲಿ ಸಿಕ್ಕಿ ಪ್ರಾಣವನ್ನೇ ಕಳೆದುಕೊಂಡಿದ್ದ ಉತ್ತಮ ಸಿದ್ಧಾಂತಗಳನ್ನು ತಮ್ಮ ದೈನಿಕ ಜೀವನದಲ್ಲಿ ಉಪಯೋಗಿಸಿ ಅವುಗಳ ಸಾರ್ಥಕತೆಯನ್ನು ತೋರಿಸಿಕೊಟ್ಟರು. ವ್ಯವಹಾರದಿಂದ ಮರೆಯಾಗಿ ಶಾಸ್ತ್ರಪುರಾಣಗಳಲ್ಲಿ ಹುದುಗಿದ್ದ ಈ ಸಿದ್ಧಾಂತಗಳು ಗಾಂಧೀಜಿ ಅವರ ನಡೆವಳಿಕೆಯಿಂದ ಪುನರುದ್ಧಾರ ಹೊಂದಿದವು. ಹಿಂದೂ ಶಾಸ್ತ್ರದ ವಾಕ್ಯಗಳು ಮತ್ತೆ ಉಜ್ಜೀವಿಸಿದವು. ಸ್ವಧರ್ಮ ಪಾಲನೆ, ಸರ್ವಧರ್ಮಸಮನ್ವಯ, ಅಲ್ಲದೆ ಮನೋವಾಕ್ಕಾಯ ಕರ್ಮಗಳ ನಿಷ್ಠೆ ಹಾಗೂ ಪ್ರೇಮ, ಅಹಿಂಸೆ, ಅಪರಿಗ್ರಹ, ತ್ಯಾಗ ಮತ್ತು ಸಾಹಸಶಕ್ತಿ, ಎಲ್ಲ ಜೀವಗಳಲ್ಲಿ ನಿರ್ವೈರಭಾವ ಮೊದಲಾದುವುಗಳನ್ನು ಹೊಸ ರೂಪ ಮತ್ತು ಅರ್ಥದಲ್ಲಿ ಉಪಯೋಗಿಸುವ ಮಾರ್ಗ ಕಂಡು ಬಂತು. ಇದು ವರೆಗೆ ಧರ್ಮದ ತತ್ವಗಳನ್ನು ಕೇವಲ ಕೆಲಸಕ್ಕೆ ಬಾರದವುಗಳೆಂದು ಪೂಜಿಸುತ್ತಿದ್ದ ದಿನಹೋಗಿ ಅವು ವ್ಯವಹಾರಕ್ಕೂ ಉಪಯೋಗಿಗಳೆಂದು ನಮಗೆ ಅವರ ಜೀವನದಲ್ಲಿ ಸ್ಪಷ್ಟವಾಯಿತು. ಅವರು ತಮ್ಮ ದಿನಚರಿಯಿಂದ ಹಿಂದೂ ಧರ್ಮದ ನಿಜವಾದ ನಿದರ್ಶನ ಎಂತಹುದೆಂಬುದನ್ನು ನಿರ್ಧರಿಸಿ ಕೊಟ್ಟರು. ಹಣ, ಮರ್ಯಾದೆ, ವಿದ್ಯೆ, ಬುದ್ಧಿ, ಅಧಿಕಾರ ಇವೆಲ್ಲವುದಕ್ಕಿಂತ ನಡವಳಿ ಮೇಲಿನದು, ನಡವಳಿಕೆಯೇ ಮನುಷ್ಯನನ್ನು ದೊಡ್ಡವನನ್ನಾಗಿ ಮಾಡುವುದು. ಅಲ್ಲದೆ ಚರಿತ್ರವಂತನೆನಿಸುವುದೇ ಮನುಷ್ಯಜೀವನದ ಗುರಿ. ಚರಿತ್ರಬಲ ಕ[illegible]ಳಾದುದರಿಂದಲೇ ಇಂದು ಹಿಂದೂ ಜಾತಿಯ ನೈನಿಕ ಅಧಃಪಾತವಾಗಿದೆ. ಈ ಪತನದಿಂದಲೇ ನಾವು ಸಂಖ್ಯೆಯಲ್ಲಿ ಹೆಚ್ಚಾಗಿದ್ದರೂ ಆಡು ಕುರಿಗಂತೆ ಹೆರವರ ಶಾಸನಕ್ಕೊಳಪಟ್ಟಿದ್ದೆವು. ಗಾಂಧೀಜಿ ತಮ್ಮ ನಡೆನುಡಿಗಳಿಂದ ನಮ್ಮಲ್ಲಿನ ನೈತಿಕ ಭಾವನೆಯನ್ನು ಎಚ್ಚರಿಸಲು ಮೃತ್ಯುಪರ್ಯಂತ ಪ್ರಯತ್ನಿಸಿದರು, ಅಂತೆಯೇ ಅದರ ಮಟ್ಟವನ್ನು ಮೇಲೇರಿಸಿದರು. ವಿದೇಶಿಗಳೊಡನೆ ಯುದ್ಧಮಾಡುವಾಗಲೂ ಅವರು ಮೋಸವಂಚನೆಗಳನ್ನು ಉಪಯೋಗಿಸಬಾರದೆನ್ನುವಷ್ಟು ಆಚರಣೆಯ ಪವಿತ್ರತೆಗೆ ಗಮನ ಕೊಡುತ್ತಿದ್ದರು.


ರಾಜನೀತಿ ಅವರ ಜೀವನದಿಂದ ಬೇರೆಯಾಗಿರಲಿಲ್ಲ. ಜೀವನದಲ್ಲಿ ಒಳ್ಳೆಯ ನೀತಿ ಹಾಗೂ ವ್ಯವಹಾರಕ್ಕೆ ಸ್ಥಾನವಿರುವಂತೆಯೇ ರಾಜನೀತಿ ಹಾಗೂ ಸಮಾಜನೀತಿಗೂ ಇದೆ. ರಾಜನೀತಿಯಾದರೇನು? ಈ ಸಮಾಜ ನೀತಿಯಾದರೇನು? ಎಲ್ಲದರ ಮಾನದಂಡ ನೈತಿಕ ಜೀವನವೇ. ವೈಯಕ್ತಿಕ ಜೀವನದಲ್ಲಿ ನೀತಿವಂತನಾಗಿದ್ದು ರಾಜನೀತಿಯಲ್ಲಿ ಕೆಟ್ಟ ದಾರಿಯನ್ನವಲಂಬಿಸುವುದು ಗಾಂಧಿಯವರ ಕಲ್ಪನೆಯಲ್ಲೂ ಇರಲಿಲ್ಲ. ಆದುದರಿಂದಲೇ ಯಾವಾಗಲೂ ಹೃದಯ ಪರಿಶುದ್ಧವಾಗಿರಬೇಕೆನ್ನುತ್ತಿದ್ದರು. ಹೃದಯ ನಿರ್ಮಲವಾಗಿದ್ದ ಹೊರತು ದೇಶವಾಸಿಗಳಲ್ಲಿ ಪ್ರೇಮ ಹಾಗೂ ಸದ್ಭಾವನೆಯು ಉಂಟಾಗಲಾರದು. ಅತ್ಯಾಚಾರ, ಹಿಂಸೆ ಇವುಗಳ ಸೇಡನ್ನು ಅಂತಹುದೇ ಕೆಟ್ಟ ಕೆಲಸಗಳಿಂದ ತೀರಿಸತಕ್ಕದ್ದಲ್ಲ. ಎರಡು ಕೆಟ್ಟ ಕೆಲಸಗಳು ಸೇರಿ ಎಂದಿಗೂ ಒಂದು ಒಳ್ಳೆಯ ಕೆಲಸವಾಗಲಾರದು.

ತಾವು ಮೇಲ್ಮಟ್ಟದ ನೈತಿಕ ಹಾಗೂ ಆಧ್ಯಾತ್ಮಿಕ ಜೀವನ ನಡೆಸುತ್ತಿದ್ದರೂ ಮಾನವ ಜೀವನದ ಅತ್ಯಲ್ಪ ವಿಷಯಗಳನ್ನು ಮರೆತಿರಲಿಲ್ಲ. ಅವುಗಳನ್ನು ಆಧ್ಯಾತ್ಮಿಕ ವಿಚಾರಗಳಷ್ಟೇ ಗಹನವಾಗಿ ಆಲೋಚಿಸುತ್ತಿದ್ದರು. ಅವರ ಮನಸ್ಸು ಅಧ್ಯಾತ್ಮ ವಿಷಯಗಳನ್ನು ಆಲೋಚಿಸುತ್ತಿದ್ದರೂ ಅವರ ಪಾದಗಳು ಭೂಮಿಯ ಮೇಲೇ ಇರುತ್ತಿದ್ದವು. ರಾಜನೀತಿಚರ್ಚೆ ಹಾಗೂ ಅಧ್ಯಾತ್ಮಚಿಂತೆಯಷ್ಟೇ ಅವರಿಗೆ ತಮ್ಮ ಕೈಯಿಂದ ನೂಲುವುದು, ಮಲಮೂತ್ರಗಳನ್ನು ತೆಗೆದು ಹೊರಹಾಕುವುದು ಮಹತ್ವದ್ದಾಗಿದ್ದವು. ಮನುಷ್ಯಜೀವನ ಒಂದು ಪೂರ್ಣ ಐಕ್ಯರೂಪವಾಗಿದ್ದಲ್ಲಿ ಅದರಲ್ಲಿ ಒಂದು ವಿಷಯ ಹೆಚ್ಚು ಮತ್ತೊಂದು ಕಡಿಮೆ ಹೇಗೆ? ಅನ್ನುತ್ತಿದ್ದರು. ಮತ್ತು ಅವರು ಜೀವನವನ್ನು ಅದೇ ರೀತಿಯಲ್ಲಿ ಅಂಗೀಕರಿಸಿದ್ದರು.

ಗಾಂಧೀಜಿ ಜೀವನಪರ್ಯಂತ ಸತ್ಯದ ಸಮೀಕ್ಷೆ ಹಾಗೂ ಪರೀಕ್ಷೆಯಲ್ಲಿ ತೊಡಗಿದ್ದರು. ಅವರು ತಮ್ಮ ಪ್ರಯೋಗ ಹಾಗೂ ಪರೀಕ್ಷೆಗಳಿಂದ ತಾವು ಅನುಭವಿಸಿದುದನ್ನೇ ಜನಗಳಿಗೂ ಬೋಧಿಸಿದರು. ಅವರ ಈ ಪ್ರಯೋಗ ಜೀವನದ ಎಲ್ಲ ಕ್ಷೇತ್ರಗಳಲ್ಲೂ ಒಂದೇ ರೀತಿಯಲ್ಲಿ ಸಾಗಿತ್ತು. ದುರ್ಬಲ ಮನುಷ್ಯನ ಸಹಜವಾದ ಅಶಕ್ತತೆ ಏನೆಂಬುದನ್ನು ಚೆನ್ನಾಗಿ ಅರಿತಿದ್ದರು. ಅಂತೆಯೇ ಅವರ ಹೃದಯದಲ್ಲಿ ಅಪಾರವಾದ ಸಹಾನುಭೂತಿ ತುಂಬಿ ತುಳುಕಾಡುತ್ತಿತ್ತು. ಅವರು ನಮ್ಮ ಮೇಲೆ ಯಾವುದೇ ರೀತಿಯ ಬಲಾತ್ಕಾರ ಜಬರ್ದಸ್ತಿ ಹೇರಲು ಇಷ್ಟಪಡುತ್ತಿರಲಿಲ್ಲ. ನಮ್ಮಲ್ಲಿ ಶುದ್ಧ ಬುದ್ಧಿ ಹಾಗೂ ಅಂತಃಕರಣವನ್ನು ಜಾಗ್ರತಗೊಳಿಸಿ ತನ್ಮೂಲಕ ನಾವು ಸದಾಚರಣೆಗಳನ್ನು ಮಾಡುವಂತೆ ಪ್ರೇರೇಪಿಸುತ್ತಿದ್ದರು. ನೈತಿಕ ಜೀವನ ಹಾಗೂ ಆತ್ಮಬಲವನ್ನು ಸಾಧು ಸಂತರೇ ಪಡೆಯಬಲ್ಲವರು, ಎಂದು ತಿಳಿದಿದ್ದ ತಿಳುವಳಿಕೆಯನ್ನು ಹೋಗಲಾಡಿಸಿ ದೃಢ ಸಂಕಲ್ಪವೊಂದಿದ್ದರೆ ಸಾಧಾರಣರೂ ಪಡೆಯಬಲ್ಲರೆಂದು ತಮ್ಮ ಜೀವನ ಲಕ್ಷ್ಯ ಹಾಗೂ ಆಚರಣೆಗಳಿಂದ ತೋರಿಸಿಕೊಟ್ಟರು. ನೈತಿಕ ಜೀವನ ಪಡೆಯಲು ಸಾಧನೆಯೇ ಮುಖ್ಯವಾದುದು. ಇಂತಹ ಸಾಧನೆಯನ್ನು ಪ್ರತಿಯೊಬ್ಬನೂ ತನ್ನ ಜೀವನದಲ್ಲಿ ಅಷ್ಟು ಇಷ್ಟು ಮಾಡಬಲ್ಲನು. ಸಾಧನೆಯಲ್ಲಿ ಮುನ್ನಡೆದಷ್ಟು ಮಾರ್ಗ ಪ್ರಶಸ್ತವಾಗುವುದು; ಆತ್ಮವಿಶ್ವಾಸ ಹೆಚ್ಚುವುದು. ಈ ಸಾಧನೆಯನ್ನು ಪ್ರತಿಯೊಬ್ಬ ಸಾಧಾರಣ ಮನುಜನು ತನ್ನ ನಿತ್ಯಜೀವನದ ಜತೆಯಲ್ಲೇ ಪರಿವಾರ ಸಮೇತನಾಗಿದ್ದುಕೊಂಡು ಮಾಡಬಹುದು. ಅದಕ್ಕಾಗಿ ಕಟ್ಟುನಿಟ್ಟಾದ ಗೃಹತ್ಯಾಗ ಹಾಗೂ ಏಕಾಂತಸೇವನೆಯ ಅವಶ್ಯಕತೆ ಬೇಕಿಲ್ಲ. ಗಾಂಧೀಜಿಗೂ ಅವರಿಗಿಂತಲೂ ಹಿಂದಿನ ಸತ್ಯಸಾಧಕರಿಗೂ ಇರುವ ದೊಡ್ಡ ವ್ಯತ್ಯಾಸ ಇದೇ. ತಾವು ತಮ್ಮ ಜೀವನದಲ್ಲಿ ಪಡೆದ ಅತ್ಯುತ್ತಮ ಆತ್ಮಾನುಭವವನ್ನು ತಮ್ಮಲ್ಲೇ ಉಳಿಸಿಕೊಳ್ಳದೆ ಸಾಮಾನ್ಯರೂ ಪಡೆಯಲು ಅನುಕೂಲ ಮಾಡಿಕೊಟ್ಟರು.

ಮಹಾತ್ಮರ ಜೀವನ ನಮ್ಮ ಹಾಗೂ ಮುಂದಿನ ನಮ್ಮ ಪೀಳಿಗೆಗೂ ಉತ್ಕೃಷ್ಟವಾದ ಪಥಪ್ರದರ್ಶಕವಾಗಿರುವುದು. ಇದೊಂದು ಕ್ಷೀಣವಾಗದ ಯಾವಾಗಲೂ ಬೆಳಗುವ ಪ್ರಕಾಶವು. ಭಾರತವು ಈ ಬೆಳಕನ್ನಾಶ್ರಯಿಸೇ ತನ್ನ ಸ್ವರೂಪಪ್ರಾಪ್ತಿ ಹಾಗೂ ಆತ್ಮಾನುಸಂಧಾನವನ್ನು ಪಡೆಯಬೇಕು. ನಾವು ನಮ್ಮ ರಾಷ್ಟ್ರೀಯ ಜೀವನದಲ್ಲಿ ಈ ಶಾಂತ ಹಾಗೂ ಸ್ನಿಗ್ಧೋಜ್ವಲವಾದ ಪ್ರಕಾಶದಿಂದಲೇ ಮುನ್ನಡೆಯಬೇಕು. ಆಗಲೇ ನಮ್ಮ ವೈಶಿಷ್ಟ್ಯ. ಹಾಗಲ್ಲದೇ ಆಶ್ಚರ್ಯವನ್ನುಂಟುಮಾಡುವ ಕ್ಷೀಣ ಪ್ರಕಾಶವನ್ನಾಶ್ರಯಿಸಿದರೆ, ಪ್ರಪಂಚದ ಅನ್ಯ ಜನಾಂಗಕ್ಕೆ ನಮ್ಮದೇನೂ ಉತ್ಕೃಷ್ಟ ಜೀವನವಾಗಲಾರದು. ಮಹಾತ್ಮಾ ಗಾಂಧಿಯವರ ಆತ್ಮಬಲಿದಾನದ ನಂತರ ಭಾರತ ದೇಶೀಯರು ಅವರು ತೋರಿಸಿದ ಶ್ರೇಯೋಮಾರ್ಗವನ್ನವಲಂಬಿಸುವರೋ ಇಲ್ಲ ಪಶ್ಚಿಮದ ಮನೋಮೋಹಕ ಪ್ರೇಮಪಥದಲ್ಲಿ ಮುನ್ನಡೆಯುವರೋ? ಎಂಬುದೇ ಪ್ರಶ್ನೆ. ಇವರ ಉತ್ತರವೇ ಮಹಾತ್ಮರ ಜೀವನ ಲಕ್ಷ್ಯದ ಸಫಲತೆಯ ಹೆಗ್ಗುರುತು.

(* ‹ಕಿಶೋರ› ದಿಂದ)



[ಕಚೇರಿಗೆ ಬಂದ ಎಲ್ಲ ಪುಸ್ತಕಗಳನ್ನು ಸಾಭಾರದಿಂದ ಸ್ವೀಕರಿಸಿದ ಉಲ್ಲೇಖ ಮಾಡುವೆವಾದರೂ ಆ ಎಲ್ಲವುಗಳ ವಿಮರ್ಶೆ ಕೊಡಲಿಕ್ಕಾಗದೇ ಇರುವೆವೆಂದು ಗ್ರಹಿಸಕೂಡದಾಗಿ ಈ ಮೂಲಕ ತಿಳಿಸಬಯಸುತ್ತೇವೆ -ಸಂ]

ಪತ್ರಿಕಾವ್ಯವಸಾಯ

ಬರೆದವರು ಪ್ರೊ. ಶಾ. ಯ. ಧಾರವಾಡಕರ, ಎಂ. ಎ. ಪ್ರಕಾಶಕರು ಪ್ರೊ. ಎನ್. ಆರ್. ಕುಲಕರ್ಣಿ, ಕೆ. ಈ. ಬೋರ್ಡ ಆರ್ಟ್ಸ ಕಾಲೇಜ್, ಜನತಾಶಿಕ್ಷಣ ಸಮಿತಿ, ಧಾರವಾಡ. ಪುಟ ೬೪, ಬೆಲೆ ೧೨ ಆಣೆ.

ಪತ್ರಿಕಾವ್ಯವಸಾಯವನ್ನು ಕುರಿತು ಬರೆಯಲು ಈ ಪುಸ್ತಕದಲ್ಲಿ ಪ್ರಯತ್ನಿಸಲಾಗಿದೆ. ಇದನ್ನು ಸಾಮಾನ್ಯ ಪ್ರೌಢರಿಗೆಂದು ಬರೆದುದು. ಮೊದಲು ವೃತ್ತಪತ್ರಿಕೆಗಳ ಮಹತ್ವವನ್ನು ವಿವರಿಸಿ, ಅನಂತರ ಇಂಗ್ಲಂಡಿನ ವೃತ್ತಪತ್ರಿಕೆಗಳ ಇತಿಹಾಸವನ್ನು ಹ್ರಸ್ವವಾಗಿ ಹೇಳಿ ಭಾರತದ ಪತ್ರಿಕಾ ವ್ಯವಸಾಯದತ್ತ ಲೇಖನ ಹೊರಳಿದೆ. ಇದರಲ್ಲಿ ಮೊದಲು, ಅಜ್ಞಾನದಲ್ಲಿ ಮುಳುಗಿದ ದೇಶಬಾಂಧವರನ್ನು ಎಚ್ಚರಿಸಲು ಅವು ಹೇಗೆ ಹೆಣಗಿದವು, ಸ್ವಾತಂತ್ರ್ಯ ಚಳವಳಿಕ್ಕೆ ಅವು ಹೇಗೆ ಬೆಂಬಲವಿತ್ತವು, ಮುಂತಾದವನ್ನು ಹೇಳಿ, ಕರ್ನಾಟಕದಲ್ಲಿಯ ವೃತ್ತಪತ್ರಿಕೆಗಳ ವೃತ್ತವನ್ನು ಹೇಳಲಾಗಿದೆ.

ಇಂಗ್ಲಂಡಿನ ವೃತ್ತಪತ್ರಗಳ ಬಗ್ಗೆ ಹೇಳಿರುವ ಔಚಿತ್ಯಕ್ಕಿಂತ ಪರಿಶಿಷ್ಟಾದಿಗಳನ್ನು ಕೊಡದಿದ್ದ ದೋಷವೇ ಹೆಚ್ಚಿನದೆಂದು ತೋರುತ್ತದೆ. ಕರ್ನಾಟಕದಲ್ಲಿಯ ಹಳೆಯ ಪತ್ರಿಕೆ. ಗಳನ್ನು ಉಲ್ಲೇಖಿಸುವಾಗ ವಿಜಾಪುರದಿಂದ ಹೊರಡುತ್ತಿದ್ದ, ಈಗಲೂ ಅಸ್ತಿತ್ವದಲ್ಲಿರುವ ಸ್ವಾತಂತ್ರ್ಯ ಚಳವಳದಲ್ಲಿ ವಿಶೇಷ ಶ್ರಮ ವಹಿಸಿದ ಮತ್ತು ದಿವಂಗತ ದೇಶಪಾಂಡೆ ಜಯರಾಯರ ಸಂಪಾದಕತ್ವದಲ್ಲಿ ಜಿಲ್ಲೆಯಲ್ಲೆಲ್ಲ ಜಾಗ್ರತೆಯನ್ನುಂಟು ಮಾಡಿದ "ಕರ್ನಾಟಕ ವೈಭವ"ದ ಹೆಸರೆತ್ತದಿರುವುದು ಆಶ್ಚರ್ಯಕರವಾಗಿದೆ. ಅದೇ ಪ್ರಕಾರ ಧಾರವಾಡದ ಪತ್ರಿಕೆಗಳನ್ನು ವಿವರಿಸುವಾಗ, ಅಸಹಕಾರಯುಗದಿಂದ ಇಂದಿನ ವರೆಗೆ ಕನ್ನಡ ತಾಯಸೇವೆ ಮಾಡುತ್ತ ಬಂದಿರುವ "ಕರ್ಮವೀರ"ದ ಉಲ್ಲೇಖ ಮಾಡದಿರುವುದು ಮತ್ತೊಂದು ನ್ಯೂನತೆ. ಕರ್ಮವೀರದ "ಭೂರಕ್ತಸಾಯ ಸ್ವಾಹಾ" ಮೊದಲಾದ ಉಗ್ರವಾದ ಲೇಖನಗಳನ್ನೋದಿ ಅದರಸಂಪಾದಕರನ್ನು ಕರೆದು ಕಲೆಕ್ಟರ್ ಪೆಂಟರರು, "I am thirsty of your blood ನನಗೆ ನಿಮ್ಮ ರಕ್ತ ಕುಡಿಯುವ ದಾಹವಡಸಿದೆ" ಎಂದುದು ಪ್ರಸ್ತುತ ಲೇಖಕರಿಗೆ ಗೊತ್ತಿರಲಿಕ್ಕಿಲ್ಲ. ಹಾಗೆ ಗೊತ್ತಿದ್ದಿದ್ದರೆ ಪ್ರೌಢ ಕನ್ನಡ ನಾಗರಿಕರಿಗೆ ನಮ್ಮ ಪತ್ರಿಕೆಗಳು ಮಾಡಿದ ಸೇವೆ ತ್ಯಾಗಗಳನ್ನು ಸ್ವಲ್ಪ ವಿಶದವಾಗಿ ಪರಿಚಯ ಮಾಡಿಕೊಡುತ್ತಿದ್ದರು. ಗಾಂಧಿಯವರ ಸಂದೇಶವನ್ನು ಜನತೆಗೆ ಮುಟ್ಟಿಸಲು ಸೊಂಟಕಟ್ಟಿದ ಮಂಗಳವೇಡು ಮತ್ತು ಗೆಳೆಯರು ಹೊರಡಿಸಿದ ಕನ್ನಡ ನವಜೀವನದ ಹೆಸರೆತ್ತದಿರುವುದು ಪುಸ್ತಕದ ಪ್ರಯೋಜನ ಮತ್ತು ಅಂದಗಳಿಗೆ ಭಂಗ ತಂದಿದೆಯೆನಬೇಕಾಗಿದೆ. ಬಾಗಲಕೋಟೆಯವರೇ ಆಗಿರುವ ಪ್ರಸ್ತುತ ಲೇಖಕರಿಗೆ ಕನ್ನಡ ನವಜೀವನವು ಗಾಂಧೀ ಸಂದೇಶವನ್ನು ಬೀರಲು ಮಾಡಿದ ಪ್ರಚಾರಕಾರ್ಯದ ವಿಸ್ಮರಣೆ ಎಂತಾಯಿತೋ ತಿಳಿಯದು? ಮೇಲಿನ ಅನುಲ್ಲೇಖನ ದೋಷದ ಜೊತೆಗೆ ಅಪಲಾಪದೋಷವೂ ಸೇರಿಕೊಂಡುದಕ್ಕೆ ಬಾಗಲಕೋಟೆಯಿಂದ ಶ್ರೀ ಬುರ್ಲಿ ಶ್ರೀನಿವಾಸಾಚಾರ್ಯರ ಸಂಪಾದಕತ್ವದಲ್ಲಿ ಹೊರಡುತ್ತಿದ್ದುದು ಮಧುರವಾಣಿ ಎಂದು ಹೇಳಿದುದು ಒಂದು ನಿದರ್ಶನ. ಅದು ಮಧುರವಾಣಿಯಲ್ಲ, ಶ್ರೀಕೃಷ್ಣಸಂದೇಶವು. ಮಧುರವಾಣಿಯು, ಶ್ರೀನಿವಾಸಾಚಾರ್ಯರು ಬೆಳಗಾವಿಗೆ ಹೋದ ಬಳಿಕ ಹೊರಡಿಸಲಾರಂಭಿಸಿದ ಸಂಸ್ಕೃತ ಪತ್ರಿಕೆ. ಬಂಗಾಲದ ಪತ್ರಿಕೆಗಳು ಪರಕೀಯ ಬಂಧವಲಿನವು ಇದ್ದವೆಂಬುದು ಮತ್ತೊಂದು ಮಿಥ್ಯಾಲಾಪ:

ಕರ್ನಾಟಕದಿಂದ ಹೊರಡುತ್ತಿದ್ದ ಆಂಗ್ಲ ಪತ್ರಿಕೆಗಳಲ್ಲಿ ಧಾರವಾಡದಿಂದ ಶ್ರೀ ದಿವಾಕರರ ಸಂಪಾದಕತ್ವದಲ್ಲಿ ಹೊರಡುತ್ತಿದ್ದ ನವಶಕ್ತಿ ಬಹು ಮುಖ್ಯವಾದದ್ದು. ಅದರ ಹೆಸರನ್ನು ಎತ್ತದಿದ್ದುದು ಆಶ್ಚರ್ಯಕರ! ಹೀಗೆ ಕರ್ನಾಟಕದ ಪತ್ರಿಕೆಗಳ ಬಗ್ಗೆ ಸಾಮಾನ್ಯ ಕನ್ನಡ ಪ್ರೌಢರಿಗೆ ಹೆಚ್ಚು ಪರಿಚಯ ಮಾಡಿಕೊಡುವುದರ ಬದಲು, ಅವರಿಗೆ ಸ್ವಲ್ಪ ಅನವಶ್ಯಕವೆನಿಸಬಹುದಾದ ಇಂಗ್ಲಂಡಿನ ವೃತ್ತಪತ್ರಿಕೆಗಳ ವಿಚಾರ, ವೃತ್ತಪತ್ರಿಕೆಗಳ ಸಮಸ್ಯೆ ಮುಂತಾದ ವಿಷಯಗಳನ್ನು ಎತ್ತಿರುವುದರಲ್ಲಿ ಯಾವ ಔಚಿತ್ಯವಿದೆಯೋ ಪ್ರೊಫೆಸರರೇ ಬಲ್ಲರು. ವೃತ್ತಪತ್ರಿಕಾವ್ಯವಸಾಯವೆಂಬ ವಿಶಾಲ ಶಿರೋನಾಮವನ್ನಿಟ್ಟುಕೊಂಡು ಈ ಅಲ್ಪಸಂಖ್ಯ ಪುಟಗಳಲ್ಲಿ ಮುಖ್ಯಾಮುಖ್ಯ ವಿವೇಕವಿಲ್ಲದೆ "ನಾಲ್ಕು ಮಾತು"ಗಳನ್ನು ಬರೆದಿರುವುದು ಕೇವಲ "ಬರಹ"ವಷ್ಟೇ ಆಗಿದೆಯಲ್ಲದೆ "ಪ್ರೊಫೆಸರರ ಬರಹ" ಎನಿಸಿಲ್ಲ. ಇವರ ಮೇಲೆ ಈ ಪ್ರೊಫೆಸರರು ವಿಶ್ವಸ್ಥ, ಮಿಲಿಯನ್, ಗೃಹಿಸಿದರೆ, ಪೂರ್ವಗೃಹ, ಮೊದಲಾದ ಇಷ್ಟೊಂದು ಅಪಾರ್ಥಕ ಮತ್ತು ಅಗ್ರಾಹ್ಯ ಶಬ್ದಗಳನ್ನು ಈ ಚಿಕ್ಕ ಪುಸ್ತಕದಲ್ಲಿ ಉಳಿವಂತೆ ಮಾಡಿದ್ದು ಯಾಕೋ ನೆಟ್ಟಗಲ್ಲ ಎನಿಸುತ್ತದೆ. ಮುಂದಿನ ಆವೃತ್ತಿಯಲ್ಲಾದರೂ ಇವನ್ನು ತಿದ್ದಬೇಕು; ಪರಿಶಿಷ್ಟಾದಿಗಳನ್ನು ಕೊಡಬೇಕು. ಆಗ ಮಾತ್ರ ಪುಸ್ತಕ ಸಾರ್ಥಕವಾದೀತು.

ಪರಿವರ್ತನ

ಬರೆದವರು: ಶ್ರೀ. ಬೇಂದ್ರೆ ಲಕ್ಷ್ಮಣರಾಯರು ಪ್ರಕಾಶಕರು: ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ ಕ್ರೌನ್ ಅ. ಪ. ೬೬ ಪುಟ. ರೂ. ೦ ೧೨-೦

ಇದನ್ನು ಸಮಸ್ಯಾತ್ಮಕ ನಾಟಕವೆಂದು ಕರೆಯಲಾಗಿದೆ. ಆದರೆ ಅದು ಒಂದು ಸಮಸ್ಯೆಯನ್ನು ನಮ್ಮ ಮುಂದಿಡದೆ ಅದನ್ನು ಬಿಡಿಸಿ

ತೋರಿಸಿದೆ. ಜಾತಿಯ ಬಂಧನಕ್ಕೆ ಕಟ್ಟು ಬೀಳದೆ ಪ್ರೇಮಿಸಿದ ಹುಡುಗಿಯನ್ನು ಮದುವೆಯಾಗಬೇಕೆನ್ನುವ ವಿಶ್ವಂಭರನ ಮೇಲೆ ಅವನ ವಕೀಲ ತಂದೆ ಆಗ್ರಹಪಟ್ಟು, ಕೊನೆಗೆ ಹೆಂಡತಿಯ ಮರಣೋನ್ಮುಖತೆ, ಮಗನ ಪ್ರೇಮಜ್ವರಗಳ ಇಕ್ಕುಳದಲ್ಲಿ ಸಿಕ್ಕು ಅಂತರ್ಜಾತಿ ಮದುವೆಗೆಒಪ್ಪುತ್ತಾರೆ. ರಂಗಭೂಮಿಯಮೇಲೆ ಇದು ಹಲವು ಆಗಾಮಿ ಸನ್ನಿವೇಶಗಳ ಬಲದಿಂದ ಕಳೆಕಟ್ಟಬಹುದಾದರೂ ಸ್ವತಃ ನಾಟಕದ ವಸ್ತು ವಿನ್ಯಾಸಗಳಲ್ಲಿ ಯಾವ ವೈಶಿಷ್ಟ್ಯವೂ ಇಲ್ಲ. ತಂದೆಯ ಮನಃಪರಿವರ್ತನೆಗೆ ಸಾಕಷ್ಟು ಪ್ರಬಲವಾದ ಕಾರಣವಿಲ್ಲದುದರಿಂದ ನಾಟಕದ ಪರ್ಯವಸಾನ ಅಸಹಜವೆಂದು ತೋರುತ್ತದೆ.

ದೇವರೆಲ್ಲಿ ?

(ಸ್ವತಂತ್ರ ಸಾಮಾಜಿಕ ಕಾದಂಬರಿ)

ಲೇಖಕರು: ರಮಾಕಾಂತ, ಪ್ರಕಾಶಕರು- ಪ್ರತಿಭಾ ಗ್ರಂಥಮಾಲೆ ಧಾರವಾಡ. ಬೆಲೆ- ಪುಟ.೪೧೪ ನಾಲ್ಕು ರೂಪಾಯಿ.

"ದೇವರೆಲ್ಲಿ?" ಇದೊಂದು ಸ್ವತಂತ್ರ ಸಾಮಾಜಿಕ ಕಾದಂಬರಿ. ಅದರಲ್ಲೂ ವಾಸ್ತವ ಸಾಹಿತ್ಯವನ್ನು ಚಿತ್ರಿಸಿದ ಕಾದಂಬರಿಗಳಲ್ಲೊಂದೆಂದು ಲೇಖಕರ ಅಭಿಪ್ರಾಯ. ಈ ಕಾದಂಬರಿ ಲೇಖಕರೇ ಹೇಳುವಂತೆ ಅವರ ಮೊದಲನೆಯ ಪ್ರಯತ್ನವಾದುದರಿಂದ ಪ್ರಯತ್ನಕ್ಕೆ ಸಾಕಷ್ಟು ಯಶ ದೊರೆತಿಲ್ಲ.

ಈ ಕಾದಂಬರಿಯಲ್ಲಿ ಸಾಮಾನ್ಯವಾಗಿ ಎರಡು ಭಾಗಗಳನ್ನು ಮಾಡಬಹುದು. ರಂಗಣ್ಣನ ದುಃಖಮಯ ಜೀವನ ಮುಗಿಯುವವರೆಗೆ ಒಂದು ಭಾಗ: ಪೂರ್ವಾರ್ಧವೆಂದು ಹೇಳಬಹುದು. ಪದ್ಮನ ದುರಂತ ಜೀವನ ಇನ್ನೊಂದು ಭಾಗ. ಉತ್ತರಾರ್ಧವೆಂದು ಹೇಳಬಹುದು. ಪೂರ್ವಾರ್ಧದಲ್ಲಿ ರಂಗಣ್ಣನ ಜೀವನವನ್ನೇ ಪ್ರಾಮುಖ್ಯವಾಗಿ ಚಿತ್ರಿಸಿದ್ದರೂ ಅವನನ್ನು ಪ್ರತ್ಯಕ್ಷವಾಗಿ ಚಿತ್ರಿಸಿಲ್ಲ. ಅವರಿವರ ಮಾತಿನಿಂದ, ಲೇಖಕರ ವರ್ಣನೆಯಿಂದ ಅವನ ಜೀವನ ಪರಿಚಯವಾಗುತ್ತದೆ. ಉತ್ತರಾರ್ಧದಲ್ಲಿ ಮಾತ್ರ ಈ ಪದ್ಧತಿಯನ್ನು ಅನುಸರಿಸದೆ ಪದ್ಮನನ್ನು ಪ್ರತ್ಯಕ್ಷವಾಗಿ ಚಿತ್ರಿಸಲಾಗಿದೆ.

ಪದ್ಮನೇ ಈ ಕಾದಂಬರಿಯ ನಾಯಕನೆಂದು ಸಾಮಾನ್ಯವಾಗಿ ಹೇಳಬಹುದು. ಚಿಕ್ಕಂದಿನಲ್ಲಿಯೇ ತಂದೆ ತಾಯಿಗಳನ್ನು ಕಳೆದುಕೊಂಡು ದುಃಖಿಯಾಗಿ ಬಾಳಿದವನು. ಆದರೆ ಅವನ ಪಾತ್ರದಲ್ಲಿ ಯಾವ ಹಿರಿಮೆಯೂ ವಿಶಿಷ್ಟತೆಯೂ ಕಂಡುಬರುವದಿಲ್ಲ. ಅವನು ಚಂಚಲಚಿತ್ತ; ಒಂದೆಡೆಯಲ್ಲಿಯೂ ದೃಢವಾಗಿ ನೆಲೆಯೂರಿದವನಲ್ಲ. ಪದ್ಮ ಚಿಮ್ಮೂರಿನಿಂದ ಮುಂಬಯಿಗೆ ಬಂದು ಸಖಾರಾಮನ ಮನೆಯಲ್ಲಿ ವಾಸಿಸುತ್ತಿರುವಾಗ, ಸಖಾರಾಮನ ಮಗಳು ಗಿರಿಜೆ ಅವನನ್ನು ಪ್ರೀತಿಸುವಳು, ಪದ್ಮನೂ ಅವಳ ಪ್ರೀತಿಯನ್ನು ಅಲ್ಲಗಳೆಯುವದಿಲ್ಲ. ಅವರಿಬ್ಬರ ಮದುವೆಯೂ ನಿಶ್ಚಯವಾಗಿರುತ್ತದೆ. ಇಂತಹದರಲ್ಲಿ ಪದ್ಮನು, ಅಲ್ಲಿಂದ ಅಕಸ್ಮಾತ್ತಾಗಿ ಮಾಯವಾಗುತ್ತಾನೆ. ಅದಕ್ಕೆ ಯಾವ ಕಾರಣಗಳೂ ಲೇಖಕರಿಂದ ಕೊಡಲ್ಪಟ್ಟಿಲ್ಲ. ಅಲ್ಲಿಂದ ಮಾಯವಾದವನು ಕಂಡರಿಯದ ಲೋಬಿಯ ಮೋಹಪಾಶದಲ್ಲಿ ಸಿಲುಕುವನು. ಹೀಗೆ ಅನಾವಶ್ಯಕವಾಗಿ ಪದ್ಮನ ಜೀವನದಲ್ಲಿ ಹೊಯ್ದಾಟವನ್ನು ಕಲ್ಪಿಸಿ ಅವನು ದುಃಖಿಯೆಂದು ತೋರಿಸಲು ಪ್ರಯತ್ನಿಸಿದ್ದಾರೆ. ಅವನ ಆ ಜೀವನದ ವರ್ಣನೆಯಾದರೂ ತೊಳೆತೊಳೆಯಾಗಿ ಬಂದಿಲ್ಲ. ವಿಸಂಗತ ಸನ್ನಿವೇಶಗಳನ್ನು ಚಿತ್ರಿಸಿ ಅವನು ದುಃಖಿಯೆಂದು ತೋರಿಸಲು ಚಿತ್ರಿಸಿದ್ದಾರೆ. ಶಿವಶಂಕರರಾಯರು ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ತಮ್ಮಲ್ಲಿಟ್ಟುಕೊಳ್ಳುವದಾಗಿ ಹೇಳಿ ವಿಜಾಪುರಕ್ಕೆ ಪದ್ಮನನ್ನು ಕರೆತಂದವರು ಕಂಟಾಗಿ ಗೋವಿಂದರಾಯರಲ್ಲಿ ಅವನನ್ನು ಕಲಿಯಲು ಕಳಿಸುವರು. ಈ ಚಿತ್ರವನ್ನು ಕೊಟ್ಟು ಪದ್ಮನು ಗೋವಿಂದರಾಯರಲ್ಲಿ ಜೀತದಾಳಿನಂತೆ ದುಡಿಯುತ್ತಿದ್ದನೆಂದು ಎಣಿಸಿದ್ದಾರೆ. ಗೋವಿಂದರಾಯರ ನೆಂಟನ ಕಳವು, ಅವರ ಮನೆಯಲ್ಲಿಯ ಸರಿಗೆಯ ಮಾಯ, ಇವೆಲ್ಲ ಪದ್ಮನ ದುಃಖಮಯ ಜೀವನವನ್ನು ಚಿತ್ರಿಸಬಹುದಾದರೂ ಕಥೆಗೂ ಈ ಸಂಗತಿಗಳಿಗೂ ಲೇಖಕರು ಯಾವ ಸಂಬಂಧವನ್ನೂ ಕಲ್ಪಿಸಿಲ್ಲ. ತೀರ ವಿಸಂಗತವಾಗಿ ಇವು ಚಿತ್ರಿಸಲ್ಪಟ್ಟಿವೆ. ಅಲ್ಲದೆ ಪದ್ಮನ ಜೀವನಕ್ಕೆ ಸಂಬಂಧಿಸಿದ ಅನೇಕ ವಿಸಂಗತ ಸಂಗತಿಗಳನ್ನು ಕಾದಂಬರಿಯ ಓಟಕ್ಕೆ ತಡೆಯೊಡ್ಡಿ ಚಿತ್ರಿಸಿದ್ದಾರೆ. ಸಖಾರಾಮನಿಗೆ ಅಂಕೆಯ ಆಟವಾಡುವ ಚಟವಿರಬಹುದು. ಆ ಅಂಕೆಯಾಟದ ವಿವರಗಳ ವರ್ಣನೆಯು ಪದ್ಮನ ಜೀವನಕ್ಕೆ ಸಂಬಂಧಿಸಿಲ್ಲ. ಇಷ್ಟೇ ಅಲ್ಲ ಕಥೆಯ ಬೆಳವಣಿಗೆಗೂ ಸಹಾಯಕವಾಗಿಲ್ಲ. ಅದರಂತೆಯೇ ಸಾಬಿಯ ಹಿಂದಿನ ಜೀವನದ ವಿವರಗಳು ಕಥೆಗೆ ಆವಶ್ಯಕವಿಲ್ಲ. ಅದನ್ನು ಹೇಳುವದಲ್ಲಿ ಲೇಖಕರು ನಿರರ್ಥಕ ಶ್ರಮವಹಿಸಿರುವರು. ಬುದ್ಧ ಜಾಣನಿರಬಹುದು. ಅವನಲ್ಲಿ ವಾದಶಕ್ತಿಯಿರಬಹುದು; ಆದರೆ ಅವನು ತನ್ನ ಮೇಲೆ ಹೊರಿಸಿದ ಆರೋಪವು ಸುಳ್ಳೆಂದು ಸಿದ್ಧಮಾಡಲು ಮಾಡಿದ ಪ್ರತಿಪಾದನೆಯನ್ನು ಹನ್ನೆರಡು ಪುಟಗಳಲ್ಲಿ ವಿವರಿಸುವ ಅಗತ್ಯವೇನಿರಲಿಲ್ಲ. ಹೀಗೆ ಕಾದಂಬರಿಯಲ್ಲಿ ಪದ್ಮನ ದುಃಖಮಯ ಜೀವನಕ್ಕೆ ಸಂಬಂಧಿಸಿದ ವಿಸಂಗತ ಸಂಗತಿಗಳ ಸಂಗ್ರಹವೇ ವಿಶೇಷವಾಗಿದೆ.

ಇನ್ನು ಕಾದಂಬರಿಗಳಲ್ಲಿ ಬರುವ ವರ್ಣನೆ ನೋಡಿದರೂ ಲೇಖಕರ ಮೇಲ್ಮೆ ಎಲ್ಲಿಯೂ ಕಂಡುಬರುವದಿಲ್ಲ. ವಾಸ್ತವ ಸಾಹಿತ್ಯವನ್ನು ಚಿತ್ರಿಸಲು ಹೊರಟ ಲೇಖಕರು ಬೀಭತ್ಸ ವರ್ಣನೆಗಳಲ್ಲಿ ಪುಟಗಳನ್ನು ಹಾಳು ಮಾಡಿದ್ದಾರೆ. ಮಾದಪ್ಪ-ಪದ್ಮ ವಿಜಾಪುರದಲ್ಲಿ ಹೋಟೆಲೊಂದರಲ್ಲಿ ದೋಸೆ ತಿನ್ನುವಾಗ ಅವರ ಬಳಿಯಲ್ಲಿ ಕುಳಿತವನು ದೋಸೆ ತಿನ್ನುತ್ತ ಸಂಬಳ ಬಿರಿಸುತ್ತಿದ್ದನೆಂದು ವರ್ಣಿಸುವದು; (ಪುಟ ೧೩೪) ಮತ್ತು ಪದ್ಮ ಲೋಬಿಯ ಒತ್ತಾಯದಿಂದ ಭಂಗಿ ಕೆಲಸ ಮಾಡುತ್ತಿರುವಾಗ ಅವನ ಕೈ ಮೇಲೆ ಬಿದ್ದ ಅಮೇಧ್ಯವು ಬಾವಿಯಲ್ಲಿ ಬಿದ್ದ ಶಾಸ್ತ್ರಿಗಳ ಹೆಂಡತಿಯನ್ನು ಹೊರತೆಗೆದು, ಕೈಯನ್ನು ಝಾಡಿಸಲು, ಅದು ಸಿಡಿದು ಹೆಂಡತಿಯನ್ನು ಕರೆದುಕೊಂಡ ಶಾಸ್ತ್ರಿಗಳ ಬಾಯಿಗೆ ಬಡಿಯಿತು. ಲೋಬಿಯು ಅದನ್ನು ನೋಡಿ ಶಾಸ್ತ್ರಿಗಳೆ, ನೀವು ತಿನ್ನುವದು ಅದೇ ನೋಡಿ ಎಂದು ವರ್ಣಿಸುವದು ಕಾದಂಬರಿಯಲ್ಲಿಯ ಬೀಭತ್ಸ ವರ್ಣನೆಗಳಿಗೆ ಕಳಸವಿಟ್ಟಂತಾಗಿದೆ. ಕಾಮಾಕ್ಷಿ ಬಸಿರು ಹೆಣ್ಣುಮಗಳಾದರೂ ಕಾಯಿಲೆಯಿಂ ನರಳುತ್ತಿದ್ದರೂ ಚೆತಾಪುರದಿಂದ ಚಿಮ್ಮೂರಿನ ವರೆಗೆ ಪ್ರಯಾಣ ಮಾಡಿದಳೆಂದು ಲೇಖಕರು ಬರೆಯುತ್ತಾರೆ. ಆದರೆ ಇದು ತೀರ ಅಸಂಭವ. ಕಾಮಾಕ್ಷಿ ಉನ್ಮಾದಾವಸ್ಥೆಯಲ್ಲಿದ್ದರೂ ಆವಳಿದ್ದ ಪರಿಸ್ಥಿಯಲ್ಲಿ ಆವಳಿಂದ ಇಂಥ ಸಾಹಸ ಘಟಿಸಲಾರದು.

ಲೇಖಕರ ಶೈಲಿಯಾದರೂ ಸರಳವಾಗಿಲ್ಲ. ಸುತ್ತಿ ಬಳಸಿ ಹೇಳುವ ಶೈಲಿ. ನಾಲ್ಕೈದು ಪುಟಗಳಲ್ಲಿ ಹೇಳಿಬಿಡಬಹುದಾದ ಕಥಾಭಾಗ ವನ್ನು ಸುದೀರ್ಘವಾಗಿ ಬೆಳೆಸಿಬಿಟ್ಟಿದ್ದಾರೆ. ಪದ್ಮ ವಿಜಾಪುರದಲ್ಲಿ ಕಳೆದ ಕಷ್ಟಮಯ ಜೀವನವನ್ನು ಚಿತ್ರಿಸಿದ ರೀತಿಯನ್ನು ಇಲ್ಲಿ ಉದಾಹರಿಸಬಹುದು. ಲೇಖಕರು ಪ್ರಯತ್ನಿಸಿದ್ದರೆ ಈ ವಿಭಾಗವನ್ನು ತೀರ ಕೆಲವು ಪುಟಗಳಲ್ಲಿ ಹೇಳಬಹುದಾಗಿತ್ತು.

ಕಾದಂಬರಿಗೆ "ದೇವರೆಲ್ಲಿ" ಎಂದು ಹೆಸರು ಕೊಟ್ಟಿದ್ದರೂ ಪದ್ಮನ ಕಷ್ಟಮಯ ಜೀವನ ಚಿತ್ರಿಸುವದರಿಂದ ಹೆಸರಿಗೆ ಪುಷ್ಟಿ ದೊರೆಯಲಾರದು. ಪದ್ಮನು ಅತಿಮಾನವನೇನಲ್ಲ. ಲೇಖಕರು ಕೆಲ ಸಂಗತಿಗಳನ್ನು ಕಾದಂಬರಿಯಲ್ಲಿ ಅನಾವಶ್ಯಕವಾಗಿ ಚಿತ್ರಿಸಲು ಶಕ್ತಿಮೀರಿ ಹೆಣಗಿ ಪದ್ಮನು ದುಃಖಿಯೆಂದು ತೋರಿಸಲು ಪ್ರಯತ್ನಿಸಿದ್ದಾರೆ. ಆದರೆ ಸ್ವಾಭಾವಿಕತೆ ಎಲ್ಲಿಯೂ ಕಂಡುಬರುವದಿಲ್ಲ.

ಕೊನೆಯದಾಗಿ ಪ್ರಕಾಶಕರ ಬಗೆಗೂ ಒಂದೆರಡು ಮಾತುಗಳನ್ನು ಇಲ್ಲಿ ಹೇಳಿದರೆ ಅಪ್ರಸ್ತುತವಾಗದೆಂದು ನಮ್ಮ ಭಾವನೆ. ಮನೋರಂಜಕ ಸಾಹಿತ್ಯವನ್ನು ಜನತೆಗೆ ಒದಗಿಸುವಾಗ ಅದರಿಂದ ಮನೋರಂಜನೆ ಎಷ್ಟರಮಟ್ಟಿಗಾದೀತು? ಓದುಗರಿಗೆ ಎಷ್ಟು ಲಾಭಕರವಾದೀತು ಎಂಬುದನ್ನು ವಿಚಾರಿಸಬೇಕಾಗುತ್ತದೆ. ಪ್ರಸ್ತುತ ಗ್ರಂಥದ ಪ್ರಕಾಶಕರು ತಮ್ಮ ಈ ಹೊಣೆಯನ್ನು ಸಾಕಷ್ಟು ಮನಗಂಡಿಲ್ಲವೆಂದು ಅನಿವಾರ್ಯವಾಗಿ ಹೇಳಬೇಕಾಗಿದೆ.

ತತ್ತ್ವಾರ್ಥಸೂತ್ರಂ

ಸಂಪಾದಕರು: ಪಂಡಿತ ವರ್ಧಮಾನ ಪಾರ್ಶ್ವನಾಥ ಶಾಸ್ತ್ರಿಗಳು, ಸೋಲಾಪುರ. ಪ್ರಕಾಶಕರು: ಮಂತ್ರಿ, ಆಚಾರ್ಯ ಕುಂಥುಸಾಗರ ಗ್ರಂಥಮಾಲೆ, ಸೋಲಾಪುರ. ಪುಟ ೨೦೪, ಬೆಲೆ ಸದುಪಯೋಗ.

ತತ್ತ್ವಾರ್ಥ ಸೂತ್ರವೊಂದು ಜೈನ ಗ್ರಂಥ. ಮೂಲ ಲೇಖಕರು ಶ್ರೀ ಉಮಾಸ್ವಾಮಿಗಳು. ಇದರಲ್ಲಿ ೧೦ ಅಧ್ಯಾಯಗಳಿವೆ. ಸೂತ್ರಗಳ ಕೆಳಗೆ ಕನ್ನಡ ವೃತ್ತಿಯನ್ನು ಕೊಡಲಾಗಿದೆ. ಕರ್ನಾಟಕದ ಪ್ರಸಿದ್ಧ ಮತಗಳಲ್ಲಿ ಜೈನ ಮತವೂ ಒಂದು. ಜೈನರು ಜೀವವಾದಿಗಳು. ಅವರ ತರ್ಕಸರಣಿ ವಿಶಿಷ್ಟ ರೀತಿಯದು. ಮುನ್ನುಡಿಯಲ್ಲಿ ಪ್ರೊ. ದ. ರಾ. ಬೇಂದ್ರೆಯವರು ಹೇಳಿದಂತೆ ಕನ್ನಡ ಮನವನ್ನು ರೂಪಗೊಳಿಸುವುದರಲ್ಲಿ ಜೈನ ಮತದ ಪಾತ್ರ ಅಗಣ್ಯವೆನಿಸಿದೆ: "ಜೈನರ ತತ್ತ್ವ ಪದಾರ್ಥ ವಿಚಾರ, ಗುಣಸ್ಥಾನಗಳ ವಿಚಾರ, ಭಿನ್ನಧ್ಯಾನಗಳ ವಿಚಾರ ಒಂದೊಂದೂ ಜೀವದ ಜಿಜ್ಞಾಸುವಿಗೆ ಅಮೌಲಿಕವೆನಿಸದಿರಲಾರವು". ಈ ದೃಷ್ಟಿಯಿಂದ ವಿಚಾರಪ್ರಚೋದಕವಾದ ಈ ಗ್ರಂಥವನ್ನು ಜ್ಞಾನತೃಷೆಯುಳ್ಳ ಸರ್ವರೂ ಓದುವುದವಶ್ಯ. ಆಗಲೇ ಸಂಪಾದಕರ ಶ್ರಮ ಸಾರ್ಥಕವಾದೀತು.

ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ

"ಶ್ರೀ"ಯವರ ಭಾಷಣಗಳು ಮತ್ತು ಲೇಖನಗಳು ಮತ್ತು ಮುನ್ನುಡಿಗಳು. ಭಾಗ ೧ ಮತ್ತು ೨. ಪ್ರಕಾಶಕರು: ಕಾವ್ಯಾಲಯ, ಮೈಸೂರು ಭಾಗ ೧– ಕ್ರೌನ್ ೮. ಪ. ೧೬೭ ಪುಟ ರೂ. ೩-೮-೦; ಭಾಗ೨– ೯೬ ಪುಟ. ರೂ. ೧-೧೨-೦

ಈ ಎರಡು ಸುಂದರವಾಗಿ ಮುದ್ರಿತವಾದ ಭಾಗಗಳಲ್ಲಿ "ಕಾವ್ಯಾಲಯ"ದವರು ದಿವಂಗತ ಶ್ರೀ. ಬಿ. ಎಂ. ಶ್ರೀಕಂಠಯ್ಯನವರ ವಿವಿಧ ಭಾಷಣ ಲೇಖನಾದಿಗಳನ್ನು ಸಂಗ್ರಹಿಸಿ ಪ್ರಕಟಿಸಿದ್ದು ಅಭಿನಂದನಾರ್ಹವಾಗಿದೆ. ಇದರ ಸಂಪಾದನಾಕಾರ್ಯವನ್ನು ಪ್ರೊ. ಎಸ್. ವಿ. ರಂಗಣ್ಣನವರು ಮಾಡಿರುವರು. ಕನ್ನಡ ಸಾಹಿತ್ಯದ ಆಧುನಿಕ ಆಚಾರ್ಯಪುರುಷರಾದ "ಶ್ರೀ"ಯವರ ವಿದ್ವತ್ತು, ಭಾಷಾಭಿಮಾನ ಉತ್ಕೃಷ್ಟವಾದುದು. ಅವರು ಗದ್ಯದಲ್ಲಿ ಬರೆದುದೆಲ್ಲವೂ ಇಲ್ಲಿ ಸಂಗ್ರಹಿಸಲ್ಪಟ್ಟಿರುವದರಿಂದ ಈ ಗ್ರಂಥವು ಪುಣ್ಯನಾಮರಾದ ಅವರ ಹೃದಯಕ್ಕೆ ಕನ್ನಡಿಯಂತಿದೆ. ಸಂಪಾದಕರ ವಿಸ್ತಾರವಾದ ಮುನ್ನುಡಿಯಿಂದ ಇದರ ಉಪಯುಕ್ತತೆ ಹೆಚ್ಚಿದೆ.

Gita Letters

ಬರೆದವರು: ಸ್ವಾಮಿ ಅವಿನಾಶಾನಂದ. ಪ್ರಕಾಶಕರು: ಹಿಂದ್ ಕಿತಾಬ್ಸ್ ಲಿಮಿಟೆಡ್ ಮುಂಬಯಿ. ಪುಟ ೧೯೯, ಬೆಲೆ ರೂ. ೪.

ಇದು ಗೀತೆಯ ಮೇಲೆ ಬರೆದ ಕಾಗದಗಳ ಸಂಗ್ರಹ. ಇದರಲ್ಲಿ ೪೪ ಕಾಗದಗಳಿವೆ. ಇವು ಸ್ವಾಮಿಗಳು ಒಬ್ಬ ಚಿಕ್ಕಹುಡುಗಿಗೆ ಬರೆದವು. ಅದೇ ಈ ಪುಸ್ತಕದ ವೈಶಿಷ್ಟ್ಯ. ಬಂಡವಾಳಶಾಹಿ, ಸಮಾಜ ಸತ್ತಾವಾದ ಮುಂತಾದ ಜಟಿಲ ರಾಜಕೀಯ ಸಮಸ್ಯೆಗಳನ್ನು Intelligent Woman's Guide ಬುದ್ಧಿವಂತ ಹೆಂಗಸಿನ ಕೈಪಿಡಿ ಎಂದು ಬರ್ನಾರ್ಡ್ ಶಾ ಬರೆದಂತೆ ಸ್ವಾಮಿಗಳು ಈ ಕಾಗದಗಳನ್ನು ಎಳೆಯ ಬುದ್ಧಿಯವರಿಗೆ ತಿಳಿಯುವಂತೆ ತಿಳಿಯಾದ ಆಂಗ್ಲ ಭಾಷೆಯಲ್ಲಿ, ಸಾರಾಸಾರ ವಿಚಾರಗಳನ್ನು ವಿವೇಚಿಸಿ ಸರಸವಾಗಿ ಬರೆದಿದ್ದಾರೆ. ಗೀತೆಯ ಮೇಲೆ ಎಷ್ಟೋ ಪುಸ್ತಕಗಳನ್ನು ಬರೆಯಲಾಗಿದ್ದರೂ ಅವುಗಳಿಗಿಂತ ಇದರಲ್ಲಿರುವ ಒಂದೇ ಒಂದು ವಿಶೇಷ ಗುಣವೆಂದರೆ ಈ ಸರಳತೆ ಮತ್ತು ಸಮಗ್ರತೆಯಿರುವ ಸುಕ್ಲಿಷ್ಟವಾಗಿ ವರ್ಗೀಕರಿಸಿದ ವಿವರಣೆಯೇ. ಗೀತೆಯೆಂದರೇನು, ನಿಜ ಶ್ರದ್ಧೆಗೆ ಸಾಕ್ಷಿಯೇನು, ಗೀತೆಯಲ್ಲೇನಿಲ್ಲ, ಗೀತೆಯನ್ನೇಕೆ ಕಲಿಯಬೇಕು, ೨೦೦ ಶ್ಲೋಕಗಳೇಕೆ, ಮುಂತಾದ ಹಲವಾರು ಮೌಲಿಕ ಪ್ರಶ್ನೆಗಳನ್ನು ಎತ್ತಿ ಉತ್ತರಿಸಿ ಗ್ರಂಥಕರ್ತರು ಈ Age of Reason– ಹೇತು ವಿಮರ್ಶನೆ ಯುಗದ ಸಾಮಾನ್ಯರ ಕುತೂಹಲವನ್ನು ಸಮಂಜಸವಾಗಿ ತೃಪ್ತಿಪಡಿಸಿದ್ದಾರೆ. ಮುನ್ನುಡಿಕಾರರಾದ ಸರ್. ಎಸ್. ರಾಧಾಕೃಷ್ಣನ್ನರು ಈ ಪುಸ್ತಕವು "ಗೀತೋಪದೇಶವನ್ನು ಆಕರ್ಷಕ ಮತ್ತು ಕೌತೂಹಲಿಕವೆನಿಸಿದೆ" ಯೆಂದುದು ಅತಿಶಯೋಕ್ತಿಯಲ್ಲವೆಂದು ಓದಿದ ಮೇಲೆ ಯಾರಿಗಾದರೂ ತಿಳಿವಂತಿದೆ. ಇಂದಿನ ವೈಜ್ಞಾನಿಕ ಮತ್ತು ಐತಿಹಾಸಿಕ ದೃಷ್ಟಿಗಳಿಗೆ ಒಪ್ಪುವಂತೆ ಪಾರಿಭಾಷಿಕತೆಯಿಂದ ಮುಕ್ತವಾದ ಈ ಕಾಗದಗಳಲ್ಲಿ ರಾಮಕೃಷ್ಣ ಪರಮಹಂಸರು, ವಿವೇಕಾನಂದರು ಮುಂತಾದವರು ಹೇಳಿದ ನಿದರ್ಶನಗಳನ್ನು ಬಳಸಿಕೊಂಡದ್ದು ಸರಳತೆಗೆ ಮತ್ತಷ್ಟು ಪೋಷಕವೂ ವಿವರಣೆಗೆ ಭೂಷಣವೂ ಎನಿಸಿದೆ. ಅವರ ಶೈಲಿಗೆ "When I was young the youngest member of our household used to read the Ramayana .... He had a 'tamboora' and sang the verses in sweet musical tones." ಇದನ್ನು ಮಾದರಿಯಾಗಿ ತೆಗೆದುಕೊಳ್ಳಬಹುದು. ರಸಿಕರು ಇಂಥ ಸರಳ ಆಕರದಿಂದ ಮಾನವಕುಲಕ್ಕೆ ಹಿಡಿದ ಸಮಸ್ಯೆಗಳನ್ನು ಬಿಡಿಸಿಕೊಂಡು ಸ್ವಾಮಿಗಳ ಪ್ರಯತ್ನವನ್ನು ಸಾರ್ಥಕಪಡಿಸಿಕೊಡದಿರಲಾರರೆಂದು ಸುಲಭವಾಗಿ ಹೇಳಬಹುದು.

ಜನೇವರಿ ೩೦

ಆಶ್ರಮದ ಮೊದಲ ದಿನಗಳಲ್ಲಿ ಮುಂಜಾನೆಯ ಪ್ರಾರ್ಥನಾ ಮುಹೂರ್ತವನ್ನು ಎಷ್ಟೋ ಬಾರಿ ಹೆಚ್ಚು ಕಡಿಮೆ ಮಾಡಿ ನೋಡಿದೆವು. ಬೆಳಗಿನ ನಾಲ್ಕು ಗಂಟೆಯಿಂದ ಅದನ್ನು ಹಿಂದೆ ಮುಂದೆ ಸರಿಸಿ ಏಳು ಗಂಟೆಯ ವರೆಗೂ ನೂಕಿದೆವು. ಆದರೆ ಯಾವುದೂ ಹೊಂದಿಕೆಯಾಗಿ ಪ್ರಯೋಜನಕ್ಕೆ ಬರಲಿಲ್ಲ. ಕೊನೆಗೆ ಇದೆಲ್ಲ ಇನ್ನು ಮುಂದೆ ಸಲ್ಲದೆಂದು ನಾವು ತೀರ್ಮಾನಿಸಿದೆವು: ಯಾವ ಋತುವೇ ಇರಲಿ, ಬೇರೆ ಎಷ್ಟೇ ಕಾರ್ಯಕ್ರಮಗಳು ಬಂದೊದಗಲಿ, ಮುಂಜಾನೆ ನಾಲ್ಕು ಗಂಟೆಗೆ ಎದ್ದೇ ತೀರಬೇಕು ಮತ್ತು ಮುಖ, ತೊಳೆದುಕೊಂಡು, ೪-೨೦ ಕ್ಕೆ ಪ್ರಾರ್ಥನೆ ಪ್ರಾರಂಭವಾಗಲೇಬೇಕು ಎಂದು ಗೊತ್ತುಮಾಡಿಕೊಂಡೆವು.

ದಿಲ್ಲಿಯಲ್ಲಿ ಗಾಂಧೀ—ಆಯರ್ವಿನ್ ಮಾತುಕತೆಗಳು ನಡೆದಿದ್ದಾಗ ಒಂದೊಂದು ಸಲ ಗಾಂಧೀಜಿ ವೈಸರಾಯರ ಅರಮನೆಯಿಂದ ಮರಳುವಾಗ ರಾತ್ರಿ ಹನ್ನೆರಡು-ಒಂದು ಗಂಟೆ ಹೊಡೆಯುತ್ತಿತ್ತು. ಆ ಮೇಲೆ ಡಾ॥ ಅನ್ಸಾರಿಯವರ ಮನೆಯಲ್ಲಿ ನೆರೆದಿರುತ್ತಿದ್ದ ಮುಂದಾಳುಗಳಿಗೆ ಮಾತುಕತೆಗಳ ಸಾರಾಂಶವನ್ನು ಅರುಹಿ ಬಳಿಕ ಗಾಂಧೀಜಿ ನಿದ್ದೆ ಹೋಗುತ್ತಿದ್ದರು. ಇಂಥ ಸಮಯದಲ್ಲಿಯೂ ಗಾಂಧೀಜಿ ನಾಲ್ಕು ಗಂಟೆಗೆ ಸರಿಯಾಗಿ ಎದ್ದು ಪ್ರಾರ್ಥನೆ ಮಾಡುವದನ್ನು ಒಮ್ಮೆಯೂ ತಪ್ಪಿಸಿರಲಿಲ್ಲ. ಪ್ರಾರ್ಥನೆಯ ಕಾಲ ಪ್ರಕೃತಿಗೆ ಒಗ್ಗುವದೊ ಇಲ್ಲವೊ ಎಂಬದನ್ನು ಕೂಡ ಗಣ್ಯಕ್ಕೆ ತರತಕ್ಕದ್ದಲ್ಲವೆಂದು ಅವರ ಅಂಬೋಣವಾಗಿತ್ತು. ನಾವು ನಾಲ್ಕು ಗಂಟೆಗೆ ಪ್ರಾರ್ಥನೆ ಮಾಡಿಯೇ ತೀರುವ ಶಪಥ ತೊಡತಕ್ಕದ್ದು. ಅವಶ್ಯಬಿದ್ದರೆ ಪ್ರಾರ್ಥನೆ ಮುಗಿಸಿ ಪುನಃ ಮಲಗಿದರೂ ಅಡ್ಡಿಯಿಲ್ಲ. ಪ್ರಕೃತಿಯೇ ಪ್ರಾರ್ಥನಾಕಾಲವನ್ನು ಒಗ್ಗಿಸಿಕೊಳ್ಳಬೇಕು.

ಜನೆವರಿ ೩೦ ನೇ ದಿನ ನಮಗೆ ಅತ್ಯಂತ ಪವಿತ್ರ ದಿವಸವಾಗಿದೆ. ಗಾಂಧೀಜಿಯ ಸಿದ್ಧಾಂತಗಳಲ್ಲಿಯೂ ಅವರಿಂದ ಉಪದಿಷ್ಟವಾದ ರಾಷ್ಟ್ರ ರಚನಾತ್ಮಕ ಕಾರ್ಯಕ್ರಮಗಳಲ್ಲಿಯೂ ವಿಶ್ವಾಸವುಳ್ಳವರೆಲ್ಲರೂ ಬಿಸಿಲಿರಲಿ ಮಳೆಯಿರಲಿ, ಒಂದನ್ನೂ ಲೆಕ್ಕಿಸದೆ ಆ ದಿನ ನಾವೆಲ್ಲರೂ ಸೇರಿಯೇ ಸೇರತಕ್ಕದ್ದೆಂದು ಸಂಕಲ್ಪ ಮಾಡಬೇಕು ಮತ್ತು ಮೊದಲೇ ಗೊತ್ತುಪಡಿಸಿದ ಸ್ಥಾನದಲ್ಲಿ ನಾವೆಲ್ಲರೂ ಸಂಗಮಿಸಿಯೇ ತೀರಬೇಕು. ಇದಕ್ಕಾಗಿ ಯಾರಿಗೂ ಕರೆಕಳಿಸುವದೂ ಅವಶ್ಯವಿಲ್ಲ, ಯಾರ ಒಪ್ಪಿಗೆ ಪಡೆಯುವದೂ ಬೇಕಾಗಿಲ್ಲ.

ಸಮಸ್ತ ಹಿಂದೂ ಸಂಸ್ಕೃತಿ ಅನಾದಿ ಕಾಲದಿಂದ ಸಿಂಹಸ್ಥ ಪರ್ವದ ಜಾತ್ರೆಯನ್ನು ಸರದಿಯ ಮೇಲೆ ಹರದ್ವಾರ, ಅಲಹಾಬಾದ, ಉಜ್ಜಯಿನಿ ಮತ್ತು ನಾಸಿಕವೆಂಬೀ ನಾಲ್ಕು ಕ್ಷೇತ್ರಗಳಲ್ಲಿ ಜರಗಿಸಲೇಬೇಕೆಂದು ನಿರ್ಧರಿಸಿಬಿಟ್ಟಿದೆ. ಈ ಕಾರ್ಯಕ್ರಮದಲ್ಲಿ ಯಾರೂ ಬದಲಾವಣೆ ಮಾಡಲಾರರು. ವಾರದ ಏಳು ದಿನಗಳು ಹೇಗೆ ಬೆನ್ನುಬೆನ್ನಿಗೆ ತಪ್ಪದೆ ಒದಗುವವೋ ಹಾಗೆಯೆ ಸಿಂಹಸ್ಥ ಪರ್ವದ ಜಾತ್ರೆ ಬೆನ್ನು ಬೆನ್ನಿಗೆ ನಿರ್ದಿಷ್ಟ ಸ್ಥಳಗಳಲ್ಲಿ ಸೇರಿಯೇ ಸೇರುವದು. ಇದಕ್ಕಾಗಿ ಜಾಹಿರಾತು ಹೊರಡಿಸುವ ಕಾರಣವೇ ಇಲ್ಲ.

ಇದೇ ಪ್ರಕಾರ "ಗಾಂಧೀ—ಜಾತ್ರೆ" ಯ ವಿಷಯದಲ್ಲಿಯೂ ನಿಶ್ಚಯ ಮಾಡಬೇಕು. ದಿಲ್ಲಿಯಲ್ಲಿ ರಾಜ್ಯಘಾಟ, ವರ್ಧಾದಲ್ಲಿ ಪವನಾರ, ಅಹಮದಾಬಾದಿನಲ್ಲಿ ಸಾಬರಮತಿ, ನವಾಖಲಿಯಲ್ಲಿ ಕಾಜಿರಖಿಲ, ಅಲಹಾಬಾದಿನಲ್ಲಿ ಪ್ರಯಾಗ ಹೀಗೆ ಐದು ಸ್ಥಾನಗಳನ್ನು ಒಮ್ಮೆ ಗೊತ್ತುಪಡಿಸಿ ಬಿಡಬೇಕು ಮತ್ತು ಸಂಗಡಲೇ ಈ ಐದು ಸ್ಥಾನಗಳ ಸರತಿಯ ಅನುಕ್ರಮವನ್ನೂ ಸ್ಥಿರಗೊಳಿಸಬೇಕು. ಒಮ್ಮೆ ಸ್ಥಿರವಾದ ಮೇಲೆ ನಿಶ್ಚಿತ ಕಾರ್ಯಕ್ರಮವನ್ನು ನಿಶ್ಚಿತ ಸ್ಥಳದಲ್ಲಿ ಪೂರ್ತಿಯಾಗಿ ಪಾಲಿಸುವ ಅಚಲ ಸಂಕಲ್ಪವನ್ನು ಎಲ್ಲ ಜನರೂ ಕೈಕೊಳ್ಳಬೇಕು. ಮುಂದೆ ಲದರಲ್ಲಿ ಯಾರೊಬ್ಬರ ಸ್ವಂತದ ಅನುಕೂಲ್ಯ—ಅನಾನುಕೂಲ್ಯಗಳನ್ನು ಚಿಂತಿಸುವ ಮಾತೇ ಇರಕೂಡದು. ಆಧ್ಯಾತ್ಮಿಕ ವಿಷಯಗಳಲ್ಲಿ ಪ್ರಕೃತಿಯ ತೊಂದರೆಗಳಿಗೆ ಕೂಡ ಮಹತ್ವ ಕೊಡಬಾರದು.

ಈ ವಾರ್ಷಿಕ ಜಾತ್ರೆಗಳ ಕಾರ್ಯಕ್ರಮ ಉದ್ದುದ್ದವಾಗಿರುವದು ಸಾಧ್ಯವಿಲ್ಲ. ಕಾಂಗ್ರೆಸ್ಸಿನ ಅಥವಾ ಸಾಹಿತ್ಯ ಪರಿಷತ್ತುಗಳ ವಾರ್ಷಿಕ ಅಧಿವೇಶನದಂತೆ ಅದಕ್ಕೆ ಸ್ವಾಗತ ಸಮಿತಿಯ ರಚನೆಯಾಗಲಿ ಅಧ್ಯಕ್ಷರ ಆಯ್ಕೆಯಾಗಲಿ ಅವಶ್ಯವಿಲ್ಲ. ಗೊತ್ತುವಳಿಗಳನ್ನು ಅಂಗೀಕರಿಸುವ ಮಾತೂ ಇಲ್ಲ. ಇದು ನಮ್ಮ ಸಾಮುದಾಯಿಕ ಜೀವನದ ಮಹಾ ಪರ್ವಕಾಲವಾದೀತು. ಅದರಲ್ಲಿ ಬೇಕುಬೇಕಾದಷ್ಟು ಪರಿಷತ್ತುಗಳು ಅಡಕವಾಗಬಹುದು. ಜನೇವರಿ ೩೧ ನೆ ತಾರೀಖಿನ ದಿವಸ ಸಂಜೆಯೊಳಗೆ ಎಲ್ಲರೂ ತಮ್ಮ ಕೆಲಸ ಪೂರೈಸಿಕೊಂಡು ಚದರಬೇಕು. ಮೂರು ದಿನಗಳಿಗಿಂತ ಹೆಚ್ಚಿನ ಕಾರ್ಯಕ್ರಮ ನಿಷಿದ್ಧವೆಂದು ಪರಿಗಣಿಸಬೇಕು. ಒಂದು ಬಾರಿ ಒಂದು ಸ್ಥಳದಲ್ಲಿ ಜಾತ್ರೆ ಸೇರಿ ಕಾರ್ಯಕ್ರಮ ಪೂರ್ತಿಯಾದ ಬಳಿಕ ಐದು ವರ್ಷಗಳ ನಂತರವೇ ಅಲ್ಲಿ ಇನ್ನೊಮ್ಮೆ ಜಾತ್ರೆ ಸೇರುವದು

ಸ್ಥಿರ ನಿಶ್ಚಯವೇ ಮನುಷ್ಯಜಾತಿಯ ದೊಡ್ಡ ಸಂಪತ್ತು. ಅದರಲ್ಲೇ ರಾಷ್ಟ್ರದ ಚರಿತ್ರ ರೂಪುಗೊಳ್ಳುತ್ತದೆ, ಅದರಿಂದಲೇ ಸಮುದಾಯದ ಆತ್ಮ ಪ್ರಕಟವಾಗುತ್ತದೆ.

ನಾವು ಈ ವರ್ಷವೆ ಈ ನಿಶ್ಚಯ ಮಾಡೋಣವೆ? ಒಮ್ಮೆ ನಿಶ್ಚಯ ಮಾಡಿದ ನಂತರ ಪ್ರತಿವರ್ಷ ಜನೇವರಿ ೨೯, ೩೦, ೩೧ ಈ ಮೂರೂ ದಿನ ನಮಗೆ ಬೇರೆ ಕಾರ್ಯವೇ ಇರಲಾರದು. ಕಾರ್ಯಕರ್ತರೂ ಮುಂದಾಳುಗಳೂ ಭಕ್ತರೂ ಸೇವಕರೂ— ಎಲ್ಲರೂ ಅಂದು ಪರಸ್ಪರ ಸಹವಾಸದಲ್ಲೆ ಕಾಲಕಳೆಯುವೆವೆಂದು ಗೊತ್ತು ಮಾಡಿಕೊಳ್ಳಬೇಕು. ಬೇರೆ ಯಾವ ಕಾರ್ಯಕ್ರಮವಿದ್ದರೂ ಅದನ್ನು ಇದೇ ಕಾರ್ಯಕ್ರಮದಲ್ಲಿ ಒಳಪಡಿಸಬೇಕು. ಈ ಮೂರು ದಿನಗಳಲ್ಲಿ ನಾವು ಗಾಂಧೀಮಯರಾಗಿರಬೇಕು. ಮೂರುದಿನವಲ್ಲದಿದ್ದರೂ ಕಡಿಮೆಯೆಂದರೆ ಜನೆವರಿ ೩೦ ರ ದಿನದಲ್ಲಂತೂ ನಮ್ಮಲ್ಲಿ ಹೃದಯಗಳ ದಾನ-ಪ್ರತಿಗ್ರಹಗಳೇ ನಡೆಯಬೇಕು.

— ಕಾಕಾ ಕಾಲೇಲಕರ

ಸೂಚನೆ:

ಇದು ಕಾಕಾ ಸಾಹೇಬರ ಸೂಚನೆ. ಈ ಬಗ್ಗೆ ಪೂರ್ಣ ಚರ್ಚೆಯನ್ನೂ ಆಲೋಚನೆಯನ್ನೂ ಸರ್ವೋದಯ ಸಮಾಜದ ಸಮಿತಿಯಾಗಲಿ ರಾಜಘಾಟದಲ್ಲಿ ಸೇರಲಿರುವ ಕಾರ್ಯಕರ್ತರಾಗಲಿ ಮಾಡಬಲ್ಲರು. ಅವರ ನಿರ್ಣಯವಾದರೂ ಪೂರ್ತಿ ಪರ್ಯಾಲೋಚನೆಯ ನಂತರವೇ ಆಗಬಲ್ಲದು.

ಗಾಂಧೀಜಿಯ ಹೆಸರಲ್ಲಿ ಯಾವುದೊಂದು ಧಾರ್ಮಿಕ ಪಂಥವನ್ನಾಗಲಿ ರಾಜಕೀಯ ದಲವನ್ನಾಗಲಿ ನಿರ್ಮಿಸುವ ಗೊಡವೆ ನಮಗೆ ಬೇಡ. ಗಾಂಧೀಜಿಯ ಹೆಸರಿನೊಡನೆ ವಿಶೇಷ ಸಂಬಂಧವುಳ್ಳ ಸ್ಥಳಗಳ ಬಗ್ಗೆಯಾದರೂ ಅವು ಸದಾಕಾಲವೂ ತೀರ್ಥಕ್ಷೇತ್ರಗಳೆಂಬ ಮತ್ತು ಅವುಗಳ ಮಹಿಮೆ ಈ ಭೂಮಿಯಲ್ಲಿ ಅದ್ಭುತವಾದುದೆಂಬ ಭಾವನೆ ಬೇರೂರಲು ಎಡೆಗೊಡುವದು ತರವಲ್ಲ. ಆದುದರಿಂದ ಈ ಜಾತ್ರೆಯ ಕಲ್ಪನೆಯನ್ನು ಮುಂದೊತ್ತುವ ಮಾತನ್ನು ಚರ್ಚಿಸುವ ಮೊದಲು ಇವೆರಡು ಮಾತುಗಳನ್ನು ಮರೆಯದೆ ವಿಚಾರಿಸಿಕೊಳ್ಳಬೇಕೆಂದು ನನ್ನ ಬಿನ್ನಹ.

ಸ್ವಾಮೀ ವಿವೇಕಾನಂದರು ತಮ್ಮ ಕಾಲದ ಕೆಲ ತೀರ್ಥಕ್ಷೇತ್ರಗಳ ಅವಸ್ಥೆಯನ್ನು ಬರೆದಿಟ್ಟಿದ್ದಾರೆ. ಆ ಸ್ಥಾನಗಳನ್ನು ಅವರು "ನರಕದ ಕುಂಡ" ಎಂದು ಕರೆದಿದ್ದರು. ಈ ಶಬ್ದಗಳಿಂದ ಅನ್ಯ ಧರ್ಮಗಳ ಜನರೊಡನೆ ಜಗಳ ಏಳುವ ಸಂಭವವುಂಟೆಂದು ಸಂಗಡಿಗರು ತಿಳಿಸಿ ಹೇಳಿದ ನಂತರ ಅವರು "ಧರ್ಮದ ಕುಂಡ" ಎಂದು ಶಬ್ದಪಲ್ಲಟ ಮಾಡಿದರು. ಅದಕೆ ಕಾಲಾಂತರದಲ್ಲಿ ಎಲ್ಲ ತೀರ್ಥಗಳೂ ನರಕ ಕುಂಡಗಳಾಗುವವೆಂದು ನಾವು ಮರೆಯಕೂಡದು. ಆದ ಕಾರಣ ಯಾವದೊಂದು ಸ್ಥಳಕ್ಕೆ ನಾವು ಗಾಂಧೀತೀರ್ಥವೆನಿಸುವ ಅವಕಾಶ ದೊರೆಯದಂತೆ ನೋಡಿಕೊಳ್ಳಬೇಕು.

ಸಮಸ್ತ ಭಾರತದ ಜಾತ್ರೆ ನೆರೆಯಬೇಕು. ಮತ್ತು ಅದರ ಸುವ್ಯವಸ್ಥೆಯ ಭಾರ ಯಾರ ಮೇಲೂ ಇರಬೇಕಿಲ್ಲ, ಎಂಬೀ ಮಾತು ಸಮಂಜಸವೆಂದು ನನಗೆನಿಸುವದಿಲ್ಲ. ಇದರ ಅರ್ಥ ಏನೆಂದರೆ, ಇಡೀ ಜಾತ್ರೆಯ ವ್ಯವಸ್ಥೆಯ ಹೊಣೆಯನ್ನು ಅಲ್ಲಿನ ಸರಕಾರವೇ ವಹಿಸಬೇಕು. ಇದರಿಂದ ಹುಟ್ಟುವ ದುರವಸ್ಥೆಯ ಕಾರಣದಿಂದಲೇ ಬೇರೆ ಬೇರೆ ಸಮಾಜ ಸೇವಾ-ದಳಗಳು ಹುಟ್ಟಿವೆಯೆಂಬದನ್ನು ನಾವು ನೆನಪಿನಲ್ಲಿಡಬೇಕು. ಕಾಂಗ್ರೆಸ್ಸಿನ ಜಯಪುರದ ಅಧಿವೇಶನಕ್ಕೆ ಪ್ರಚಂಡ ಸ್ವಾಗತ ಸಮಿತಿಯಿತ್ತು, ಗಾಳಿಯಂತೆ ಎಲ್ಲೆಲ್ಲಿಯೂ ಹೊಕ್ಕು ಹೊರಡಬಲ್ಲ ಗೋಕುಲಭಾಯಿ ಭಟ್ಟರಂಥವರು ಅದರ ಮಾರ್ಗದರ್ಶಕರಾಗಿದ್ದರು; ಆದರೂ ಅವ್ಯವಸ್ಥೆಯ ಅಪವಾದ ತಪ್ಪಲಿಲ್ಲ. ಇಂಥ ದೊಡ್ಡದೊಡ್ಡ ಜಾತ್ರೆಗಳ ಏರ್ಪಾಡೆಂದರೇನು ಸಣ್ಣ-ಪುಟ್ಟ ಕೆಲಸವಲ್ಲ.

ಇದಲ್ಲದೆ, ಇಂಥ ಜಾತ್ರೆಗಳು ನೆರೆದು ಅವುಗಳ ಮೇಲೆ ಯಾರ ಹಿಡಿತವೂ ಇಲ್ಲದೆ ಹೋದರೆ, ಅದರ ಪರಿಣಾಮವಾಗಿ ಅಲ್ಲಿ ಜನರು ಸಂಸ್ಕೃತಿಯನ್ನು ಕಾಣದೆ ದುಷ್ಟ ಸಂಸ್ಕಾರಗಳ ಮೆರೆತವನ್ನೆ ಕಾಣುವರು. ಹೊಲಸು, ತಮಾಷೆಗಳು, ಜೂಜಾಟ, ಮಿಠಾಯಿ ಮತ್ತು ಇತರ ಕೀಳ್ತರದ ವಸ್ತುಗಳ ಅಂಗಡಿಗಳು, ಗೊಂದಲ, ಸಂದಣಿ, ಮತ್ತು ಧೂಳಿ ಇವೇ ಅಲ್ಲಿಯ ವೈಶಿಷ್ಟ್ಯಗಳಾಗಿಬಿಡುವವು. ಇದರಿಂದ ಎಲ್ಲರ [illegible] ಹರಿದು ಮನ ಬೇಸತ್ತು ಹೋಗುವದು. ಈಚೆಗೆ ನೃತ್ಯ, ನಾಟಕ, ರಾಸಕ್ರೀಡೆ, ಮೊದಲಾದವುಗಳನ್ನು "ಸಾಂಸ್ಕೃತಿಕ ಕಾರ್ಯಕ್ರಮ"ಗಳೆಂದು ಕರೆಯುವದೊಂದು ಫ್ಯಾಶನ್ ಆಗಿಹೋಗಿದೆ. ಈ ಕಾರ್ಯಕ್ರಮಗಳು ಸಂಸ್ಕಾರಗಳನ್ನು ಬೆಳೆಸುವವೋ ವಿಕಾರಗಳನ್ನೋ ಎಂಬುದು ಅವುಗಳನ್ನು ಏರ್ಪಡಿಸುವವರಿಗೂ ನೋಡುವವರಿಗೂ ಮಾತ್ರ ಗೊತ್ತು. ನಾನು ಹೇಳುವದಿಷ್ಟೆ. ಇಂಥ "ಸಾಂಸ್ಕೃತಿಕ ಕಾರ್ಯಕ್ರಮ"ಗಳೂ ಜಾತ್ರೆಗಳಲ್ಲಿ ಒಂದು ಅಂಗವಾಗಿ ಬೆರೆತುಹೋಗಿವೆ.

ಈ ಕಾರಣಗಳಿಂದ, ನನ್ನನ್ನು ಕೇಳಿದರೆ ಈ ಜಾತ್ರೆಗಳ ಮೇಲೆ ಕೆಳಕಾಣಿಸಿದ ನಿರ್ಬಂಧಗಳನ್ನು ಹೇರುವದು ಒಳಿತು:

೧ ಒಂದು ಸ್ಥಳದಲ್ಲಿ ಒಮ್ಮೆ ಜಾತ್ರೆ ನೇರಿದ ಮೇಲೆ ಕನಿಷ್ಠ ಮೂವತ್ತು ವರ್ಷಗಳ ವರೆಗೆ ಮತ್ತೆ ಅಲ್ಲಿ ಇನ್ನೊಮ್ಮೆ ಸೇರುವಂತಿರಕೂಡದು. (ಸಿಂಹಸ್ಥದ ಜಾತ್ರೆ ಹೆಚ್ಚು ಕಡಿಮೆ ೫೦ ವರ್ಷಗಳಾದ ಹೊರತು ಅದೇ ಸ್ಥಳದಲ್ಲಿ ಸೇರುವದಿಲ್ಲ.)

೨ ಈ ಜಾತ್ರೆಗೆ ಯಾರೂ ಸಾಯಕಲ್, ಎತ್ತಿನ ಬಂಡಿ, ಕುದುರೆಗಳ ಹೊರತು ಬೇರಾವ ಬಾಡಿಗೆಯ ವಾಹನಗಳಲ್ಲಿಯೂ ಬರಕೂಡದು. ಅಂದರೆ, ರೇಲುಗಾಡಿ, ಬಾಡಿಗೆಯ ಮೋಟಾರು, ಟ್ಯಾಕ್ಸಿ, ಲಾರಿ, ವಿಮಾನ ಮೊದಲಾದವುಗಳಲ್ಲಿ ಬರಕೊಡದು. ಸ್ವಂತದ ಇಲ್ಲವೆ ತನ್ನ ಮಿತ್ರನ ಮೋಟಾರಿನಲ್ಲಿ ಬೇಕಾದರೆ ಬರಲಡ್ಡಿಯಿಲ್ಲ. ರಿಕ್ಷಾ, ಪಲ್ಲಕಿ ಮೊದಲಾದ ಮಾನವ ವಾಹನಗಳಲ್ಲಿಯೂ ಯಾರೂ ಬರಕೂಡದು.

೩ ಈ ವಾಹನಗಳಲ್ಲಿ ಬರುವದಾದರೂ ತನ್ನ ಮನೆಯಿಂದ ಬಹಳವಾದರೆ ಮೂರು ದಿನದ ಪ್ರಯಾಣಕ್ಕಿಂತ ಹೆಚ್ಚು ದೂರದಿಂದ ಯಾರೂ ಬರತಕ್ಕದ್ದಲ್ಲ.

೪ ಜಾತ್ರೆಯಲ್ಲಿ ಯಾರೂ ಪರಾನ್ನವನ್ನು ಭುಂಜಿಸತಕ್ಕದ್ದಲ್ಲ, ಪೇಟೆಯ ಮಿಠಾಯಿ-ಚೂಡಾ ತಿನ್ನತಕ್ಕದ್ದೂ ಅಲ್ಲ.

೫ ಜಾತ್ರೆಯಲ್ಲಿ ಎಲ್ಲಿಯೂ ಹೊಲಸು ಮಾಡುವಂತಿಲ್ಲ, ಎಲ್ಲೆಡೆಯಲ್ಲಿಯೂ ಸ್ವಚ್ಛತೆಯನ್ನು ಕಾಪಾಡತಕ್ಕದ್ದೆಂಬ ನಿಯಮವನ್ನು ಎಲ್ಲರೂ ಪಾಲಿಸಬೇಕು.

೬ ಜನವರಿ ೩೦ ರ ಜಾತ್ರೆ ಆ ಸ್ಥಳದಲ್ಲಿ ನೆರೆಯುವದೆಂಬೊಂದೇ ಮಿತಿಯಿಂದ ಅದನ್ನು ಅಖಿಲ ಭಾರತ ಸ್ವರೂಪದ್ದೆಂದು ಪರಿಗಣಿಸತಕ್ಕದ್ದಲ್ಲದೆ ಅಲ್ಲಿ ಅಖಿಲ ಭಾರತದ ಜನರು ಕೂಡಬೇಕೆಂಬರ್ಥದಿಂದಲ್ಲ. ನಿಜವಾಗಿ ಆ ಸ್ಥಳದಿಂದ ಸಾಧಾರಣ ೫೦ ಮೈಲಿನೊಳಗಿನ ಜನರಷ್ಟೇ ಅಲ್ಲಿ ಸೇರಬೇಕು. ಸ್ಥಾನಿಕ ಕಾರ್ಯಕ್ರಮಗಳು ಎಲ್ಲಿ ಸರಿಯಾಗಿ ನಡೆಯಬಲ್ಲವೋ ಅಲ್ಲಿ ಜಾತ್ರೆ ಕೂಡಬೇಕು.

ನನ್ನ ಅಭಿಪ್ರಾಯಗಳಿವು. ನನ್ನ ಅಭಿಪ್ರಾಯಗಳಿಗೂ ಜನರ ಸಂಸ್ಕಾರಗಳಿಗೂ ಮಹದಂತರವಿದೆಯೆಂದು ನನಗೆ ಗೊತ್ತಿದೆ. ನಾನು ಎಲ್ಲಿಯೋ ಓದಿದ್ದು ನೆನಪಾಗುತ್ತದೆ: "ಅರ್ಯಾಃ ಉತ್ಸವಪ್ರಿಯಾಃ".

ರಾಜಘಾಟಿನ ಜಾತ್ರೆಯಲ್ಲಿ ಸೇರಲು ನಾನು ಅಸಮರ್ಥನಾಗಿದ್ದೇನೆ. ಅದಕ್ಕಾಗಿಯೆ ಇಲ್ಲಿ ನನ್ನ ವಿಚಾರಗಳನ್ನು ಪ್ರಸಿದ್ಧಿಸಿದ್ದೇನೆ. ಕೊನೆಯ ನಿರ್ಣಯ ರಾಜಘಾಟಿನಲ್ಲಿ ಸೇರುವ ವಿದ್ವಾಂಸರನ್ನು ಸೇರಿದೆ.

—ಕಿಶೋರಲಾಲ ಮಶ್ರೂವಾಲಾ

ಮುಂಬಯಿ
೮-೧-೪೯



ಭಾರತದಲ್ಲಿ ಸಾವಿರಾರು ಜನರು ಕಾಲರಾ ಬೇನೆ ಬಡಿದು ಸಾವಿನ ಬಾಯಿಗೆ ತುತ್ತಾಗುವರು. ಊರೂರಿಗೆ ಯಾತ್ರೆಗೆ ಹೋಗುವವರಿಗೆ ಈ ಬೇನೆ ಯಾವಾಗ ಬಡೆದೀತು ಎಂಬದರ ಗೊತ್ತೆ ಇಲ್ಲ. ಕಾಲರಾದ ಸಂಶಯ ಬಂದ ಕೂಡಲೇ ಜವೇರಿಯನ್ ಜೀವನ ಮಿಕ್ಶ್ಚರದ ಒಂದೆರಡು ಹನಿ ನೀರಲ್ಲಿ ಹಾಕಿ ಕುಡಿದರೆ ಜೀವ ಉಳಿಯುವದು. ಅತಿಸಾರ, ಮಕ್ಕಳ ಅಪಚನ, ಹೊಟ್ಟೆ ಉಬ್ಬುವದು, ಶೀತ, ನೆಗಡಿ, ಹಲ್ಲು ನೋವು, ಹೊಟ್ಟೆ ನೋವು, ಮುಂತಾದ ಸಣ್ಣ ದೊಡ್ಡ ಬೇನೆಗಳಿಗಾಗಿ ಬಹಳೇ ಗುಣಕಾರಿಯಾದ್ದರಿಂದ ಮನೆಯಲ್ಲಿಯೂ, ಪ್ರವಾಸ ಮಾಡುವಾಗಲೂ ಹತ್ತರ ಈ ಔಷಧದ ಒಂದು ಬಾಟಲಿ ಇಟ್ಟುಕೊಂಡರೆ ಬೇನೆಯ ಭಯವೂ ಹೋಗುವದು ಮತ್ತೂ ಡಾಕ್ಟರರಿಗೆ ಕೊಡಬೇಕಾದ ಹಣವೂ ಉಳಿಯುವದು. ಕೆಮಿಸ್ಟರಲ್ಲಿಯೂ ಹಳ್ಳಿಪಳ್ಳಿಗಳಲ್ಲಿಯ ಅಂಗಡಿಗಳಲ್ಲಿಯೂ ಸಿಗುವುದು.



ಉಚ್ಚ ವರ್ಗಗಳಲ್ಲಿ ಚರಕಾ

"ಹರಿಜನ" ದಲ್ಲಿ ಶ್ರೀ ಕಿ. ಘ. ಮಶ್ರುವಾಲಾ ಅವರಿಂದ

ಹಿಂದೆ ಓಡಿಸಾದ ಗವರ್ನರರೂ ಈಗ ಪಶ್ಚಿಮ ಬಂಗಾಲದ ಗವರ್ನರರೂ ಆದ ಡಾ. ಕೈಲಾಸನಾಥ ಕಟಜೂ ಅವರ ನೂಲು ತೆಗೆಯುವ ಚಟುವಟಿಕೆಗಳ ವಿಷಯದಲ್ಲಿ ಬಹುಕಾಲದಿಂದಲೂ ನನಗೆ ವಿಶ್ವಸನೀಯ ವರದಿಗಳು ಬರುತಿವೆ. ಓದುಗರಿಗೆ ಅವುಗಳ ವಿವರಗಳನ್ನು ತಿಳಿಸಿಕೊಡುವ ಸಂಧಿಯನ್ನು ಕಾಯುತಿದ್ದೆ. ಅವರು ಓಡಿಸಾದ ಗವರ್ನರರಾಗಿದ್ದ ಅಲ್ಪಾವಧಿಯಲ್ಲಿ ನಗರಗಳಲ್ಲಿಯೂ ಹಳ್ಳಿಗಳಲ್ಲಿಯೂ ಚರಕವನ್ನು ಜನಪ್ರಿಯವಾಗಿ ಮಾಡಲು ಪ್ರಯತ್ನಿಸುತಿದ್ದರು. ಕಟಕದ ಸರಕಾರಿ ಭವನದಲ್ಲಿ ಅವರೊಂದು ನೂಲುವ ಕೇಂದ್ರವನ್ನು ಸ್ಥಾಪಿಸಿದ್ದರು. ಅವರು ಸ್ಥಾನದಲ್ಲಿದ್ದಾಗೆಲ್ಲ ಅಲ್ಲಿ ನಿತ್ಯ ನೂಲುತಿದ್ದರು. ಅಲ್ಲಿ ಸರ್ವರಿಗೂ ಸ್ವಾಗತವಿತ್ತು. ದಿನಾಲೂ ಮೂವತ್ತು ನಲವತ್ತು ಜನರು – ಸ್ತ್ರೀಪುರುಷಬಾಲಕರು – ಅಲ್ಲಿ ಹಾಜರಿರುತಿದ್ದರು. ಕಟಕ ನಗರದ ಇತರ ಸ್ಥಳಗಳಲ್ಲಿಯೂ ನಾಲ್ಕೈದು ಕೇಂದ್ರಗಳು ಸ್ಥಾಪಿತವಾಗಿದ್ದವು ಪ್ರಗತಿ ಮಂದವಾಗಿತ್ತು. ನವೆಂಬರದಿಂದ ಎಪ್ರಿಲ್ ವರೆಗೆ ಡಾ. ಕಟಜೂ ಗ್ರಾಮಾಂತರ ಪ್ರವಾಸವನ್ನು ಕೈಕೊಂಡಾಗ ಪ್ರತಿಜಿಲ್ಹೆಯಲ್ಲೂ ದೂರ ದೂರದ ವರೆಗೆ ಸಂಚರಿಸುತಿದ್ದರು. ದಿನಾಲೂ ಮೋಟಾರಿನಲ್ಲಿ ೭೦-೮೦ ಮೈಲು ಸಂಚರಿಸಿ ಐದಾರು ಮುಖ್ಯ ಹಳ್ಳಿಗಳನ್ನು ಸಂದರ್ಶಿಸುವದು ಅವರ ಕ್ರಮವಾಗಿತ್ತು. ಪ್ರತಿ ಹಳ್ಳಿಯಲ್ಲಿ ಒಂದು ಸಾರ್ವಜನಿಕ ಸಭೆ ಮತ್ತು ಅದರಲ್ಲಿ ಒಂದು ನೂಲುವ ಪ್ರದರ್ಶನ ಇವು ಸಾಮಾನ್ಯ ವೈಶಿಷ್ಟ್ಯಗಳಾಗಿದ್ದವು. ನೂಲುವ ನಿದರ್ಶನದಲ್ಲಿ ಡಾ. ಕಟಜೂ ಅವರು ತಪ್ಪದೆ ಭಾಗವಹಿಸುತಿದ್ದರು. ಓಡಿಸಾದ ಹಲ ಭಾಗಗಳಲ್ಲಿ ಅವರು ಅನೇಕ ನೂಲುವ ಕೇಂದ್ರಗಳನ್ನು ಸ್ಥಾಪಿಸಿದರು. ಅವರು ಆ ಕೇಂದ್ರಗಳಿಗೆ ಸ್ವತಃ ಸ್ವಲ್ಪ ಹಣ ಕೊಡುತಿದ್ದರಲ್ಲದೆ, ತಾವು ನೂತ ನೂಲನ್ನು ಅಥವಾ ತಮಗೆ ಕೊಡಲಾದ ಮಾನಪತ್ರಗಳನ್ನು ಸಾರ್ವಜನಿಕ ಸಭೆಗಳಲ್ಲಿ ಲಿಲಾವು ಮಾಡಿ, ಆ ಹಣವನ್ನೂ ಅವುಗಳಿಗೆ ಕೊಡುವ ಮೂಲಕ ಸಹಾಯ ಮಾಡುತಿದ್ದರು. ಇದು ಅವರ ಹೃದಯಕ್ಕೆ ಮೆಚ್ಚುವ ಕೆಲಸವಾಗಿತ್ತು. ಅದರಲ್ಲಿ ಅವರಿಗೆ ಆನಂದವೂ ದೊರಕುತಿತ್ತು.

ಕಲಕತ್ತೆಯಲ್ಲಿ ಅವರು ಬಂದಿಳಿದಾಗ ಚರಕಾ-ಮನೋವೃತ್ತಿ ಅಲ್ಲಿ ಲೇಶವೂ ಇಲ್ಲದುದನ್ನು ಕಂಡುಕೊಂಡರು. ಸೋದೇಪುರದ ಚರಕಾ ಕೇಂದ್ರವಿತ್ತು ನಿಜ; ಆದರೆ ಬಾಪೂಜಿಯವರು ನವಾಖಾಲಿಗೆ ಹೋದಂದಿನಿಂದ ಶ್ರೀ. ಸತೀಶ ಬಾಬುಗಳೂ ಅವರ ಸಂಗಡಿಗರೂ ನೌಖಾಲಿಯ ಕಡೆಗೇ ಗಮನವೀಯುತ್ತ ಬಂದುದರಿಂದ ಸೋದೇಪುರದ ಕೆಲಸ ಇಳಿಮುಖವಾಗಿತ್ತು. ಡಾ. ಕಟಜೂ ಕಲಕತ್ತೆಗೆ ಹೊಸಬರು. ಆದುದರಿಂದ ಅವರು ತಮ್ಮ ಸ್ವಂತ ವಸತಿಯಲ್ಲಷ್ಟೆ ಒಂದು ಕೇಂದ್ರವನ್ನು ಸ್ಥಾಪಿಸಲು ಸಮರ್ಥರಾದರು. ಪ್ರತಿ ಗುರುವಾರ ಸೇರಿ ನಿರಾಶ್ರಿತರಿಗಾಗಿ ಅಂಗಿ ಮೊದಲಾದವುಗಳನ್ನು ನೇಯುವ ಮಹಿಳಾ ಕೇಂದ್ರವೊಂದು ಅಲ್ಲಿತ್ತು. ಅವರ ಕೆಲಸವೂ ಮುಗಿದುದರಿಂದ ಕೇಂದ್ರವನ್ನು ವಿಸರ್ಜಿಸುವ ವಿಚಾರದಲ್ಲಿ ಆ ಮಹಿಳೆಯರು ಪ್ರಸ್ತುತರಾಗಿದ್ದರು. ಬದಲಿಗೆ ಅದನ್ನು ನೂಲುವ ಕೇಂದ್ರವಾಗಿ ಮಾರ್ಪಡಿಸಬಾರದೇಕೆಂದು ಡಾ. ಕಟಜೂ ಸೂಚಿಸಿದರು. ಹೀಗೆ ಆ ವರ್ಗ ಉಳಿದುಕೊಂಡಿತು. ಮಧ್ಯಮ ವರ್ಗದ, ೪೦-೫೦ ಹೆಂಗಸರು ಅದರಲ್ಲಿ ಸೇರಿ ಪ್ರತಿ ಗುರುವಾರ ಒಟ್ಟುಗೂಡಿ ನೂಲುವದನ್ನು ಕಲಿತರು. ಅವರಲ್ಲಿ ಕೆಲವರು ಶ್ರೀಮಂತರ ಬಳಗದವರಿದ್ದರು. ಆಗಸ್ಟ ಅಂತ್ಯದೊಳಗೆ ಕಲಕತ್ತೆಯ ವಿವಿಧ ಭಾಗಗಳಲ್ಲಿ ಮತ್ತೆ ೫ ಕೇಂದ್ರಗಳು ಹುಟ್ಟಿದವು. ಡಾ. ಕಟಜೂ ಅವರು ಅವುಗಳಿಗೆ ೫೦೦ ರೂಪಾಯಿ ಸಹಾಯಧನವನ್ನು ಕೊಟ್ಟರು. ಮಹಿಳೆಯರೂ ಸಾರ್ವಜನಿಕರಿಂದ ರೂ. ೩೩೦೦ ಕೂಡಿಸಿದರು. ನೂಲುವದನ್ನು ಪ್ರಸಾರಪಡಿಸಲು ಒಂದು ಪರಿಷ್ಕಾರವಾದ ಯೋಜನೆಯನ್ನೇ ಅವರು ಸಿದ್ಧಗೊಳಿಸಿದರು. ಮಹಿಳೆಯರಲ್ಲಿ ಕೆಲವರು ತುಂಬ ಆಸಕ್ತಿ ತೋರಿಸಿದರಲ್ಲದೆ ಕೆಲವರಲ್ಲಿ ವಿಶೇಷ ಸಂಘಟನಶಕ್ತಿ ಕಂಡುಬಂತು. ಆಗಲೆ ಅವರು ೭೦ ಚರಕಗಳನ್ನು ಕೊಂಡಿದ್ದರಲ್ಲದೆ ಇನ್ನು ನೂರಾರು ಚರಕಗಳಿಗೆ ಆರ್ಡರು ಕೊಟ್ಟಿದ್ದರು.

ಮಳೆಗಾಲ ಮುಗಿದ ಬಳಿಕ ಓಡಿಸಾದಲ್ಲಿ ಮಾಡಿದಂತೆ ಬಂಗಾಲದಲ್ಲಿಯೂ ಹಳ್ಳಿಗಳನ್ನು ಸಂದರ್ಶಿಸಿ ಪ್ರತಿ ಹಳ್ಳಿಯಲ್ಲಿ ಮೂರು ನಾಲ್ಕು ತಾಸು ಕಳೆದು ಸ್ಥಾನಿಕ ಶಾಲೆ, ಹರಿಜನ ವಸತಿ, ಔಷಧಾಲಯಗಳ ಪರಿದರ್ಶನ ಮಾಡಬೇಕೆಂದೂ ಒಂದು ಸಾರ್ವಜನಿಕ ಸಭೆಯನ್ನು ನೆರೆಸಿ ಅಲ್ಲಿ ಹಳ್ಳಿಗರನ್ನು ಆಮಂತ್ರಿಸಬೇಕೆಂದೂ ಸಾಧ್ಯವಾದರೆ ಒಂದೊಂದು ನೂಲುವ ನಿದರ್ಶನವನ್ನು ಜರಗಿಸಿ ಅದರಲ್ಲಿ ತಪ್ಪದೆ ತಾವು ಸ್ವತಃ ಭಾಗವಹಿಸಬೇಕೆಂದೂ ಡಾ. ಕಟಜೂ ಅವರು ಸಂಕಲ್ಪಿಸಿದರು.

ಇದು ನಡೆದುದು ಸೆಪ್ಟೆಂಬರ ಆರಂಭದಲ್ಲಿ. ಅಕ್ಟೋಬರ ಮಧ್ಯದಲ್ಲಿ ನನಗೆ ಇನ್ನೊಂದು ವರದಿ ಬಂತು. ಅದರಲ್ಲಿ ಮಾನ್ಯ ಗವರ್ನರರ ಚಟುವಟಿಕೆಗಳ ಪ್ರಗತಿಯನ್ನು ಕಾಣಿಸಿತ್ತು.

ಅಷ್ಟರಲ್ಲಿ ಸರಕಾರಿ ಭವನದ ಕೇಂದ್ರದಲ್ಲಿ ನೂಲುವವರ ಸಂಖ್ಯೆ ಬೆಳೆದಿತ್ತು ಮಾತ್ರವಲ್ಲ, ಕಲಕತ್ತೆಯ ಬೇರೆ ಬೇರೆ ಸ್ಥಾನಗಳಲ್ಲಿ ಆರು ಕೇಂದ್ರಗಳು ಸ್ಥಾಪಿಸಲ್ಪಟ್ಟಿದ್ದವು. ಈ ಚಟುವಟಿಕೆಗಳ ಅಧ್ವರ್ಯುಗಳಾದ ಮಹಿಳೆಯರು, ಸೆಪ್ಟೆಂಬರ ೨೭ ರಿಂದ ಅಕ್ಟೋಬರ ೩ ರ ವರೆಗೆ ಗಾಂಧೀಜಯಂತಿಯನ್ನು ಒಂದು ಸಪ್ತಾಹದ ವರೆಗೆ ಆಚರಿಸಲು ತಮ್ಮದೇ ಆದ ಯೋಜನೆಯನ್ನು ಏರ್ಪಡಿಸಿಕೊಂಡರು. ಈ ಕೇಂದ್ರಗಳಲ್ಲಿ ಅನೇಕ ನೂಲುವ ನಿದರ್ಶನಗಳನ್ನು ಏರ್ಪಡಿಸಲಾಗಿತ್ತು. ಅವುಗಳಲ್ಲಿ ಮೂರರಲ್ಲಿ ಡಾ. ಕಟಜೂರವರು ಸ್ವತಃ ಭಾಗವಹಿಸಿ ನೂಲುವದರಲ್ಲಿ ಒಂದೊಂದು ತಾಸನ್ನು ಆನಂದದಿಂದ ಕಳೆದರು. ಪ್ರತಿ ಕೇಂದ್ರದಲ್ಲಿಯೂ ಇನ್ನೂರು ಮುನ್ನೂರು ಸ್ತ್ರೀಪುರುಷ ಬಾಲಕರು ನೆರೆದಿದ್ದರು. ಮುಖ್ಯ ಸಮಾರಂಭ ಅಕ್ಟೋಬರ ೨ಕ್ಕೆ ಸರಕಾರಿ ಭವನದಲ್ಲಿ ಜರಗಿತು. ಅಲ್ಲಿ ಕೇವಲ ನೂಲಿನ ನಿದರ್ಶನ ಮಾತ್ರವಲ್ಲ, ನೂಲುವದಕ್ಕೆ ಸಂಬಂಧಿಸಿದ ಎಲ್ಲ ಕ್ರಿಯಾವಸ್ಥೆಗಳು ನಿರ್ದಶಿಸಲ್ಪಟ್ಟವು. ಅದು ಎಣಿಕೆ ಮೀರಿ ಯಶಸ್ವಿಯಾಯಿತು. ಎಲ್ಲ ಜಾತಿ ಪಂಗಡಗಳ ಎಲ್ಲ ವಯಸ್ಸಿನ ೭೦೦ ಜನರು ಈ ಪಾವನ ಸಮಾರಂಭದಲ್ಲಿ ಭಾಗವಹಿಸಿದ್ದರು ಡಾ ಕಟಜೂ ಅವರು ಹೇಳಿದಂತೆ, ಅವರು ಆ ಮೂಲಕ ತಮ್ಮನ್ನು ಪರಿಶುದ್ಧ ಮಾಡಿಕೊಂಡದ್ದಲ್ಲದೆ, ಸರಕಾರಿ ಭವನದಲ್ಲಿ ನಡೆದಿರಬಹುದಾದ ಹಳೆಯ ದೋಷಗಳಿಗೂ ಪ್ರಾಯಶ್ಚಿತ್ತ ಮಾಡಿದಂತಾಯಿತು.

ರಾಷ್ಟ್ರದ ಅಥವಾ ಪ್ರಾಂತದ ಪರಮೋಚ್ಚ ಅಧಿಕಾರಿಯಾದರೂ ಸರ್ವೋದಯ ರಚನಾತ್ಮಕ ಕಾರ್ಯಕ್ರಮದಲ್ಲಿ ಹೇಗೆ ಸಹಾಯಕನಾಗಬಹುದೆಂದು ತೋರಿಸಿಕೊಡುವ ಸಲುವಾಗಿ ಮೇಲಿನ ವೃತ್ತಾಂತವನ್ನು ಪ್ರಕಟಿಸಿದ್ದೇನೆ.

ಮುಂಬಯಿ

೧ ೧-೪೯

ಕರ್ನಾಟಕ ಪ್ರಾಂತವನ್ನು ಕೂಡಲೆ ರಚಿಸಬೇಕು

ಏಕೀಕರಣ ಮಹಾ ಸಮಿತಿಯ ಸಭೆಯ ವಿವರಗಳು

ಕರ್ನಾಟಕ ಏಕೀಕರಣ ಮಹಾಸಮಿತಿಯ ವಾರ್ಷಿಕ ಅಧಿವೇಶನವು ೨೩ ಜನವರಿ ೧೯೪೯ನೇ ದಿವಸ ಹುಬ್ಬಳ್ಳಿಯಲ್ಲಿ ಅಧ್ಯಕ್ಷ ಶ್ರೀ ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಸೇರಿ ಕೆಳಗಿನ ಗೊತ್ತುವಳಿಗಳು ಸ್ವೀಕೃತವಾದವು. ಸಭೆಗೆ ಕರ್ನಾಟಕದ ಎಲ್ಲ ಭಾಗಗಳಿಂದ ಸದಸ್ಯರೂ ಆಮಂತ್ರಿತ ಗೃಹಸ್ಥರೂ ಬಂದಿದ್ದರು

(೧) ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯು ಹರಿಹರದಲ್ಲಿ ಕೂಡಿದ ವಿಶೇಷ ಸಾಧಾರಣ ಸಭೆಯಲ್ಲಿ ಸ್ವೀಕೃತವಾದ ಗೊತ್ತುವಳಿಯನ್ನು ಈ ಸಭೆ ಪೂರ್ಣವಾಗಿ ಅನುಮೋದಿಸುತ್ತ

(೨) ಭಾಷಾನ್ವಯ ಪ್ರಾಂತ ಸಮಿತಿಯ ವರದಿಯು ತೀರ ಪ್ರತಿಗಾಮಿಯಾಗಿದೆಂದು ಅದನ್ನು ನಿಷೇಧಿಸಿ ಘಟನಾ ಸಮಿತಿಯು, ಹಿಂದುಸ್ಥಾನ ಸರಕಾರವು ಮತ್ತು ಕಾಂಗ್ರೆಸ್ಸು ಅದರ ಅಭಿಪ್ರಾಯವನ್ನು ನಿರಾಕರಿಸಬೇಕೆಂದು ಬಿನ್ನವಿಸುತ್ತದೆ.

(೩) ಮೈಸೂರ ಸಂಸ್ಥಾನ, ಹಿಂದುಸ್ಥಾನ ಒಕ್ಕೂಟದಲ್ಲಿಯ ವಿಲೀನ ಸಂಸ್ಥಾನ ಪ್ರದೇಶಗಳು ಮತ್ತು ಹೈದರಾಬಾದ ಹಾಗೂ ಕೊಲ್ಹಾಪುರ ಸಂಸ್ಥಾನಗಳಲ್ಲಿಯ ಕನ್ನಡ ಪ್ರದೇಶಗಳನ್ನೊಳಗೊಂಡ ಕರ್ನಾಟಕ ಪ್ರಾಂತವನ್ನು ಕೂಡಲೆ ರಚಿಸಬೇಕೆಂಬುದರ ಆವಶ್ಯಕತೆಯನ್ನು ಒತ್ತಿ ಹೇಳುತ್ತದೆ.

(೪) ಕರ್ನಾಟಕ ಪ್ರಾಂತಕ್ಕೆ ಮೈಸೂರು ಮಹಾರಾಜರನ್ನು ಘಟನಾಬದ್ಧ ಅಧಿಪತಿಗಳಾಗಿ ಸ್ವೀಕರಿಸುತ್ತದೆ. ಮತ್ತು ಹಿಂದುಸ್ಥಾನದ ಹೊಸ ಘಟನೆಯು ಜಾರಿಯಲ್ಲಿ ಬರುವಷ್ಟೊತ್ತಿಗೆ ಏಕೀಕೃತ ಕರ್ನಾಟಕ ಪ್ರಾಂತವನ್ನು ರಚಿಸಲು ಅನುಕೂಲವಾಗುವಂತೆ ಆವಶ್ಯಕವಾದ ಉಪಾಯಗಳನ್ನು ಯೋಜಿಸಲು ಮೈಸೂರು ಜನತೆ ಮತ್ತು ಸರಕಾರಕ್ಕೆ ಬಿನ್ನವಿಸಿಕೊಳ್ಳುತ್ತದೆ.

ಹಿಂದುಸ್ಥಾನ ಸರಕಾರದ ೧೯೩೫ರ ಕಾಯದೆಗೆ ತಿದ್ದುಪಡಿಮಾಡುವ ಬಗ್ಗೆ ಘಟನಾ ಸಮಿತಿ ಇತ್ತೀಚಿಗೆ ಸ್ವೀಕರಿಸಿದ ಗೊತ್ತುವಳಿಯನ್ನು ಈ ಸಭೆಯು ಸ್ವಾಗತಿಸುತ್ತದೆ ಹಿಂದುಸ್ಥಾನ ಸರ್ಕಾರದ ೧೯೩೫ನೇ ಕಾಯದೆಯ ೨೯೦ನೇ ಕಲಮಿನಿಂದ ಸಂಯುಕ್ತವಾದ ಈ ಕಾಯದೆಯು ವಿಸ್ತರಿಸಲ್ಪಟ್ಟು ಹಿಂದುಸ್ಥಾನ ಒಕ್ಕೂಟ ಪ್ರದೇಶವನ್ನು ಒಂದುಗೂಡಿಸಿ ಕೂಡಲೆ ಒಂದು ಸ್ವತಂತ್ರ ಪ್ರಾಂತವನ್ನು ರಚಿಸಲು ಅವಕಾಶವನ್ನು ಕಲ್ಪಿಸಿಕೊಟ್ಟಿದೆ. ಆದುದರಿಂದ (೧) ಕರ್ನಾಟಕ ಪ್ರಾಂತವನ್ನು ಕೂಡಲೆ ರಚಿಸಲು ಕೇಂದ್ರ ಸರಕಾರವನ್ನು (೨) ಅದರ ಮೊದಲ ಹೆಜ್ಜೆಯೆಂದು ಹೊಸ ಘಟನೆಯಲ್ಲಿ ಕರ್ನಾಟಕ ಸ್ವತಂತ್ರ ಪ್ರಾಂತದ ಉಲ್ಲೇಖವನ್ನು ಮಾಡುವಂತೆ ಘಟನಾ ಸಮಿತಿಯನ್ನೂ ಈ ಸಭೆ ಬಿನ್ನವಿಸಿಕೊಳ್ಳುತ್ತದೆ.

ಭಾಷಾನ್ವಯ ಪ್ರಾಂತ ಸಮಿತಿಯ ವರದಿಯಿಂದ ಕರ್ನಾಟಕದಲ್ಲಿ ಉಂಟಾದ ತೀವ್ರ ಅಸಂತೋಷವನ್ನು ಜಯಪುರ ಕಾಂಗ್ರೆಸ್ಸು ನೇಮಿಸಿದ ತ್ರಿಮೂರ್ತಿಗಳ ಸಮಿತಿಯು ಚೆನ್ನಾಗಿ ಗಮನಿಸಿದೆಯೆಂದು, ಹೊಸ ಘಟನೆಯು ಅಸ್ತಿತ್ವದಲ್ಲಿ ಬರುವ ಮೊದಲೆ ಕರ್ನಾಟಕ ಸ್ವತಂತ್ರ ಪ್ರಾಂತವನ್ನಾಗಿ ಮಾಡಬೇಕೆಂದು ಪುರಸ್ಕಾರ ಮಾಡುವದೆಂದು ಈ ಮಹಾ ಸಮಿತಿಯು ಆಶಿಸುತ್ತದೆ. ಆದರೆ ಯಾವದೇ ಕಾರಣದಿಂದ ಈ ತ್ರಿಮೂರ್ತಿಗಳ ಸಮಿತಿಯು ತದ್ವಿರುದ್ಧ ನಿರ್ಣಯಕ್ಕೆ ಬಂದರೆ ಕರ್ನಾಟಕದಲ್ಲೆಲ್ಲ ತೀವ್ರತರವಾದ ಅಸಂತೋಷ ಅಸಮಾಧಾನ ಉಂಟಾಗುವದೆಂದು ಕರ್ನಾಟಕದಲ್ಲಿಯ ಕಾಂಗ್ರೆಸ ಸಂಸ್ಥೆ, ಅ. ಕ. ಏಕೀಕರಣ ಸಂಘ, ಕರ್ನಾಟಕ ಪತ್ರ ಸಂಘ, ಪ್ರಾಂತೀಯ ಮತ್ತು ಕೇಂದ್ರ ಶಾಸನ ಸಭೆಗಳಲ್ಲಿರುವ ಕರ್ನಾಟಕ ಸದಸ್ಯರ ಮತ್ತು ಕರ್ನಾಟಕದಲ್ಲಿಯ ಇತರ ಸಂಘ ಸಂಸ್ಥೆಗಳ ಅಭಿಪ್ರಾಯಗಳನ್ನು ಪ್ರತಿಬಿಂಬಿಸುತ್ತಿರುವ ಈ ಮಹಾಸಮಿತಿಯು ಕಾಂಗ್ರೆಸ್ಸು, ಘಟನಾ ಸಮಿತಿ ಮತ್ತು ಹಿಂದುಸ್ಥಾನ ಸರಕಾರದ ಗಮನಕ್ಕೆ ತರಬಯಸುತ್ತದೆ.

(೩) ಮುಂಬಯಿ ಸರಕಾರದವರು ಸಾಂಗಲಿ ಜಿಲ್ಹೆಯನ್ನು ರಚಿಸುವ ಯೋಜನೆಯತ್ತ ಈ ಸಭೆಯು ತೀವ್ರವಾದ ಲಕ್ಷ್ಯವನ್ನು ಪೂರಯಿಸಿದೆ ಮತ್ತು ಸಾತಾರಾ ಜಿಲ್ಹೆಯಲ್ಲಿ ಮರಾಠಿ ಪ್ರಾಬಲ್ಯವುಳ್ಳ ಪ್ರದೇಶದೊಡನೆ ವಿಲೀನ ಕನ್ನಡ ಪ್ರದೇಶಗಳನ್ನು ಕೂಡಿಸಿ ಎರಡೂ ಭಾಷೆಗಳ ಜನರಲ್ಲಿ ಶಾಶ್ವತವಾದ ಕಲಹಕ್ಕೆ ಅವಕಾಶವನ್ನು ಕಲ್ಪಿಸಿ ಕೊಡುವಂತಹದಿರುವದರಿಂದ ಕರ್ನಾಟಕ ಹಿತಸಂಬಂಧಗಳಿಗೆ ಈ ರಚನೆಯು ತೀರ ವಿಘಾತಕವಾಗಿದೆಯೆಂದು ಈ ಸಭೆ ಅಭಿಪ್ರಾಯಪಡುತ್ತದೆ. ಮುಖ್ಯಮಂತ್ರಿಗಳು ಮತ್ತು ಗೃಹಮಂತ್ರಿಗಳು ಕರ್ನಾಟಕದ ಹಿತಸಂಬಂಧಗಳಿಗೆ ವಿಘಾತಕವಾಗುವ ರೀತಿಯಲ್ಲಿ ಏನನ್ನೂ ಮಾಡುವದಿಲ್ಲೆಂದು ಆಶ್ವಾಸನವನ್ನು ಕೊಟ್ಟಿದ್ದರೂ ಸರಕಾರವು ಅತ್ತ ಗಮನಿಸದಿದ್ದುದನ್ನೂ ವಿಷಾದ ಪೂರ್ವಕವಾಗಿ ಗಮನಿಸುತ್ತದೆ. ಅಲ್ಲದೆ ಕರ್ನಾಟಕ ಪ್ರಾಂತೀಯ ಕಾಂಗ್ರೆಸ ಸಮಿತಿಯವರೂ ಶಾಸನ ಸಭೆಗಳಲ್ಲಿಯ ಕರ್ನಾಟಕದ ಸದಸ್ಯರೂ ಇದನ್ನು ನಿಷೇಧಿಸಬೇಕೆಂದು ಬಿನ್ನವಿಸುತ್ತದೆ.

ಕೊಲ್ಹಾಪುರ ಸಂಸ್ಥಾನವು ಬೇಗನೆ ವಿಲೀನವಾಗುವದು ನಿಶ್ಚಿತವಾಗಿರುವದಾದ್ದರಿಂದ ಈ ಜಿಲ್ಹೆಗಳ ಪುನರ್ರಚನೆಯ ವಿಷಯವನ್ನು ವಿಶೇಷತಃ ಕೊಲ್ಹಾಪುರ, ಸಾಂಗಲಿ, ಮಿರಜಿ (ಹಿರಿ-ಕಿರಿ) ಕುರಂದವಾಡ (ಹಿರಿ) ಮತ್ತು ಜತ್ತ ಸಂಸ್ಥಾನ ಪ್ರದೇಶಗಳಿಗೆ ಸಂಬಂಧಿಸಿದ ಜಿಲ್ಹೆಗಳನ್ನು ಪುನರ್ರಚಿಸುವವನ್ನು ಕೊಲ್ಹಾಪುರ ಸಂಸ್ಥಾನ ವಿಲೀನ ಹೊಂದುವವರೆಗೆ ಮುಂದೂಡಬೇಕೆಂದೂ ಹೀಗೆ ಮಾಡುವಾಗ, ಕರ್ನಾಟಕ ಮತ್ತು ಮಹಾರಾಷ್ಟ್ರದ ಪ್ರಾತಿನಿಧಿಕ ಅಭಿಪ್ರಾಯವನ್ನು ತಿಳಿದುಕೊಳಬೇಕೆಂದೂ ಕೇಳಿಕೊಳ್ಳುತ್ತದೆ.

ಅಧ್ಯಕ್ಷ ಶ್ರೀ ನಿಜಲಿಂಗಪ್ಪನವರಿಗೆ ಬರಲು ತಡವಾದ್ದರಿಂದ ಕೆಲಸಮಯ ಶ್ರೀ ಮುನವಳ್ಳಿಯವರು ಅಧ್ಯಕ್ಷತೆ ವಹಿಸಿದ್ದರು. ಜನಾಬ ಶಮಾಡಸಾಹೇಬರು, ಕೆ. ಗುರುರಾಜರಾಯರು ಮತ್ತು ದೇಸಾಯಿ ನರಸಿಂಗರಾಯರ ನಿಧನದ ಬಗ್ಗೆ ಶೋಕ ಪ್ರದರ್ಶಕ ಗೊತ್ತುವಳಿ ಸ್ವೀಕೃತವಾಯಿತು. ಹಿಂದಿನ ವರುಷದ ಲೆಕ್ಕ ಸ್ವೀಕೃತವಾಗಿ ಮುಂದಿನ ವರುಷದ ಅಂದಾಜ ಪತ್ರಿಕೆಯೂ ಮಂಡಿಸಲ್ಪಟ್ಟಿತು. ಅನಂತರ ಮೇಲೆ ಹೇಳಿದ ಗೊತ್ತುವಳಿಗಳು ಸ್ವೀಕೃತವಾದ ಬಳಿಕ ಹೊಸ ಅಧಿಕಾರಿ ವರ್ಗವನ್ನು ಆರಿಸಲಾಯಿತು. ಅಧ್ಯಕ್ಷರು ಶ್ರೀ ನಿಜಲಿಂಗಪ್ಪನವರು, ಉಪಾಧ್ಯಕ್ಷರು ಶ್ರೀ ಕೆ ಎಫ್. ಪಾಟೀಲ, ಕರಮರಕರ ಮತ್ತು ಜಿನರಾಜ ಹೆಗಡೆ, ಕಾರ್ಯದರ್ಶಿಗಳು ದೊಡ್ಡಮೇಟಿ, ಪಾಟೀಲ ಪುಟ್ಟಪ್ಪ ಮತ್ತು ಮಂಗಳವೇಡು ಶ್ರೀನಿವಾಸರಾಯರು, ಕೋಶಾಧ್ಯಕ್ಷರು ಎಳಮಲಿ ಶಾಂತಪ್ಪಣ್ಣನವರು ಮತ್ತು ಬಸರೀಗಿಡದ ವೀರಪ್ಪನವರು.

ಇಷ್ಟೆಲ್ಲ ಕಾರ್ಯಕಲಾಪಗಳು ಮುಗಿದು ಸಭಾಕಾರ್ಯ ಕೊನೆಗಂಡಿತು.

ಅನುಸರಣಕ್ಕಾಗಿ ವ್ರತಾಚರಣೆ

ಲೇ— ಬಾಬು ರಾಜೇಂದ್ರ ಪ್ರಸಾದರು

ಮಹಾತ್ಮಾ ಗಾಂಧಿಯವರ ಕೊಲೆಯಾಗಿ ಇಂದಿಗೆ ೧೨ ತಿಂಗಳಾದವು. ಜನವರಿಯ ೩೦ ರಲ್ಲಿ ಮೊದಲನೆಯ ಪುಣ್ಯ ದಿನವನ್ನು ಆಚರಿಸಲಾಗುವುದು. ಹಿಂದುಗಳಾದ ನಾವು ನಮ್ಮ ಮೃತಹಿರಿಯರ ಸಾಂವತ್ಸರಿಕಶ್ರಾದ್ಧವನ್ನು ಮಾಡುತ್ತೇವೆ. ಆದರೆ ಬಹುಶಃ ಕೆಲವೇ ಜನರಲ್ಲಲ್ಲದೆ ಮಿಕ್ಕವರಲ್ಲಿ ಅದು ಒಂದು 'ಶಾಸ್ತ್ರ' ಮಾತ್ರ. ಈ ವ್ರತಾಚರಣೆಯನ್ನು ನಾವು ಬರೀ 'ಶಾಸ್ತ್ರ'ಕ್ಕಾಗಿ ಮಾಡುವದಾದರೆ ಅದು ೧೯೪೮ ರ ಜನವರಿ ೩೦ ರಲ್ಲಾದುದಕ್ಕಿಂತಲೂ ಹೆಚ್ಚಿನ ಅವಿದ್ಧ ನಾಟಕವಾದೀತು. ಮಹಾತ್ಮರು ಮೂರ್ತಿಗೊಂಡ ಹಿರಿಯ ಗುಣಗಳನ್ನು ಮನವರಿಕೆ ಮಾಡಿಕೊಂಡು ನಮ್ಮ ವೈಯಕ್ತಿಕ ಮತ್ತು ರಾಷ್ಟ್ರೀಯ ಜೀವನದಲ್ಲಿ ಅವನ್ನು ಅನುಸರಿಸಲು ಮಾಡಿದ ಪ್ರತಿಜ್ಞೆಯನ್ನು ದೃಢಪಡಿಸಿಕೊಳ್ಳಲು ಈ ಸಂದರ್ಭವನ್ನು ನಾವು ಉಪಯೋಗಿಸಿಕೊಳ್ಳಬೇಕು.

ಅವರ ಅನುಯಾಯಿ ಮತ್ತು ದೇಶಬಾಂಧವರಲ್ಲದೆ, ಅವರನ್ನು ಜೀವಂತವಾಗಿ ಕಾಣದ, ಅವರ ಶರೀರವನ್ನು ಮುಟ್ಟದ ಬೇರೆ ದೇಶದವರ ಕಣ್ಣಿನಲ್ಲೂ ಮಹಾತ್ಮರನ್ನು ದೊಡ್ಡವರನ್ನಾಗಿ ಮಾಡಿದ್ದು ಯಾವುದು? ಅದು ಅವರ ರಾಜಕಾರಣವಾಗಿರಲಾರದು. ನಷ್ಟವಾಗಿದ್ದ ಸ್ವಾತಂತ್ರ್ಯವನ್ನು ಪುನಃ ಪಡೆಯಲು ದೇಶಕ್ಕೆ ನೆರವಿತ್ತ ಅವರ ಅದ್ಭುತ ಪ್ರಯತ್ನ ಮತ್ತು ಪರಿಪೂರ್ಣವಾದ ನೇತೃತ್ವಗಳನ್ನು ಭಾರತವೆಂದೂ ಮರೆಯಲಾರದು. ಆದರೆ ನಮ್ಮ ಸ್ವಾತಂತ್ರ್ಯದಲ್ಲಿ ಆಸಕ್ತಿಯಿಲ್ಲದಂಥವರ ಮತ್ತು ಖಂಡಿತವಾಗಿಯೂ ನಮ್ಮ ಸ್ವಾತಂತ್ರ್ಯ ಲಾಭದಿಂದ ಬಹಳ ನಷ್ಟಕ್ಕೆ ಸಿಕ್ಕಿದ ಆಂಗ್ಲರ ಮನಸ್ಸಿಗೆ, ಆಗಷ್ಟೇ ಅದರೆ, ಅದು ರುಚಿಸಲಾರದು. ಅದು ಅವರ ಧರ್ಮವಾಗಿರಲಾರದು. ಅವರು ತಮ್ಮನ್ನು ಹಿಂದುಗಳೆಂದು ಕರೆದುಕೊಳ್ಳುತ್ತಿದ್ದರು. ಮಿಕ್ಕ ಧರ್ಮದವರಿಗೆ, ಅದರಲ್ಲೂ ಜಾತಿ ಪರಿವರ್ತನದಲ್ಲಿ ನಂಬಿಗೆ ಇಟ್ಟವರಿಗೆ ಹಿಂದು ಧರ್ಮವು ರುಚಿಸಲಾರದು ಮತ್ತು ಆಕರ್ಷಿಸಲೂ ಆರದು; ಆದರೂ ಧರ್ಮಿಷ್ಠರಾದ ಅನೇಕ ಕ್ರೈಸ್ತರು ಅವರ ಜೀವನ ಮತ್ತು ಕೃತಿಗಳ ಬಗ್ಗೆ ಅವ್ಯಾಹತವಾಗಿ ಪ್ರಶಂಸೆಯನ್ನು ವ್ಯಕ್ತ ಮಾಡಿದ್ದಾರೆಂಬುದು ನಮಗೆ ಗೊತ್ತಿದೆ. ಅವರಿಗೆ ಅಹಿಂಸೆ ಮತ್ತು ಸತ್ಯಗಳಲ್ಲಿ ಶ್ರದ್ಧೆಯೂ ಇದಾಗಿರಲಾರದು; ವಿಶೇಷತಃ ಇವುಗಳಲ್ಲಿ ಮೊದಲನೆಯದಂತೂ ಆಗಿರಲಿಕ್ಕೇ ಇಲ್ಲ. ಏಕೆಂದರೆ, ಅಹಿಂಸೆಯಲ್ಲಿ ನಂಬಿಗೆಯಿಡದೆ ಸಾಕ್ಷಾತ್ ಹಿಂಸೆಯಲ್ಲಿ ಕೈಯಿಕ್ಕಿದವರು ಕೂಡ ಇವರನ್ನು ಮಹಾತ್ಮರೆಂದು ಒಪ್ಪಿ ತಟ್ಟಿ ಸಾರಲು ಹಿಂದೆ ಮುಂದೆ ನೋಡಲಿಲ್ಲ. ಅವರ ಜೀವನದ ಸರಳತೆ, ದಾರಿದ್ರ್ಯದಲ್ಲಿಯೂ ಇದ್ದ ಅವರ ಔದಾರ್ಯ ಇವಾವುವೂ ಆಗಿರಲಾರವು. ಏಕೆಂದರೆ ಅವರಿಗೆ ಯಾವ ಆಸ್ತಿಯನ್ನೂ ಇಟ್ಟುಕೊಳ್ಳದಿರುವುದು ಅಥವಾ ಸರಳ ಜೀವನ ಇವುಗಳಲ್ಲಿ ನಂಬಿಗೆಯುಳ್ಳ ಅನೇಕ ಅನುಯಾಯಿಗಳಿದ್ದರು. ಮಹಾತ್ಮರನ್ನು ದೊಡ್ಡವರನ್ನಾಗಿ ಮಾಡಿದ್ದು ಅವರ ವಾಗ್ಮಿತ್ವವಾಗಿರಲಾರದು. ಏಕೆಂದರೆ ನಿರ್ಣಯಿಸಬಲ್ಲವರೆಲ್ಲರೂ ಅವರಿಗೆ ಅಷ್ಟೊಂದು ವಾಕ್ಪಾಂಡಿತ್ಯವಿರಲಿಲ್ಲ ಎಂದು ಒಪ್ಪುತ್ತಾರೆ. ಅವರ ಓದು ಅಥವಾ ಬೌದ್ಧಿಕ ಸಿದ್ಧಿಗಳೂ ಅದಕ್ಕೆ ಕಾರಣಗಳಾಗಲಾರವು. ಏಕೆಂದರೆ ಅವರೇ ಒಪ್ಪಿದಂತೆ ಅವರೇನೂ ಅಷ್ಟು ದೊಡ್ಡ ಪಂಡಿತರಲ್ಲ, ಅವರು ಬೇರೆ ಬೇರೆ ಚಳವಳಗಳಲ್ಲಿ ಭಾಗವಹಿಸಿದ ಕಾಲದಲ್ಲೆಲ್ಲ ಅವರಿಗೆ ಓದಲು ಬಹಳ ಸಮಯ ಸಿಗುತ್ತಿರಲಿಲ್ಲ.

ಬೇರೆ ಬೇರೆ ಜನರು ಅವರ ಮಹಿಮೆಗೆ ಅವರ ಗುಣದ ಬೇರೆ ಬೇರೆ ಅಂಶಗಳು ಮತ್ತು ಅವರ ಬಾಳಿನ ಬೇರೆ ಬೇರೆ ಚಟುವಟಿಕೆಗಳು ಕಾರಣಗಳೆಂದು ಹೇಳುತ್ತಾರೆ. ಅವರ ಮಹಾತ್ಮ್ಯಕ್ಕೆ ಅವರ ಯಾವುದಾದರೂ ಒಂದು ಗುಣಾಂಶ ಅಥವಾ ಚಟುವಟಿಕೆ ಕಾರಣವಾಯಿತೆಂದು ಹೇಳುವುದು ತಪ್ಪು. ಅವರದು ಒಂದು ಕಾರ್ಯಭರ ಜೀವನ. ಅವರ ಲಕ್ಷ್ಯಕ್ಕೆ ಬಾರದ ಖಾಸಗಿ, ಸಾಮಾಜಿಕ, ರಾಜಕೀಯ ಇಲ್ಲವೆ ಯಾವುದೇ ಜೀವನಶಾಖೆಯಿರಲಿಲ್ಲ. ಮತ್ತು ಅವರು ಉಪಾಯ ಹೇಳದ ಸಮಸ್ಯೆಯೊಂದೂ ಇರಲಿಲ್ಲ. ಆದರೂ ಕ್ರಮದಿಂದ ಅವರ ಉಪದೇಶವನ್ನು ಸಾರರೂಪವಾಗಿ ಕೊಡುವ ಒಂದು ಪಠ್ಯಪುಸ್ತಕವನ್ನು ಬರೆಯಿರಿ ಎಂದರೆ ಹಾಗೆ ಮಾಡಲು ತಮಗೆ ಶಕ್ತಿಯಿಲ್ಲೆಂದರು. ತಮ್ಮಲ್ಲಿ ಕೆಲವು ನಿರ್ದಿಷ್ಟ ನಿಯಮಗಳೂ ಮೂಲತತ್ವಗಳೂ ಇವೆ, ಅವನ್ನು ತಾವು ಎದುರಾದ ಹಾಗೆ ಆಯಾ ಸಮಸ್ಯೆಗಳಿಗೆ ಅನ್ವಯಿಸುವೆವು, ಮತ್ತು ಅವುಗಳಿಗೆ ತಕ್ಕ ಉಪಾಯಗಳನ್ನು ಆ ನಿಯಮ ಮತ್ತು ಮೂಲ ತತ್ವಗಳ ಆಧಾರದಿಂದ ಹುಡುಕಿ ತೆಗೆಯುತ್ತಿದ್ದೆವು ಎಂದು ಅವರು ಹೇಳುತ್ತಿದ್ದರು. ಒಂದು ಸರ್ವಗ್ರಾಹಕವಾದ ಕಾರ್ಯಯೋಜನೆಯನ್ನು ವಿವೇಚಿಸಿರಲಿಲ್ಲವಾದುದರಿಂದ ಅವರು ತಮ್ಮ ಜೀವನ ಮತ್ತು ಕೃತಿಯ "ಗಾಂಧಿ ತತ್ವಜ್ಞಾನ" ವನ್ನು ಪಠ್ಯಪುಸ್ತಕ ರೂಪದಲ್ಲಿ ಬರೆಯಲು ಸಿದ್ಧರಿರಲಿಲ್ಲ. ಯಾವುದಾದರೊಂದು ವಿಷಯದ ಮೇಲಿನ ಪಠ್ಯಪುಸ್ತಕದಲ್ಲಿ ಮಾಡಿದಂತೆ ಅವರ ಉಪದೇಶದ ಸಾರವನ್ನು ಕ್ರಮಪ್ರಕಾರ ಸಂಗ್ರಹಿಸಲು ಬೇರೆಯವರಿಗೆ ಬರುತ್ತಿಲ್ಲವೆಂದು ಅದರ ಅರ್ಥವಲ್ಲ. ಅಮೂರ್ತರೂಪವಾದರೂ ಅವರ ಕೃತಿಯು ಯಾವುದಾದರೊಂದು ಮಾರ್ಗವನ್ನು ಎತ್ತಿಕೊಂಡು ಅದು ಆಧುನಿಕ ವಿಚಾರಪ್ರಣಾಲಿಗೆ ಗಾಂಧಿಯವರು ಸಲ್ಲಿಸಿದ ಸೇವೆ ಎಂದು ಹೇಳಿದರೆ ಅದು ಅವಿವೇಕದ ಮಾತಾಗುತ್ತದೆ. ಆದರೂ ಈ ಮಿತಿಯನ್ನು ಮನಸ್ಸಿನಲ್ಲಿ ಇಟ್ಟುಕೊಂಡು, ನ್ಯಾಯಸಮ್ಮತ ರೀತಿಯಿಂದ ಸತ್ಯಾಹಿಂಸೆಗಳ ತತ್ವಗಳನ್ನು (ಅವರ ಪ್ರಕಾರ ಅವೆರಡನ್ನೂ ಸತ್ಯವೆಂದೇ ಪರಿಗಣಿಸಬಹುದು) ಅನ್ವಯಿಸಿದ್ದೇ ಇಡೀ ಜಗತ್ತಿನ ವಿವಿಧಧರ್ಮೀಯರನ್ನು, ವಿವಿಧ ಸಮಾಜದವರನ್ನು ಮತ್ತು ವಿವಿಧ ಕೃತಿಗಳಲ್ಲಿ ಮಗ್ನರಾದವರನ್ನು ಅವರ ಪ್ರಶಂಸಕರನ್ನಾಗಿ ಮಾಡಿಕೊಟ್ಟಿದ್ದೆಂದು ನಾವು ಸುಖವಾಗಿ ಹೇಳಬಹುದು. ಬಹಳ ಧರ್ಮಗಳು ಸತ್ಯ ಹಿಂಸೆಗಳನ್ನು ಬೋಧಿಸುತ್ತವೆ ಮತ್ತು ಎಲ್ಲ ಧಾರ್ಮಿಕರೂ ಗುರುಗಳೂ ಮತಸ್ಥಾಪಕರೂ ಅವನ್ನು ಅಧಿಕೃತವಾಗಿ ಸಾರಿದ್ದಾರೆ. ಆದರೆ ಅವೆಲ್ಲವನ್ನೂ ವ್ಯಕ್ತಿ ತನ್ನ ವೈಯಕ್ತಿಕ ಜೀವನದಲ್ಲಿ ಅನುಸರಿಸತಕ್ಕದ್ದೆಂದು ಆ ಪ್ರಕಾರ ಅವನ್ನು ಅನ್ವಯಿಸಿ ಬೋಧಿಸಲಾಗಿದೆ. ಅವನ್ನೆಂದೂ ಕೆಲವೇ ವ್ಯಕ್ತಿಗಳಲ್ಲದೆ ಮಿಕ್ಕವರಾರೂ ದೊಡ್ಡ ಪರಿಮಾಣದಲ್ಲಿ, ಮಾನವ ಕಾರ್ಯದ ಎಲ್ಲ ಕ್ಷೇತ್ರ ಮತ್ತು ಮುಖಗಳಲ್ಲಿ ಬಳಸಿಲ್ಲ, ಬಳಸಲು ಬಯಸಿಯೂ ಇಲ್ಲ. ಕೌಟುಂಬಿಕ ಸಂಬಂಧಗಳು, ಸಾಮಾಜಿಕ ಸಂಗತಿಗಳು, ಅಂತರ್ಜಾತೀಯ ವ್ಯವಹಾರಗಳು, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ವಿಷಯಗಳು ಈಯೆಲ್ಲವುಗಳಿಗೂ ಅವರು ಅವನ್ನು ಅನ್ವಯಿಸಿದರು. ಸಂಶೋಧನೆಯೆಂದು ಅದನ್ನು ಕರೆಯಬಹುದಾದರೆ, ಅವರ ಸಂಶೋಧನೆಯು ಅವನ್ನು ವಿಶ್ವವ್ಯಾಪಕವಾಗಿ ಬಹಳ ಭಿನ್ನಭಿನ್ನವಾದ ಸಂದರ್ಭಗಳಿಗೆ ಅನ್ವಯಿಸಿದ ಕ್ರಮವೇ ಆಗಿದೆ ಆದುದರಿಂದ ಒಂದು ಕಡೆ ಅವರು ಬ್ರಿಟಿಶ್ ಸಾಮ್ರಾಜ್ಯವಾದದೊಡನೆ ಹೋರಾಡಬೇಕಿತ್ತು ಮತ್ತು ಅದೇ ವೇಳೆಯಲ್ಲಿ ಬ್ರಿಟಿಶ್ ಜನತೆಗೆ ಗೆಳೆಯರಾಗಿ ಉಳಿಯಬೇಕಿತ್ತು. ಗಿರಣಿಗಳ ಸ್ಥಾನವನ್ನು ಆಕ್ರಮಿಸುವ ಉದ್ದೇಶ ಮತ್ತು ನಿರೀಕ್ಷಣೆಗಳಿದ್ದ ನೂಲುವದು ನೇಯುವದರಂತಹ ಸಣ್ಣ ಕೈಗಾರಿಕೆಗಳನ್ನು ಪ್ರೋತ್ಸಾಹಿಸಲೂ ಸಂಘಟಿಸಲೂ ಬೇಕಾಗಿತ್ತು; ಅದೇ ಸಮಯದಲ್ಲಿ ಅವುಗಳ ಒಡೆಯರ ಸಹಾನುಭೂತಿ ಮತ್ತು ಬೆಂಬಲಗಳಿಗೆ ಪ್ರಾರ್ಥಿಸಬೇಕಿತ್ತು. ನಮ್ಮ ಸಾಮಾಜಿಕ ಸಂಘಟನೆಯ ದೌರ್ಬಲ್ಯವನ್ನು ಎತ್ತಿ ತೋರಿಸಿಯೂ ತಮಗೆ ಪ್ರಿಯವಾದ ನಂಬಿಕೆಗಳು ಆಮೂಲಕ ನಷ್ಟವಾದ ಮತ್ತು ಹಾನಿಹೊಂದಿದ ಜನರ ವಿಶ್ವಾಸವನ್ನೂ ಗಳಿಸಬೇಕಾಗಿತ್ತು. ನಿಷ್ಠುರವಾಗಿ ಸತ್ಯವನ್ನು ಹೇಳಿಯೂ ಅಮೂ

ಲಿಕ ಅಪಪ್ರಥೆಗೀಡಾದವರಿಗೆ ಕೋಪ ಬರದಂತೆ ನೋಡಿಕೊಳ್ಳಬೇಕಾಗಿತ್ತು.

ಅವರ ಉದ್ದೇಶವನ್ನು ಇಡೀ ಜೀವಮಾನದಲ್ಲಿ ಎಂದೂ ಯಾರೂ ಅಪಾರ್ಥಮಾಡಲಿಲ್ಲವೆಂದಲ್ಲ ಅಥವಾ ಜನರು ಅವರನ್ನು ಯಾವಾಗಲೂ ದಯೆಯಿಂದ ನಡೆಸಿಕೊಂಡರೆಂದೂ ಅಲ್ಲ; ಆದರೆ ತಮ್ಮನ್ನು ಅವಹೇಲನ ಮಾಡುವವರಲ್ಲಿ ಉಗ್ರರಾಗಿದ್ದವರು ಕೂಡ ಒಂದಲ್ಲ ಒಂದು ದಿನ ತಮ್ಮ ತಪ್ಪುಗಳನ್ನು ತಿಳಿದು ಒಪ್ಪಿಕೊಳ್ಳುವರೆಂದು ಅವರಿಗೆ ಗೊತ್ತಿತ್ತು. ದಕ್ಷಿಣ ಅಫ್ರಿಕದ ಅವರ ಜೀವನದಲ್ಲಿ ಇದಕ್ಕೆ ಮೊಟ್ಟ ಮೊದಲಿನ ಉದಾಹರಣೆಯನ್ನು ಕಾಣಬಹುದು: ತಪ್ಪು ತಿಳುವಳಿಕೆಯಿಂದ ಒಬ್ಬ ಪಠಾಣನು ಅಲ್ಲಿ ಅವರನ್ನು ಉಗ್ರವಾಗಿ ಥಳಿಸಿದನು. ಆದರೆ ಬಳಿಕ ಅವನು ತನ್ನ ತಪ್ಪನ್ನು ಒಪ್ಪಿಕೊಂಡು ಕ್ಷಮೆ ಯಾಚಿಸಿದನು. ಇದಕ್ಕೆ ಕಡೆಯದೂ ಅತೀವ ದುರಂತವೂ ಆದ ನಿದರ್ಶನವೆಂದರೆ ಹಿಂದುಮುಸಲ್ಮಾನರ ಸಂಬಂಧದ ವಿಷಯದಲ್ಲಿ ಅವರು ನಡೆಸಿದ ಚಟುವಟಿಕೆ ಮತ್ತು ಅವರಿಟ್ಟುಕೊಂಡ ಉದ್ದೇಶ ಇವುಗಳ ಬಗ್ಗೆ ಮುಷ್ಕಲ್ಪನೆ ತಾಳಿದ್ದರಿಂದ ಆದುದು. ೧೯೨೦—೨೨ರ ಖಿಲಾಫತ್ ಚಳವಳದ ಕಾಲದಲ್ಲಿ ಮುಸಲ್ಮಾನರು ಅವರನ್ನು ತಮ್ಮ ಅತಿ ದೊಡ್ಡ ಕೈವಾರಿಯೆಂದೂ ಗೆಳೆಯರೆಂದೂ ತಿಳಿದಿದ್ದರು. ಅವರ ಈ ಮನೋಭಾವ ಬದಲಾಗಿ ಪಾಕಿಸ್ತಾನ ಚಳವಳದ ಅವಧಿಯಲ್ಲಿ ಅವರಲ್ಲಿ ಹಲವರು ಅದರಲ್ಲೂ ವಿಭಜನೆಯನ್ನು ಪುರಸ್ಕರಿಸಿದವರ ಉಚ್ಚ ನೇತೃಗಳಂತೂ ಗಾಂಧಿಯವರನ್ನು ಇಸ್ಲಾಮಿನ ಬದ್ಧ ವೈರಿಯೆಂದು ತಿಳಿದು ಅವರನ್ನು ಪ್ರಥಮ ಶತ್ರುಗಳೆಂದು ಹೆಸರಿಸಲು ಹಿಂದೆಮುಂದೆ ನೋಡಲಿಲ್ಲ. ಆದರೂ ದೇಶವಿಭಜನೆಯ ಸಂಬಂಧದಲ್ಲಿ ದುರದೃಷ್ಟವಶದಿಂದ ಹಿಂದು ಮುಸಲ್ಮಾನರ ದಂಗೆಯೆದ್ದಾಗ ಬಹಳ ಜನ ಮುಸಲ್ಮಾನರು ನಂಬಲರ್ಹರಾದ ಒಬ್ಬರೇ ಗೆಳೆಯರೆಂದರೆ ಗಾಂಧಿಯವರು ಎಂದು ತಿಳಿದರು. ಅವರ ಸಾವಿನಿಂದ ಆ ಮುಸಲ್ಮಾನರು ಒಬ್ಬ ನಿಜವಾದ ಮಿತ್ರರನ್ನೂ ಸಹಾಯಕರನ್ನೂ ಕಳೆದುಕೊಂಡೆವೆಂದು ಮನಗಂಡರು. ಅವರನ್ನು ಪ್ರಥಮ ಶತ್ರುಗಳೆಂದು ಹೆಸರಿಟ್ಟವರಲ್ಲಿ ಅನೇಕರು ತಮ್ಮ ಪ್ರಥಮ ಮಿತ್ರರೆಂದು ತಿಳಿಯಬೇಕಾಗಿದ್ದ ಅವರ ದುರಂತ ಮರಣದ ಬಗ್ಗೆ ದುಃಖವನ್ನು ವ್ಯಕ್ತಪಡಿಸಲು ಅನುಮಾನಿಸಲಿಲ್ಲ. ಮುಸಲ್ಮಾನರಷ್ಟೇ ಅವರನ್ನು ತಪ್ಪಾಗಿ ತಿಳಿದುಕೊಂಡಿದ್ದಿಲ್ಲ. ಅನೇಕ ಹಿಂದುಗಳು ಅವರನ್ನು ಸಾಶಂಕ ದೃಷ್ಟಿಯಿಂದ ನೋಡುತ್ತಿದ್ದರು ಮತ್ತು ಕೊನೆಯಲ್ಲಿ ಒಂದು ಹಿಂದುಹಸ್ತವೇ ಅವರ ಶರೀರದಲ್ಲಿ ಗುಂಡುಗಳನ್ನಿಕ್ಕಿತು. ಆದರೂ ಆ ಹಿಂದುವಿಗೆ ತನ್ನದೇ ಆದ ಒಂದು ತತ್ವ ದರ್ಶನ ಮತ್ತು ಕಾರ್ಯಸಮರ್ಥನೆಗಳಿವೆ. ಆದರೆ ಅವರ ಕೊಲೆಯಲ್ಲಿ ಭಾಗವಹಿಸಿದ, ಅದಕ್ಕೆ ಪ್ರತ್ಯಕ್ಷವಾಗಿ, ಅಪ್ರತ್ಯಕ್ಷವಾಗಿ ಇಲ್ಲವೆ ಲಕ್ಷ್ಯಪೂರ್ವಕವಾಗಿ ಒಪ್ಪಿಗೆಯಿತ್ತವರು ಕೂಡ ಅದನ್ನು ಒಂದು ದೊಡ್ಡ ದುರಂತವೆಂದೂ ಅಪವಿತ್ರ ಕೃತ್ಯವೆಂದೂ ತಿಳಿಯುವರೆಂಬುದು ಅತ್ಯಲ್ಪ ಕಾಲದಲ್ಲಿಯೇ ಜಗತ್ತಿಗೆ ಗೊತ್ತಾಗುವುದೆಂಬುದರಲ್ಲಿ ನನಗೆ ತಿಲಾರ್ಧದಷ್ಟೂ ಸಂದೇಹವಿಲ್ಲ.

ಆದುದರಿಂದ ನಾವು ಅವರ ಜೀವನದಿಂದ ಪಾಠ ಕಲಿಯಬೇಕು. ಈ ಗಂಭೀರ ಸಂದರ್ಭದಲ್ಲಿ ಅವನ್ನು ಸ್ಮರಿಸಿಕೊಳ್ಳಬೇಕು ಮತ್ತು ಅವರು ಹಾಕಿಕೊಟ್ಟ ಹಾದಿಯಲ್ಲಿ ಹೋಗಲೂ ಎಂದೂ ಅಳಿಯದೂ ಅಳಿಸಲು ಎಂದೆನಿಸಿದ ಅವರ ಉಪದೇಶಗಳನ್ನು ಎತ್ತಿ ಹಿಡಿಯಲೂ ಹೊಸ ನಿಶ್ಚಯವನ್ನು ಮಾಡತಕ್ಕದ್ದು. ಈ ಸಂದರ್ಭದಲ್ಲಿ ಪಿಸ್ತೂಲು ಹಾರಿಸಿದ ಕೈಯನ್ನು ಪ್ರಚೋದಿಸಿದ ನಿಮಿತ್ತ ಕಾರಣವೆನಿಸಿದ ನಮ್ಮ ಜಾತೀಯ ಸಂಬಂಧಕ್ಕೆ ಅವರ ತತ್ವವನ್ನು ವಿಶೇಷತಃ ಅನ್ವಯಿಸುವುದನ್ನು ನಾವು ನೆನಪಿಗೆ ತಂದುಕೊಳ್ಳುವುದು ಅವಶ್ಯಕ. ಯಾವ ಧರ್ಮಕ್ಕೇ ಸೇರಿದವರಿರಲಿ, ನಾವೆಲ್ಲರೂ ಒಟ್ಟಿಗೆ ಸೌಹಾರ್ದದಿಂದ ಬಾಳಬೇಕು; ಅನ್ಯರ ಅಪಕೃತ್ಯಗಳನ್ನು ಮರೆತು ಬಿಟ್ಟು ಅವರನ್ನು ಕ್ಷಮಿಸಬೇಕು; ನಮ್ಮ ಸ್ವಂತ ತಪ್ಪುಗಳನ್ನು ನೆನೆದುಕೊಂಡು ಅವನ್ನು ತಿದ್ದಿಕೊಳ್ಳಬೇಕು; ಪ್ರೀತಿ ರಚಿಸಿದರೆ ದ್ವೇಷ ನಾಶ ಮಾಡುವುದೆಂಬುದನ್ನು ಎಂದೂ ಮರೆಯದಿರಬೇಕು; ಎಲ್ಲ ಬಾಳೂ. ಅದರಲ್ಲೂ ಮಾನವನ ಬಾಳು- ಪವಿತ್ರವಾದುದು ಮತ್ತು ಒಬ್ಬ ವ್ಯಕ್ತಿ ನಿರ್ದಯನೋ ಹೇಯಕೃತ್ಯವನ್ನೆಸಗಿದವನೋ ಆದಾಕ್ಷಣ ಅವನ ಬಾಳು ಕಡಿಮೆಯದೆನಿಸದು ಎಂಬುವನ್ನು ವಿಸ್ಮೃತಿಗೊಡ್ಡಬಾರದು ಎಂಬುದು ಅವರ ಅಪೇಕ್ಷೆ. ಯಾವ ಧರ್ಮವನ್ನು ಅವಲಂಬಿಸಿದವರೇ ಆಗಿರಲಿ— ದುರ್ಬಲರು, ಅಸಹಾಯಕರು ಮತ್ತು ದರಿದ್ರರು ಇವರನ್ನು ಮರೆಯದೆ, ಅವರ ಸೇವೆಗಾಗಿ ನಮ್ಮ ಜೀವನವನ್ನು ಮುಡಿಪಿಡಬೇಕು. ಸೇವೆಯು ನೈಜವಾದುದೂ ಹೃತ್ಪೂರ್ವಕವಾದುದೂ ಆಗಿರಬೇಕಲ್ಲದೆ ಕಪಟದ್ದಾಗಿರಬಾರದು. ನಾವು ಸತ್ಯಾಹಿಂಸೆಗಳಿಗೆ ದೃಢವಾಗಿ ಅಂಟಿಕೊಂಡದ್ದೇ ಆದರೆ, ವಸ್ತುಗಳನ್ನೂ ಸಂಗತಿಗಳನ್ನೂ ಅವುಗಳ ನಿಜರೂಪದಲ್ಲಿ ಕಾಣಬಲ್ಲವರಾಗಲೇ ಬೇಕು ಮತ್ತು ಅನೇಕ ಸಲ ಆದಂತೆ ನಿಂದ್ಯವೂ ತಪ್ಪೂ ಆದ ಆಚಾರ ವಿಚಾರಗಳತ್ತ ನಾವು ಜಾರಿ ಬೀಳುವಂತಾಗಲಾರದು. ಪ್ರತಿಯೊಂದು ವ್ಯಕ್ತಿಯೂ ತನ್ನ ಮನಸ್ಸು, ವಿಚಾರ ಮತ್ತು ಕೃತಿಗಳಲ್ಲಿ ಹೊಕ್ಕು ಅವು ಆ ಗುರುಗಳ ಉಪದೇಶಕ್ಕೆ ಹೊಂದುವವೋ ಇಲ್ಲವೋ ಎಂಬುದನ್ನು ನೋಡಬೇಕು. ಇದೇ ಅವರ ಮರಣದ ನಿಜವಾದ ಪ್ರಥಮ ಪುಣ್ಯದಿನದ ಆಚರಣೆಯೆನಿಸುವುದು.

೧೭-೧-೪೯ (ಹರಿಜನ)

ನನ್ನ ಪ್ರಾರ್ಥನೆ

ಲೇ:— ಶ್ರೀ ಬಿ. ಜಿ. ಖೇರ

ನಮ್ಮ ಭಾರತ ರಾಷ್ಟ್ರದ ನಿರ್ಮಾತರೂ ಜನಕರೂ ಆದ ಗಾಂಧಿಯವರ ಮೊದಲ ವರ್ಷಾಂತಿಕದಲ್ಲಿ ಅವರ ನೆನಪಿಗಾಗಿ ಗೌರವ ಪ್ರಶಂಸೆಗಳನ್ನು ಅರ್ಪಿಸುವುದು ನಮಗೆ ಉಚಿತವಾಗಿದೆ. ಆದುದರಿಂದ ನಾವು (೧) ಅವರ ಜೀವನದ ಗುರಿ ಗೆಲವನ್ನು ಕಾಣಲಿ (೨) ಆ ಗುರಿಯ ಸಿದ್ಧಿಗಾಗಿ ಅವಿರತ ಪ್ರಯತ್ನಮಾಡಲು ಹೊಸದಾಗಿ ನಾವು ಬದ್ಧಕಂಕಣರಾಗೋಣ, (೩) ಯಾವುದಾದರೊಂದು ಸಾರ್ವಜನಿಕ ಕಾರ್ಯದಿಂದ ನಮ್ಮ ಪ್ರತಿಜ್ಞೆಯನ್ನು ಕಾರ್ಯರೂಪಕ್ಕೆ ತರೋಣ ಎಂದು ಪ್ರಾರ್ಥಿಸಬೇಕು.

ನಾನು ಮಹಾತ್ಮರಲ್ಲಿಗೆ ಹೋದಾಗ (ಕಳೆದ ೧೯ ವರ್ಷಗಳಿಂದ ಅವರಿದ್ದ ಸ್ಥಳಕ್ಕೆ ಹೋದಾಗಲೆಲ್ಲ) ಅವರ ಹತ್ತಿರ ನಾನು ಮಾತಾಡಿದ್ದು ಬಹಳ ಸ್ವಲ್ಪ— ಅದೂ ಕಳೆದ ಕೆಲ ವರುಷಗಳಲ್ಲಿ ಅವರಲ್ಲಿದ್ದ (ಅದು ನಮ್ಮೆಲ್ಲರಲ್ಲಿಯೂ ಇದೆ) ಆತ್ಮಕ್ಕೆ ಸಾಕ್ಷಿಗೊಟ್ಟದ್ದನ್ನು ನಾನು ಕಂಡೆ ಮತ್ತು ಅವರೆಂದೂ ಸುಳ್ಳು ಸಾಕ್ಷಿಯನ್ನು ಕೊಡಲಾರರು. ಪ್ರತಿಯೊಂದು ವಿಚಾರ, ಮಾತು ಮತ್ತು ಕೃತಿಯೂ ಪರಸ್ಪರ ಸಮಂಜಸವಾಗಿರಬೇಕಾಗಿತ್ತು. ಅದು ಪವಿತ್ರವೂ ಆಗಿರಬೇಕಾಗಿತ್ತು, ನಮ್ಮ ನೈತಿಕ ಶಕ್ತಿಗಳ ನೆರವನ್ನು ಕೇಳುವ ಪರಿಸ್ಥಿತಿಯನ್ನು ಮೊದಲೇ ನಿರೀಕ್ಷಿಸಿಯೋ ಏನೋ ಎಂಬಂತೆ ಅವರು ತಮ್ಮ ದೇಶಬಾಂಧವರನ್ನು ನೈತಿಕ ನಿಷ್ಠೆಯಲ್ಲಿ ಬಹಳ ಎತ್ತರಕ್ಕೆ ಏರಿಸಿದರು. ಅವರು ಅದನ್ನು ಮಾಡಿದ್ದು ಕೇವಲ ಅಡಚಣೆಯ ಹೊತ್ತಿಗೆ ಸರಿಯಾಗಿ ಮತ್ತು ಅವರು ಅದರಲ್ಲಿ ಸೋತರು ಎಂದು ನಾನು ಭಾವಿಸಲಾರೆ. ಆದರೆ ೧೯೪೭ ರ ಆಗಸ್ಟ್ ೧೫ ರ ನಂತರ ನಡೆದ ಘಟನೆಗಳನ್ನು ಎಣಿಸಿದರೆ ನಮ್ಮಲ್ಲಿ ಕೆಲವರು ಅವರು ಸೋತರೆಂದಾರಾದರೂ ಅದು ಅಷ್ಟು ಗಣ್ಯವಲ್ಲ.

ದೇಶದಲ್ಲಿ ಅತ್ಯುನ್ನತರೆನಿಸಿದ ಪೂರ್ವದ ಗವರ್ನರ್ ಜನರಲ್ಲರಿಂದ ಸರಕಾರ, ಬಂಡವಾಳಸ್ಥರು ಇಲ್ಲವೆ ವ್ಯಾಪಾರಿಗಳನ್ನು ಟೀಕಿಸಿ ಅಸಂಖ್ಯ ಪತ್ರಿಕೆಗಳಲ್ಲಿ ಪ್ರಬಂಧಗಳನ್ನು ಬರೆವ ಹೊಸ ಪದವೀಧರನ ವರೆಗೆ ಎಲ್ಲರೂ ನೈತಿಕ ಮೌಲ್ಯಗಳಿಗೆ ಮನ್ನಣೆ ಕೊಟ್ಟು ಅವನ್ನು ಉಳಿಸಿಕೊಳ್ಳುವುದರ ಬಗ್ಗೆ ಕೂಗಿ ಹೇಳುವುದೇ ಇದಕ್ಕೆ ನಿದರ್ಶನ. ಇದೊಂದೇ ಲೆಕ್ಕಕ್ಕೆ ಬರುವಂಥದು, ಮಹಾತ್ಮರ ದೃಷ್ಟಿಯಲ್ಲಿ ಸ್ವರಾಜ್ಯಕ್ಕಿಂತಲೂ ಗಣ್ಯವೆನಿಸಿದ್ದು ಇದೇ. ಜನರು ಮುಖಂಡರಾಗಿ ಸಾರ್ವಜನಿಕ ಕಾರ್ಯಗಳಲ್ಲಿ ಭಾಗವಹಿಸಿದವರನ್ನು ಖಾಸಗಿ ನಡೆನುಡಿಯಲ್ಲಿಯೂ ಇಟ್ಟುಕೊಳ್ಳಬೇಕೆಂದು ಒತ್ತಾಯಪಡಿಸಿದರು. "ನನ್ನ ನೀತಿ ನಡತೆಗಳೆಲ್ಲ ನನ್ನ ಖಾಸಗಿಯವು," ಎಂದು ನೀವು ಎದ್ದು ಹೋಗಲಾರಿರಿ. ಅವರು ಎಷ್ಟು ಜನ ಕೀರ್ತಿವಂತರ ಕೀರ್ತಿಯನ್ನು ಕಾಮನೀತಿಭಂಗ, ಮದ್ಯಪಾನ

—೧೫ನೆಯ ಪುಟಕ್ಕೆ

ಸೂತ್ರತ್ರಯ

ಲೇ:— ಶ್ರೀ ಮಂಗಲದಾಸ ಪಕ್ವಾಸಾ

ಬಾಪುವನ್ನು ಕುರಿತು ಸ್ವಲ್ಪ ದೀರ್ಘವಾಗಿ ಬರೆಯುವದೆಂದರೆ ಅವರನ್ನು ವಿಶೇಷವಾಗಿ ಪ್ರೀತಿಸಿದವರಿಗೆ ತುಂಬ ಕಠಿನ ಕಾರ್ಯ. ಅಲ್ಲದೆ ಅವರ ಜೀವನ ಬಹುಮುಖವಾಗಿದ್ದುದರಿಂದ, ಯಾವುದನ್ನು ಹಿಡಿಯಬೇಕು ಯಾವುದನ್ನು ಬಿಡಬೇಕೆಂದು ಗೊತ್ತಾಗುವದಿಲ್ಲ. ಸತ್ಯದ ಬಗ್ಗೆ ಅವರ ಆಗ್ರಹ ಪ್ರಬಲವಾಗಿತ್ತು. ಯಾವ ಸಂದರ್ಭಗಳಿರಲಿ, ಎಷ್ಟೇ ಕಷ್ಟವಾಗಲಿ ಪರಿಣಾಮಗಳನ್ನು ಚಿಂತಿಸದೆ ಸತ್ಯವನ್ನೆ ನುಡಿಯ ಬೇಕೆಂದು ಅವರು ಆಗ್ರಹತೊಡುತಿದ್ದರು. ಇತರರು, ತಾವು ತಪ್ಪು ಮಾಡಿದಾಗ ಅದನ್ನು ಮರೆಮಾಚಲು, ಇಲ್ಲವೆ ಅದಕ್ಕೇನಾದರೊಂದು ನೆವ ಹೇಳಲು ಪ್ರಯತ್ನಿಸುತ್ತಾರೆ. ಗಾಂಧೀಜಿಗೆ ನಾವು ಮಾಡಿದ್ದು ತಪ್ಪು ಅಥವಾ ತಮ್ಮೆಣಿಕೆ ಸುಳ್ಳಾಯಿತೆಂದು ತೋರಿದೊಡನೆ ಅವರು ಅದನ್ನು ಡಾಣಾಡಂಗುರವಾಗಿ ಹೇಳಿಬಿಡುತಿದ್ದರು. ಈ ಬಗೆಯಾಗಿ ಸ್ವಂತ ಪ್ರಮಾದಗಳನ್ನು ಉದ್ಘಾಟಿಸುವ ಅವರ ರೀತಿಯೆ ಅವರು ಇತರ ಜನಸಾಮಾನ್ಯರಿಗಿಂತ ತೀರ ಉನ್ನತವಾದ ಜೀವಿಯೆಂದು ತೋರಿಸಿಕೊಟ್ಟಿತು. ಅವರಂಥ ಸನ್ಮಾನಿತರು ಇಷ್ಟು ನಿರ್ದಾಕ್ಷಿಣ್ಯವಾಗಿ ತಪ್ಪುಗಳನ್ನು ಒಪ್ಪಿಕೊಳ್ಳುವದು ಬಹಳ ವಿರಳ. ತಮ್ಮದು ತಪ್ಪೆಂದು ಮನಸಿಗೆ ಖಂಡಿತವಾಗಿ ಅನಿಸಿದ ಹೊರತು ಅವರು ಎಂದೆಂದೂ ತಪ್ಪು ಒಪ್ಪಿಕೊಂಡವರೂ ಅಲ್ಲ. ಎಂಥ ಒತ್ತಾಯವಾದರೂ ಮನವೊಲಿಕೆಯಾದರೂ ತರ್ಕಶಕ್ತಿಯಾದರೂ ಅವರನ್ನು ಸತ್ಯಪಥದಿಂದ ಚ್ಯುತಗೊಳಿಸಲು ಸಮರ್ಥವಾಗುತಿದ್ದಿಲ್ಲ. ಅವರಿಗೆ ಮನುಷ್ಯಸ್ವಭಾವದ ಅಗಾಧ ಪರಿಜ್ಞಾನವಿತ್ತು. ಸತ್ಯವನ್ನು ಕಂಡುಹಿಡಿಯುವ ದಿವ್ಯ ಶಕ್ತಿಯಿತ್ತು. ಅವರನ್ನು ತಪ್ಪು ದಾರಿ ಹಿಡಿಸುವದು ಎಷ್ಟು ಕಠಿನವೆಂದು ಕಂಡುಕೊಂಡು ಅನೇಕರು ಪಶ್ಚಾತ್ತಾಪಪಟ್ಟಿರಬಹುದು.

ನನ್ನ ಮನನಾಟದ ಅವರ ಇನ್ನೊಂದು ಗುಣವೆಂದರೆ, ಪ್ರತಿಯೊಂದು ಪ್ರಶ್ನೆಯಲ್ಲಿ ನೈತಿಕ ತತ್ವಗಳೇ ಮುಖ್ಯವೆಂಬ ಅವರ ಆಗ್ರಹ. ಫಲ ಪರಿಣಾಮಗಳೇನೇ ಆಗಲಿ, ಅದರ ಚಿಂತೆ ಅವರನ್ನು ನೈತಿಕ ತತ್ವಗಳ ನೇರವಾದ ದಾರಿಯಿಂದ ಕೂದಲೆಳೆಯಷ್ಟು ಕೂಡ ವಿಚಲಿತಗೊಳಿಸವು. ಕಾಯದೆಯ ವಿಷಯಗಳಲ್ಲಿ ಕೂಡ ಅವರು ಬರಿ ನ್ಯಾಯಿಕ ಪೂರ್ವಾಪರಗಳನ್ನು ಮಾತ್ರವಲ್ಲದೆ ನೈತಿಕ ಪೂರ್ವಾಪರಗಳನ್ನೂ ವಿಚಾರಿಸುತಿದ್ದರು. ವಿಶಿಷ್ಟ ಪ್ರಶ್ನೆಯ ಅಥವಾ ಕರ್ಮದ ಕಾಯದೆಬದ್ಧತೆಯ ಬಗ್ಗೆ ವಕೀಲರು ಅವರಿಗೆ ಸೂಚನೆಗಳನ್ನು ಕೊಡುತಿದ್ದರು. ಆದರೆ ಸೂಚಿಸಲ್ಪಟ್ಟ ಮಾರ್ಗ ನೈತಿಕ ದೃಷ್ಟಿಯಲ್ಲೂ ಯೋಗ್ಯವೆಂದು ಮನವರಿಕೆಯಾದಲ್ಲದೆ ಅವರು ಏನನ್ನೂ ಮಾಡಲೊಪ್ಪುತಿರಲಿಲ್ಲ. ಅವರು ಕಾಯದೆ ಮುರಿಯುವವರಲ್ಲಿ ಅಗ್ರಗಣ್ಯರು. ಆದರೆ ಯಾವ ಕಾಯದೆಗಳ ತಳದಲ್ಲಿ ನೀತಿಯಿಲ್ಲವೊ ಅಂಥವುಗಳನ್ನಷ್ಟೆ ಅವರು ಮುರಿಯುತಿದ್ದರು. ಯೋಗ್ಯ ನೈತಿಕ ತತ್ವಗಳ ತಳಹದಿಯುಳ್ಳ ಯಾವೊಂದು ಕಾಯದೆಯನ್ನು ಮುರಿಯಲು ಯಾರಿಗಾದರೂ ಅವರು ಉಪದೇಶಿಸಿದ್ದು ಕೇಳಬಂದಿಲ್ಲ.

ಮೂರನೆ ಗಮನಾರ್ಹ ವಿಷಯವೆಂದರೆ, ಇಂದಿನ ಚಾರಿತ್ರ್ಯಚ್ಯುತ ಯುಗದಲ್ಲಿಯೂ ಅವರು ಸಚ್ಚಾರಿತ್ರ್ಯವನ್ನು ಮೈಗೂಡಿಸಿಕೊಳ್ಳುವ ಅವಶ್ಯಕತೆಯನ್ನು ಬಹಳವಾಗಿ ಒತ್ತಿಹೇಳುತಿದ್ದರು. ತಮ್ಮ ಸುತ್ತಮುತ್ತಲೂ ಇರುವವರು ಮತ್ತು ತಮ್ಮೊಡನೆ ಸಂಪರ್ಕ ಬೆಳೆಸುವವರು ನಿರ್ದುಷ್ಟ ಚಾರಿತ್ರ್ಯದ ಘನವಂತರಿರಬೇಕೆಂದು ಅವರು ಆಗ್ರಹಪಡುತಿದ್ದರು. ಶುಷ್ಕ ಬುದ್ಧಿವಾದಿಗಳಲ್ಲಿರುವ ಆದರ್ಪ ಅವರಲ್ಲಿರಲಿಲ್ಲ. ಶುಷ್ಕಬುದ್ಧಿವಾದಿಗಳ ಬಗ್ಗೆ ಅವರಲ್ಲಿ ಅಭಿಮಾನ ಆಕರ್ಷಣೆಗಳೂ ಇದ್ದಿಲ್ಲ. ಉತ್ತಮ ಚಾರಿತ್ರ್ಯವುಳ್ಳ ಜನರನ್ನು ಅವರು ಅಮೂಲ್ಯರೆಂದು ಪರಿಗಣಿಸುತಿದ್ದರು. ಈ ಎರಡು ಜಾಗತಿಕ ಯುದ್ಧಗಳಿಂದ ಜಗತ್ತಿಗಾದ ಹಾನಿಗಳಲ್ಲಿ ಎಲ್ಲಕ್ಕೂ ದೊಡ್ಡದೆಂದರೆ ಚಾರಿತ್ರ್ಯಹಾನಿ. ಪ್ರತಿಯೊಂದು ದೇಶದಲ್ಲಿಯೂ ಜನರ ಚಾರಿತ್ರ್ಯ ಕೆಟ್ಟಿದ್ದು ಅಷ್ಟಿಷ್ಟಲ್ಲ. ಹೊಲದಲ್ಲಿಯೂ ಕಾರಖಾನೆಯಲ್ಲಿಯೂ ಬೇಕುಬೇಕಾದ್ದನ್ನೆಲ್ಲ ಉತ್ಪಾದಿಸಬಹುದು; ಆದರೆ ಸಚ್ಚಾರಿತ್ರ್ಯವೆಂಬದು ಜೋಕೆಯಿಂದ ಸಾವಧಾನವಾಗಿ ಬೆಳೆಸತಕ್ಕ ಬದುಕು. ಗಾಂಧೀಜಿ ಒಮ್ಮೆ ಯಾರನ್ನಾದರೂ ನಂಬಿ ಅವನ ಸೂಚನೆಯನ್ನು ಪರಿಗ್ರಹಿಸಿದ ನಂತರ ಅವನ ಚಾರಿತ್ರ್ಯ ನೆಟ್ಟಗಿಲ್ಲವೆಂದು ತಿಳಿದುಬಂದರೆ ಅವರು ತತ್ಕ್ಷಣ ಹಿಮ್ಮೆಟ್ಟಿ ಅವನೊಡನೆ ಸಂಬಂಧ ಬೆಳೆಸುವದನ್ನು ಸಾಧ್ಯವಿದ್ದಷ್ಟು ಕಡಿಮೆ ಮಾಡುತಿದ್ದರು. ಆದರೂ ಅವನನ್ನು ಸರ್ವಥಾ ಅಸ್ಪೃಶ್ಯನಾಗಿ ಮಾಡದೆ ಅವನ ಚಾರಿತ್ರ್ಯವನ್ನು ಪುನರುದ್ಧರಿಸಲು ಪ್ರಯತ್ನಿಸುತಿದ್ದರು.

ಭಾರತಕ್ಕೆ ತನ್ನ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳುವ ಆಸೆಯಿದ್ದರೆ, ಜನರ ಸಾಮಾಜಿಕ ನೈತಿಕ ಉನ್ನತಿಯನ್ನು ಸಾಧಿಸುವ ಅಭಿಲಾಷೆಯಿದ್ದರೆ, ಆ ಆಶೆ ಮಹತ್ವಾಕಾಂಕ್ಷೆಗಳನ್ನು ಈಡೇರಿಸಿಕೊಳ್ಳುವ ಒಂದೇ ಒಂದುಪಾಯವೆಂದರೆ ಮಹಾತ್ಮಾ ಗಾಂಧಿಯವರು ತೋರಿದ ಸರಳ ಪಥವನ್ನು ಅನುಸರಿಸುವೆವು. ಈ ದಾರಿಯಲ್ಲಿ ಅತ್ತಿತ್ತಗಲದೆ ಸಾಗಬೇಕೊ ಅಥವಾ ಸ್ವಾರ್ಥ, ಅಧಿಕಾರಲಾಲಸೆ, ಧನಪಿಪಾಸೆಗಳ ಕ್ಷಣಿಕ ಪ್ರೇರಣೆಗಳಿಗೊಳಗಾಗಿ ವಕ್ರ ಮಾರ್ಗವನ್ನವಲಂಬಿಸಬೇಕೋ ಎಂಬ ನಿರ್ಣಯ ಜನರಿಗೇ ಸೇರಿದ್ದು. ಈಗ ನಮ್ಮ ಸುತ್ತಮುತ್ತಲೂ ಕಾಣಬರುವ ಅವಸ್ಥೆಯಿಂದ ಮನಸು ಕುಗ್ಗಿಹೋದರೂ ಬಾಪುವಿನ ಹೆಸರಿನೊಡನೆ ಹೆಣೆದುಕೊಂಡಿರುವ ರೀತಿ ನೀತಿಗಳ ಬಲದಿಂದ ಸ್ವರಾಜ್ಯವನ್ನು ಸ್ಥಾಪಿಸಿ ರಾಷ್ಟ್ರದ ಭವಿತವ್ಯವನ್ನು ಭವ್ಯವಾಗಿ ಮಾಡಲು ಮತ್ತು ರಾಷ್ಟ್ರವನ್ನು ಶಾಂತಿ ಪ್ರಗತಿಗಳ ಮಾರ್ಗದಲ್ಲಿ ಒಯ್ಯಲು ಈ ದೇಶದ ಜನರ ಪಾಲಿಗೆ ಇನ್ನೂ ಕಾಲ ಮೀರಿಲ್ಲ. ಆದ್ದರಿಂದ 'ಬಾಪು ಉಪದೇಶಿಸಿದ ರೀತಿ ನೀತಿಗಳಲ್ಲಿ ವಿಶ್ವಾಸವುಳ್ಳವರೆಲ್ಲರೂ ರಾಜಕೀಯವೆಂದು ಕರೆಸಿಕೊಳ್ಳುವ ಆ ಕಚ್ಚಾಟಗಳಿಂದ ದೂರ ಉಳಿದು, ಮಹಾತ್ಮಾ ಗಾಂಧಿಯವರು ಬೋಧಿಸಿದ ವಿವಿಧ ರಚನಾತ್ಮಕ ಕಾರ್ಯಗಳ ಕಡೆಗೆ ಜನರನ್ನು ಒಲಿಸುವ ಕರ್ತವ್ಯದಲ್ಲಿ ಮಗ್ನರಾಗುವೆವೆಂದೂ ದೀರ್ಘ ಕಾಲದಿಂದಲೂ ತಮ್ಮ ಭಾಗದಾಯಕ್ಕಾಗಿ ಕಾಯುತಿರುವ ಭಾರತದ ಕೋಟಿ ಕೋಟಿ ಜನರಿಗೆ ಶಾಂತಿಯನ್ನೂ ಸಮಾಧಾನವನ್ನೂ ದೊರಕಿಸಿಕೊಡುವ ಸೇವಾವೃತ್ತಿಯಲ್ಲಿ ತೊಡಗುವೆವೆಂದೂ ಈ ಜನೆವರಿ ೩೦ರ ದಿನದಲ್ಲಿ ಪ್ರತಿಜ್ಞಾಬದ್ಧರಾಗಬೇಕೆಂದು ಸೂಚಿಸುತ್ತೇನೆ.

(ಹರಿಜನ)

(೧೪ನೆಯ ಪುಟದಿಂದ)

ಅಥವಾ ಸಹೋದ್ಯೋಗಿಗಳೊಡನೆ ವಂಚನೆಯಿಂದ ನಡೆದುಕೊಂಡದ್ದನ್ನು ಕಂಡು ಕಿತ್ತುಕೆಳಗುರುಳಿಸಲಿಲ್ಲ? ಅವರು ಮಿಕ್ಕವರನ್ನು ಹೇಗೋ ಹಾಗೇ ಪಾಪಿಗಳನ್ನು ಪ್ರೀತಿಸುತ್ತಿದ್ದರು; ಆದರೆ ಪಾಪವನ್ನು ಮಾತ್ರ ದ್ವೇಷಿಸುತ್ತಿದ್ದರು. ಆದರಿಂದಲೇ ಅವರು ಇದನ್ನೆಲ್ಲ ತಮ್ಮದೇ ಆದ ಪ್ರಶಾಂತ ಪ್ರೇಮಪೂರ್ಣ ರೀತಿಯಿಂದ ಮಾಡಿದರು. ನಾವು ಕುಡಿದು ಸ್ವಚ್ಛಂದ ಕಾಮಿಗಳಾಗಿ "ಗುರಿಯು ಸಾಧನವನ್ನು ಸಮರ್ಥಿಸುತ್ತದೆ" ಎಂದು ನಂಬಿ, ನಮ್ಮ ನೀತಿಹದಗೆಟ್ಟಿತು, ಗದ್ದಲ್ಲಿ ಕಳ್ಳಪೇಟೆಯಿದೆ, ಪಗಡಿ ಪದ್ಧತಿಯಿದೆ ಮತ್ತು ಭ್ರಷ್ಟಾಚಾರವಿದೆ ಎಂದರೆ ಬಂದ ಲಾಭವೇನು? ಅದರಿಂದೇನೂ ಆಗದು. ಮಹಾತ್ಮರ ದೃಷ್ಟಿಯಲ್ಲಿ ನೀತಿ ನಿಯಮ ಅತಿಪ್ರಧಾನವಾದುದು. ಆತ್ಯಂತಿಕ ಸತ್ಯವೇ ದೇವರು ಮತ್ತು ಪ್ರೇಮವೆಂಬುದು ಸತ್ಯದ ಇನ್ನೊಂದು ಮಗ್ಗುಲು. ನಮಗೆ ದಾರಿ ದೋರಲು ಅವರು ಹೊಸ ದೀಪವನ್ನು ಹಚ್ಚಲಿಲ್ಲ; ಹಳೆಯದಕ್ಕೆ ಎಣ್ಣೆ ಹಾಕಿ ಬತ್ತಿ ನೀವಿ ಉಜ್ವಲಗೊಳಿಸಿದರು. ಆದರೆ ಅದರ ಜ್ವಾಲೆ ಬಹಳ ಹೆಚ್ಚಾಗಿ ಅವರನ್ನೇ ಆಹುತಿ ತೆಗೆದುಕೊಂಡಿತು; ಆದರೆ ದೀಪ ಚೆನ್ನಾಗಿ ಬೆಳಗಿ, ನಾಳಿನ ಪೀಳಿಗೆಗಳ ಹೆಜ್ಜೆಗೆ ಮಾರ್ಗದರ್ಶಿಯಾಗುವುದು.

(ಹರಿಜನ)

ಯರವಡಾ ಮಂದಿರದಲ್ಲಿ ಗಾಂಧಿಯವರೊಡನೆ

(ಮಹದೇವ ದೇಸಾಯಿಯವರಿಂದ)

[illegible] ದಿವಂಗತ ಮಹಾದೇವ ದೇಸಾಯಿ [illegible] ಈ ಕೆಳಗಿನ ಭಾಗಗಳನ್ನು [illegible] ಅನುವಾದಿಸಲಾಗಿದೆ.

—ವಿ. ಜಿ. ಬಿ.]

೧೧ ಮಾರ್ಚ ೧೯೩೨

ನಾನು ಚಹಾ ತೆಗೆದುಕೊಳ್ಳುವೆನೆಂದೆ. 'ನೀವು ಚಹಾ ಬಿಟ್ಟುಬಿಟ್ಟಿದ್ದೀರೇನು?' ಎಂದು ನಾನು ವಲ್ಲಭಭಾಯಿಯವರನ್ನು ಕೇಳಿದೆ. ಅದಕ್ಕವರು, "ಜೇಲಿನಲ್ಲಿ ಬಾಪುವಿನ ಜೊತೆಗಾರನಾದಮೇಲೆ ಚಹಾ ತೆಗೆದುಕೊಳ್ಳುವುದರಿಂದ ಬರುವ ಪ್ರಯೋಜನವೇನು? ಬಾಪು ಯಾವ ಆಹಾರವನ್ನು ತೆಗೆದುಕೊಳ್ಳುವರೋ ಅವನ್ನೇ ನಾನೂ ತೆಗೆದುಕೊಳ್ಳಬೇಕೆಂದು ನಿರ್ಧರಿಸಿದೆ. ಆಕ್ಕಿಯನ್ನು ಬಿಟ್ಟು ಬಾಪುವಿನಂತೆ ರೊಟ್ಟಿ ಹಾಲು ಮತ್ತು ಬೆಂದ ಕಾಯಿಪಲ್ಲೆಗಳನ್ನು ತೆಗೆದುಕೊಳ್ಳಬಯಸಿದೆ." ಚಹಪ್ರಿಯರಾಗಿದ್ದರೂ ವಲ್ಲಭಭಾಯಿಯವರು ಚಹಾ ಬಿಟ್ಟುಬಿಟ್ಟರು. ಆದುದರಿಂದ ನಾನೂ ಅವರ ಸಾಲಿಗೆ ಸೇರಲು ಮನಸ್ಸನ್ನು ಗಟ್ಟಿಮಾಡಿದೆ.

ಬಾಪುವಿಗಾಗಿ ಹಲ್ಲುಕಡ್ಡಿಯನ್ನು ಮಾಡಿಕೊಡುವುದು, ಸೋಡಾ ತಯಾರಿಸಿ ಕೊಡುವುದು ಮತ್ತು ಉತ್ತುತ್ತಿಯನ್ನು ಶುದ್ಧ ಮಾಡುವುದು— ಈಯೆಲ್ಲ ಹೊಣೆಯನ್ನೂ ವಲ್ಲಭಭಾಯಿಯವರು ತಮ್ಮ ಮೇಲೆ ಹಾಕಿಕೊಂಡಿದ್ದರು. "ಬಾಪುವಿನೊಡನೆ ಅವರು ನನ್ನನ್ನು ಇಡುವರೆಂದು ನನಗೆ ಗೊತ್ತೇ ಇದ್ದಿಲ್ಲ. ಹಾಗೆ ಗೊತ್ತಿದ್ದಿದ್ದರೆ, ನಿಮಗೆ ಯಾವ ಯಾವುದನ್ನು ಮಾಡಿಕೊಡಬೇಕೆಂದು ಕಾಕಾ ಅವರನ್ನು ಕೇಳಿ ಬಿಡುತ್ತಿದ್ದೆ. ಈಗಿರುವ ಸ್ಥಿತಿಯೆಂದರೆ, ಬಾಪು ಒಂದನ್ನೂ ಹೇಳುವುದಿಲ್ಲ. ಆದುದರಿಂದ ಯಾರೂ ಅವರಿಗೇನು ಬೇಕೆಂಬುದನ್ನು ತಿಳಿಯಲಾರರು. ತಮ್ಮ ಬಟ್ಟೆಯನ್ನು ತಾವೆ ಒಗೆದ ನಂತರವೇ ಬಾಪು ಬಚ್ಚಲು ಮನೆಯಿಂದ ಹೊರಬೀಳುತ್ತಾರೆ, ಆದುದರಿಂದ ಬಟ್ಟೆ ಒಗೆಯುವುದು ಕೂಡ ಇಲ್ಲ" ಎಂದು ಅವರು ನಗುತ್ತ ಹೇಳಿದರು.

× × ×

ನೂಲುವಾಗ ಚರಕದಲ್ಲಿ ಮಾಡಿದ ಸುಧಾರಣೆಯನ್ನು ಬಾಪು ನನಗೆ ಹೇಳಿದರು. ಈಗೀಗ ಅವರು ಪ್ರತಿದಿನವೂ ೨೫೦ ಸುತ್ತು ನೂಲುತ್ತಾರೆ. ತಮಗೆ ಇನ್ನೂ ಒಡಲಿನ ಆಯಾಸದ ಪರಿವೆ ಬಿಟ್ಟಿಲ್ಲ ಎಂದು ಅವರು ದೂರಿಟ್ಟರು...

೧೩ ಮಾರ್ಚ ೧೯೩೨

"ಇಂದಿಗೆ ಸರಿಯಾಗಿ ೨ ವರ್ಷಗಳ ಹಿಂದೆ ಬಾಪು ಆಶ್ರಮದಿಂದ ದಾಂಡಿ ಯಾತ್ರೆಗೆ ಹೊರಟರು ಮತ್ತು ಆ ದಿನ ಇಷ್ಟು ಹೊತ್ತಿಗೆ ಅವರು ಚಂಡೋಲದ ಕೆರೆಯನ್ನು ದಾಟಿ ಹೋಗಿದ್ದರು" ಎಂದು ವಲ್ಲಭಭಾಯಿಯವರು ಬೆಳಗ್ಗೆ ಹೇಳಿದರು.

"ನಾನು ಎಷ್ಟು ಉತ್ತುತ್ತಿಗಳನ್ನು ನೆನೆಸಲಿ?" ಎಂದು ವಲ್ಲಭಭಾಯಿಯವರು ಕೇಳಿದರು. ಅದಕ್ಕೆ ಬಾಪು "ಹದಿನೈದು" ಎಂದು ಉತ್ತರವಿತ್ತರು.

ವಲ್ಲಭಭಾಯಿಯವರು: "೧೫ ಕಡ್ಡಿ ೫೦ ಕ್ಯಾಲರಿ [illegible]?" ಎಂದರು. ಬಾಪುಗಳು: "[illegible]. ಹಾಗಾದರೆ ನನಗೆ ಪತ್ರವನ್ನು ಮಾತ್ರ ಕೊಡಿರಿ."

ಮಧ್ಯಾಹ್ನ ಜೇಲಿನ ಪುಸ್ತಕ ಭಾಂಡಾರದ ಹೆಸರುಪಟ್ಟಿ ತಲುಪಿತು. ಸ್ಕಾಟ್, ಮೆಕಾಲೆ, ಜೂಲ್ಸ್ ವರ್ನ್ ಮತ್ತು ವಿಕ್ಟರ್ ಹ್ಯೂಗೋ ಇವರ ಯಾವುದಾದರೊಂದು ಪುಸ್ತಕ ಇಲ್ಲವೆ ಕಿಂಗ್ಸ್‌ಲಿಯ "ವೆಸ್ಟ್‌ವರ್ಡ್ ಹೋ" ಅಥವಾ ಗಯ್ಟೆಯ "ಫಾಸ್ಟ್" ಅದರಲ್ಲಿದೆಯೋ? ಎಂದು ಬಾಪು ಕೇಳಿದರು. ಎಡ್ವರ್ಡ್ ಕಾರ್ಪೆಂಟರರ "ಆಡಮ್ಸ್ ಪೀಕ್ ಟು ಎಲಿಫಾಂಟಾ" ಮತ್ತು ನಿವೇದಿತೆಯ "ಕ್ರೇಡ್ಲ್ ಟೇಲ್ಸ್ ಆಫ್ ಹಿಂದೂಯಿಜಂ" ಎಂಬ ಪುಸ್ತಕಗಳನ್ನು ಕೊಡೆಂದು ನನಗೆ ಕೇಳಿ ಸ್ಟೀವನ್ಸನ್ನರ "ಡಾಕ್ಟರ್ ಜಾಕಿಲ್ ಎಂಡ್ ಮಿಸ್ಟರ್ ಹೈಡ್" ಎಂಬ ಪುಸ್ತಕವನ್ನು ತಾವು ದಕ್ಷಿಣ ಆಫ್ರಿಕದ ಜೇಲಿನಲ್ಲಿದ್ದಾಗ ಓದಿದ್ದೇನೆಂದರು.

× × ×

ಖಗೋಲಶಾಸ್ತ್ರದ ವಿಷಯವಾಗಿ ಮಾತನಾಡುತ್ತ, 'ಆಕಾಶದ ಗೋಲಗಳ ಅಭ್ಯಾಸದಲ್ಲಿ ನಾನು ಒಳ್ಳೆಯ ಪ್ರಗತಿಯನ್ನು ಸಾಧಿಸಿದ್ದೇನೆ. ನೀನು ಕಾಕಾರೊಡನೆ ಆಕಾಶವನ್ನು ಮನಸ್ಸಿಟ್ಟು ನೋಡಿದೆಯೊ? ನಾನು 'ಇಲ್ಲಸ್ಟ್ರೇಟೆಡ್ ವೀಕ್ಲಿ"ಯ ಭೂಪಟವನ್ನು ನೋಡಿಕೊಂಡು ರೋಹಿಣಿ, ಕೃತ್ತಿಕೆ, ಮೃಗಶಿರ, ಅನುರಾಧೆ ಮತ್ತು ಜ್ಯೇಷ್ಠ ನಕ್ಷತ್ರಗಳನ್ನು ದಾಟಿ ಬಹುದೂರ ಹೋಗಿದ್ದೇನೆ. ದಕ್ಷಿಣ ಆಫ್ರಿಕದಲ್ಲಿ ನನ್ನ ಸಹಕಾರ್ಯಕರ್ತರಾಗಿದ್ದ ಹರ್ಬರ್ಟ್ ಕಿಚಿನ್ನರಿಗೆ ಈ ವಿಷಯದಲ್ಲಿ ಬಹಳ ಆಸಕ್ತಿಯಿತ್ತು; ಅವರು ನನ್ನನ್ನು ಒಂದು ವೇಧಶಾಲೆಗೆ ಕರೆದೊಯ್ದರು. ಆಗ ನನ್ನ ಮನಸ್ಸು ಅನ್ಯಾಸಕ್ತವಾಗಿದ್ದುದರಿಂದ ಅವರಿಗೆ ಆ ವಿಷಯದಲ್ಲಿ ತಮಗಿದ್ದ ಉತ್ಸಾಹವನ್ನು ನನ್ನಲ್ಲಿ ಉಂಟು ಮಾಡಲಾಗಲಿಲ್ಲ. ಇಲ್ಲಾದರೋ ನನ್ನ ಆಕಾಶದ ಅಭ್ಯಾಸದಲ್ಲಿ ನಾನು ಯಥೇಷ್ಟವಾಗಿ ಹರ್ಷಿಸುತ್ತೇನೆ. ಅದು ನಮ್ಮ ದೃಷ್ಟಿಯನ್ನು ವಿಶಾಲಗೊಳಿಸುವುದು" ಎಂದು ಬಾಪು ಹೇಳಿದರು.

ಈಗ ಬಾಪು ಅಪ್ಟನ್ ಸಿನ್‌ಕ್ಲೇರರ "ದ ವೆಟ್ ಪರೇಡ್" ಎಂಬ ಪುಸ್ತಕವನ್ನು ಬಹಳ ಆಸಕ್ತಿಯಿಂದ ಓದುತ್ತಿದ್ದಾರೆ. "ಸಿನ್‌ಕ್ಲೇರರು ದೊಡ್ಡ ಸೇವೆ ಸಲ್ಲಿಸುತಿದ್ದಾರೆ. ಅವರು ಒಂದಾದಮೇಲೊಂದರಂತೆ ಸಮಾಜದಲ್ಲಿಯ ಕೆಟ್ಟಪದ್ಧತಿಗಳನ್ನು ಎತ್ತಿಕೊಂಡು ಅದರ ಮೇಲೆ ಒಳ್ಳೆಯ ಬೆಳಕನ್ನು ಬೀರುತ್ತಾರೆ" ಎಂದು ಅವರು ಹೇಳಿದರು.

೧೪ ಮಾರ್ಚ ೧೯೩೨

ಬಾಪು "ಇಲ್ಲಸ್ಟ್ರೇಟೆಡ್ ವೀಕ್ಲಿ"ಯಿಂದ ಭೂಪಟವನ್ನು ಕತ್ತರಿಸಿ ತೆಗೆದು, ರಟ್ಟಿನ ಮೇಲೆ ಅವನ್ನು ಅಂಟಿಸಿರೆಂದು ವಲ್ಲಭಭಾಯಿಯವರಿಗೆ ಹೇಳಿದರು. ವಲ್ಲಭಭಾಯಿಯವರು ಆಶ್ರಮದ ಟಪ್ಪಾಲಿನಿಂದ ಮೇಲುಹೊದಿಕೆಯ ಕಾಗದ ತಂದು ಒಂದು ಒಳ್ಳೆಯ ಲಕ್ಕೋಟೆಯನ್ನು ತಯಾರಿಸಿದರು.

೧೫ ಮಾರ್ಚ ೧೯೩೨

ಈ ಬೆಳಗ್ಗೆ ಎಂದಿನಂತೆ ೩.೪೫ಕ್ಕೆ ಏಳದೆ ಮೂರು ಗಂಟೆಗೇ ಬಾಪು ಎದ್ದರು. "ನಾನು ಮೂರು ಹೊಡೆದದ್ದನ್ನು ಮಾತ್ರ ಕೇಳಿದೆ" ಎಂದೆ. ಬಾಪು ಗಡಿಯಾರದ ಕಡೆಗೆ ತಿರುಗಿ ಮೂರಾದದ್ದನ್ನು ನೋಡಿ, "ನಾವೀಗ ಎದ್ದಿರುವುದರಿಂದ ನಮ್ಮ ಪ್ರಾತಃಪ್ರಾರ್ಥನೆಯನ್ನು ಮಾಡೋಣ" ಎಂದರು. ಪ್ರತಿನಿತ್ಯವೂ ೪॥ ಮತ್ತು ೫॥ ಗಳ ನಡುವೆ ಬಾಪು ಮತ್ತು ಸರದಾರರು ತಿರುಗಾಡಲು ಹೋಗುತ್ತಾರೆ. ಬಾಪು ಆಗ ತಮ್ಮ ವಾರದ ಮೌನವನ್ನು ಆಚರಿಸುತ್ತಿದ್ದುದರಿಂದ ಅವರು ನಿದ್ದೆಯನ್ನು ಪೂರಯಿಸಿರೆಂದು ಸರದಾರರಿಗೆ ಬರೆದು ತಿಳಿಸಿದರು. ಆದರೆ ಸರದಾರರು, "ಆಗದು. ನಾನು ನಿಮ್ಮ ಹೆಜ್ಜೆಯನ್ನೇ ಅನುಸರಿಸುತ್ತೇನೆ" ಎಂದರು. (ಹರಿಜನ)

"ಕೊನೆಯ ದರ್ಶನ ತೆಗೆದುಕೊಳ್ಳುವದರಲ್ಲಿ ಏನೂ ಹುರುಳಿಲ್ಲ ಎಂಬದನ್ನು ನೆನೆದು ತಿಳಿದುಕೋ. ನೀನು ಪ್ರೀತಿಸುತಿರುವ ಚೇತನವು ಯಾವಾಗಲೂ ನಿನ್ನ ಹತ್ತಿರವೇ ಇದೆ. ಆ ಚೇತನವನ್ನು ಯಾವ ದೇಹದ ಮುಖಾಂತರ ನೀನು ಪ್ರೀತಿಸಲು ಕಲಿತೆಯೋ ನಿನ್ನ ಪ್ರೇಮವನ್ನು ದೃಢೀಕರಿಸುವದಕ್ಕಾಗಿ ಇನ್ನು ಮುಂದೆ ಆ ದೇಹವು ಅವಶ್ಯವಿಲ್ಲ. ಅದರ ಉಪಯೋಗವಾಗುವ ವರೆಗೆ ಮಾತ್ರ ಅದು ಬಾಳುವದು ಇಷ್ಟವೇ ಆಗಿದೆ. ಅದು ನಿರುಪಯುಕ್ತವಾದ ಕೂಡಲೆ ನಾಶಹೊಂದುತ್ತದೆ. ಇದೂ ಇಷ್ಟವೇ. ಅದು ಯಾವಾಗ ನಿರುಪಯುಕ್ತವಾಗುತ್ತದೆಂಬದು ನಮಗೆ ಗೊತ್ತಾಗುವದಿಲ್ಲದ್ದರಿಂದ, ಯಾವದೇ ಕಾರಣದಿಂದ ಮರಣ ಬಂದರೂ ಅದರ ಉಪಯೋಗದ ಅವಶ್ಯಕತೆ ಇನ್ನು ಮುಂದೆ ಇರಲಿಲ್ಲೆಂದು ನಾವು ನಿರ್ಣಯಿಸುತ್ತೇವೆ"–

೨೦-೯-೧೯೩೨

—ಗಾಂಧೀಜಿ

ಕರ್ಮವೀರ

ಶ್ರೀಮಚ್ಚಾಲುಕ್ಯ ವಿಕ್ರಮ ವರ್ಷ ೮೭೨
ಮಾಘ ಶು|| ೨ ಸೋಮವಾರ

ಜನವರಿ ೩೦

ಭಾರತದ ರಾಷ್ಟ್ರಪಿತನು ಶ್ರೀ ಪುರುಷ ಶ್ರೇಷ್ಠರಾದ ಗಾಂಧಿಜಿಗೆ ಆಹುತಿಯಾಗಿ ಈ ಜನವರಿ ೩೦ಕ್ಕೆ ಒಂದು ವರ್ಷ ಕಳೆಯಿತು. ಅದು ಭಾರತದ ಇತಿಹಾಸದಲ್ಲಿ ಅತ್ಯಂತ ದುರ್ದಿನವೆಂದು ಹೇಳಬೇಕು. ಗಾಂಧೀಜಿ ಅಂದು ಸತ್ತರೆಂಬ ಕಾರಣವಿಂದಲ್ಲ, ಏಕೆಂದರೆ ರಾಷ್ಟ್ರಪಿತನಾದರೂ ಮರ್ತ್ಯನು ಮರ್ತ್ಯನೇ; ಅವನು ಒಂದಲ್ಲ ಒಂದು ದಿನ ಸಾಯಲೇಬೇಕು. ರಾಷ್ಟ್ರ ಅನಾಥವಾಯಿತೆಂದಲ್ಲ, ಏಕೆಂದರೆ ಒಬ್ಬ ನಾಯಕನನ್ನು ಕಳೆದುಕೊಂಡರೆ ರಾಷ್ಟ್ರ ಆ ಸ್ಥಾನದಲ್ಲಿ ಇನ್ನೊಬ್ಬನನ್ನು ನಿರ್ಮಿಸಿಕೊಂಡೇ ತೀರುವದು, ತೀರಬೇಕು; ನಿರ್ಮಿಸಿಕೊಳ್ಳಲಾರದೆ ಹೋದರೆ ಅದು ಉಳಿಯಲು ಅನರ್ಹವೆನಿಸೀತು. ಅವರು ಇಷ್ಟು ಬೇಗ ನಮ್ಮನ್ನು ಬಿಟ್ಟು ತೆರಳಿದರೆಂದೂ ಅಲ್ಲ. ಏಕೆಂದರೆ ಒಂದು ರೀತಿಯಿಂದ ಅವರು ತಮ್ಮ ಜೀವನದ ಮಹಾಧ್ಯೇಯಗಳಲ್ಲೊಂದಾದ ರಾಷ್ಟ್ರ ಸ್ವಾತಂತ್ರ್ಯವನ್ನು ಗಳಿಸಿಕೊಟ್ಟು ಕೃತಾರ್ಥರೇ ಆಗಿದ್ದರು. ಇಂದು ಅವರಿಗಾಗಿ ಮರುಗುವ ಅಂಶ ಉಳಿದಿಲ್ಲ, ಅವರು ಸತ್ತು ಅಮರರಾದವರು ಆದರೆ ಅವರ ಅಪಮೃತ್ಯು ರಾಷ್ಟ್ರದ ಅಂತರಂಗದೊಳಗಿನ ಅಗಾಧವಾದ ಕೆಡುಕಿನ, ಹೊಲಸಿನ ದ್ಯೋತಕವಾಗಿತ್ತು. ಇದೀಗ ನಿಜವಾಗಿ ವಿಷಾದದ ಸಂಗತಿ. ಗಾಂಧೀಜಿ ಸೈನಿಕ ಬಲದಿಂದ, ಪಕ್ಷದ ಉಕ್ಕಿನ ಹಿಡಿತದಿಂದ ರಾಷ್ಟ್ರದ ಜನತೆಯನ್ನು ಅಂಕಿತದಲ್ಲಿರಿಸಿಕೊಂಡ ಸರ್ವಾಧಿಕಾರಿಯಾಗಿರಲಿಲ್ಲ ಅವರಿಗೆ ಸರಕಾರದಲ್ಲಿ ಯಾವ ಅಧಿಕಾರವೂ ಇರಲಿಲ್ಲ ಅವರು ವಿರೋಧಿಗಳನ್ನು ಕಂಗೆಡಿಸುವ ಉತ್ತೇಜಕ ಭಾಷಣಗಳಿಂದ ಇಲ್ಲವೆ ಅಲ್ಲಸಲ್ಲದ ಆಸೆತೋರಿಸಿ ಜನರನ್ನು ಮರುಳುಗೊಳಿಸಿ ತಮ್ಮ ಕಡೆಗೆ ತಿರುಗಿಸಿಕೊಳ್ಳುವ ಸಮ್ಮೋಹಕ ನಾಯಕ ಕೂಡ ಆಗಿರಲಿಲ್ಲ. ಅವರು ಉಪದೇಶಿಸುತ್ತಿದ್ದುದು ತಪ್ಪಾಗಿದ್ದರೂ—ಹಾಗೆ ಆಗಿರಲಿಲ್ಲ— ಅವರನ್ನು ಕೊಲೆ ಮಾಡುವ ಅವಶ್ಯಕತೆಯೇನೂ ಇರಲಿಲ್ಲ ಜನರನ್ನು ಒಲಿಸಿಕೊಳ್ಳುವ ಅಥವಾ ಸರಕಾರವನ್ನು ವಶಪಡಿಸಿಕೊಳ್ಳುವ ಅನ್ಯ ನ್ಯಾಯ್ಯ ಸಾಧನಗಳೆಲ್ಲವೂ ವಿರೋಧಿಗಳಿಗೆ ಲಭ್ಯವೇ ಆಗಿದ್ದವು. ಅದನ್ನು ಬಿಟ್ಟು ಯಾವೊಂದು ಸಂರಕ್ಷಣೆಯೂ ಇಲ್ಲದೆ, ಎದೆಯನ್ನು ಬಟ್ಟೆಯಿಂದ ಕೂಡ ಮುಚ್ಚಿಕೊಳ್ಳದೆ ತಿರುಗಾಡುವ ಕೃಶದೇಹಿಯೊಬ್ಬನನ್ನು ಕೊಲ್ಲಬೇಕೆಂದು ನಡೆದ ದೊಡ್ಡ ಹೊಂಚೇ ರಾಷ್ಟ್ರದ ದುರದೃಷ್ಟದ ದ್ಯೋತಕವಾಗಿತ್ತು. ಈ ಅನ್ಯಾಯಕ್ಕೆ ಗುರಿಯಾದವರು ಮಹಾತ್ಮರಾಗಿರದೆ ಮತ್ತಾರಾಗಿದ್ದರೂ ಅದು ಅಷ್ಟೇ ದುಃಖದಾಯಕವಾದ ಘಟನೆಯೆ ಆಗುತಿತ್ತು. ಏಕೆಂದರೆ ನಮಗೆ ಮೆಚ್ಚದ ಮುಂದಾಳುಗಳನ್ನು ಕೊಂದು ನಿವಾರಿಸುವ ಪರಿಪಾಠ ಪ್ರಾರಂಭವಾಯಿತೆಂದರೆ ಅದಕ್ಕೆ ಕೊನೆ ಮೊದಲೆಲ್ಲಿ? ಆ ವೃತ್ತಿ ಹಬ್ಬಿತೆಂದರೆ ರಾಷ್ಟ್ರ ನಿರ್ನಾಮವೇ ಆಗಿಹೋದೀತು. ಈ ಹಿಂಸಾ ಪ್ರವೃತ್ತಿಗಳನ್ನು, ಹಗೆ ಸಾಧಿಸುವ ರೀತಿಯನ್ನು ಮನುಷ್ಯಬುದ್ಧಿಯಿಂದ ಕಿತ್ತೊಗೆಯುವ ಸಲುವಾಗಿಯೇ ಗಾಂಧೀಜಿ ತಮ್ಮ ಜೀವನವನ್ನು ಮುಡಿಪಾಗಿಟ್ಟಿದ್ದರು ಮತ್ತು ಆ ಪ್ರಯತ್ನದಲ್ಲೆ ತಮ್ಮ ಮುಡಿಪು ಮುಟ್ಟಿಸಿದರು. ಅವರು ಅಮರರಾದರು. ನಾವು ಮಾತ್ರ ಅಸುರರ ರಾಷ್ಟ್ರವಾಗಬಾರದಾದರೆ, ಅವರು ಬೋಧಿಸಿದ ತತ್ವಜ್ಞಾನವನ್ನು ರಾಷ್ಟ್ರಜೀವನದಲ್ಲಿ ಸಂಚಿತಗೊಳಿಸಬೇಕು. ಗಾಂಧೀಜಿ ಮಹಾಪುರುಷರು, ದೇವತಾಸ್ವರೂಪರು, ಅವರು ಸಾಧಿಸಲಾರದೆ ಹೋದುದನ್ನು - ಮಾನವ ಬಾಂಧವ್ಯವನ್ನು - ನಾವು ಸಾಧಿಸಲಾಪೆವೆ? ಎಂಬ ಹೈಗಳ್ಳತನವನ್ನು ಬಿಟ್ಟು ಅವರ ಜೀವನದ ಮೇಲ್ಪಂಕ್ತಿಯನ್ನು ಅನುಸರಿಸಿದರೆ ರಾಷ್ಟ್ರವನ್ನು ಮಾತ್ರವಲ್ಲ ಇಡೀ ಜಗತ್ತನ್ನೇ ರಕ್ಷಿಸುವ ಯೋಗ್ಯತೆ ನಮಗೆ ಬಂದೀತು. ಅವರ ಪುಣ್ಯದಿನದಂದು ನಾವು ಆ ಪ್ರತಿಜ್ಞೆಯಿಂದ ಬದ್ಧರಾಗೋಣ. ರಾಷ್ಟ್ರಜೀವನವನ್ನು ತುಂಬಿರುವ ಕಲುಷವನ್ನು ತೊಳೆದು ಶುಭ್ರಗೊಳಿಸೋಣ.

ಗಾಂಧೀ ಪುಣ್ಯತಿಥಿಯ ಬಗ್ಗೆ ಮಾನ್ಯ ದಿವಾಕರರ ಸಂದೇಶ

ಆ ಮಹಾತ್ಮರು ನಮ್ಮನ್ನಗಲಿ ಒಂದು ವರುಷವಾಗಿ ಹೋಯಿತೇ! ಅಯ್ಯೋ! ಒಬ್ಬ ತಲೆತಿರುಕನ ಗುಂಡಿಗವರು ತುತ್ತಾಗಬೇಕೆ? ಆದರೇನು? ಅವರು ಅಮರರು. ಅವರ ಅಮರಸಂದೇಶವು ಮಾನವ ಕುಟುಂಬಕ್ಕೆ ಪದೇ ಪದೇ ಮಾರ್ಗದರ್ಶಕವಾಗುವದು. ಸತ್ಯಾಗ್ರಹ, ಸತ್ಯಪ್ರೇಮ, ಸತ್ಯಕ್ಕಾಗಿ ಸಾವು ನೋವುಗಳ ಸತತ ಸಹನ, ಇದೇ ಅವರ ಅಮರ ವಾಣಿಯು. ಸತ್ಯಕ್ಕಾಗಿ ಕೊಲ್ಲದೆ ಸಾಯಬೇಕು, ಸತ್ಯಕ್ಕಾಗಿ ಮಾಡಬೇಕು ಇಲ್ಲವೆ ಮಡಿಯಬೇಕು, ಎಂಬ ಅವರ ಅಮೃತಶಬ್ದವು ಆಕಾಶವನ್ನೆಲ್ಲ ತುಂಬಿ ನಮ್ಮ ಹೃದಯ ಸೀಮೆಯನ್ನು ಆವರಿಸಿಕೊಂಡಿರುವದು. ಈ ಪವಿತ್ರದಿನ ನಾವು ಅವರ ಅನುಯಾಯಿಗಳೆನ್ನಿಸಿಕೊಳ್ಳುವ ಸಾಮರ್ಥ್ಯ ನಮಗೆ ಬರಲಿ, ಸತ್ಯ, ಅಹಿಂಸೆ ಎಂಬ ಅವರ ಮಹಾಮಂತ್ರವು ನಮ್ಮ ನಾಲಿಗೆಯ ಮೇಲೆ ನಲಿನಲಿದಾಡಲಿ.

ಈ ಸಂಚಿಕೆ

ಗಾಂಧೀಜಿಯ ಪುಣ್ಯತಿಥಿಯ ದಿನ ಅವರೇ ಸ್ಥಾಪಿಸಿದ "ಹರಿಜನ" ಪತ್ರಿಕೆಯವರು ಅವರ ತತ್ವಗಳ ಸಂಸ್ಮರಣಕ್ಕಾಗಿ ಹೊರಡಿಸಿದ ವಿಶೇಷ ಸಂಚಿಕೆಯ ಬಹುಭಾಗವನ್ನು ಇಲ್ಲಿ ಅನುವಾದಿಸಿ ಸಮಕಾಲದಲ್ಲೇ ಪ್ರಕಟಿಸಲಾಗಿದೆ. ಸರ್ವೋದಯಕ್ಕಾಗಿ ಮಹಾತ್ಮಾ ಗಾಂಧಿಯವರು ತೋರಿಸಿದ ಮಾರ್ಗವನ್ನು ಹೃದಯದಲ್ಲಿ ಅಚ್ಚೊತ್ತಲು ಇದು ಸಹಾಯವಾದೀತೆಂದು ನಂಬುತ್ತೇವೆ

"ನಿಜವಾಗಿ ನಾವು ನಮ್ಮ ಕರ್ತವ್ಯದಲ್ಲಿಯೇ ತನ್ಮಯರಾಗಿರತಕ್ಕದ್ದು. ನಶ್ವರ ದೇಹವನು ಮಾತ್ರ ನಾವು ಬಿಟ್ಟುಗೊಡುತ್ತೇವೆ. ಈ ದೇಹವೊಂದು ತಾತ್ಪೂರ್ತಿಕ ಸಾಧನವೆಂದು ತಿಳಿದು ಅದನ್ನು ಉಪಯೋಗಿಸದೆ ಅದೇ ಸರ್ವಸ್ವವೆಂದು ತಿಳಿದುಕೊಂಡು ವರ್ತಿಸುತ್ತೇವೆ.

— ಗಾಂಧೀಜಿ

ಬಾಪು — ಅವರ ಧ್ಯೇಯ ಮತ್ತು ವ್ಯವಹಾರಕ್ಕೆ ಅದರ ಅನ್ವಯ

ಡಾ। ಪ್ರಫುಲ್ಲಚಂದ್ರ ಘೋಷ

ಇಂದು, ಗಾಂಧೀಜಿಯ ದುರ್ಮರಣದ ಒಂದು ವರ್ಷದ ಬಳಿಕ, ೧೯೩೧ ರಲ್ಲಿ ಗಾಂಧೀ-ಅಯರ್ವಿನ್ ಒಪ್ಪಂದದ ನಂತರ ಭಾರತವನ್ನು ಕುರಿತ ಒಂದು ಪುಸ್ತಕದಲ್ಲಿ ಜರ್ಮನ್ ವಿದ್ವಾಂಸನೊಬ್ಬನು ಬರೆದ ಮಾತುಗಳು ನನಗೆ ವಿಶೇಷವಾಗಿ ನೆನಪಿಗೆ ಬರುತ್ತವೆ: "ಗಾಂಧಿಯು ತನ್ನ ನೈಸರ್ಗಿಕ ಪ್ರತಿಭಾಸಂಪತ್ತಿಯ ಬಲದಿಂದ ತನ್ನ ಕಾಲದ ಧರ್ಮವನ್ನು ಕಂಡುಕೊಂಡು ಆ ಮೂಲಕ ತನ್ನ ದೇಶಬಾಂಧವರನ್ನು ಸಂಗಡ ಎಳೆದುಕೊಂಡು ಮುನ್ನುಗ್ಗಿ ತನ್ನ ಅಭೀಷ್ಟವನ್ನು ಬಹಳಮಟ್ಟಿಗೆ ಸಾಧಿಸಿಕೊಂಡುಬಿಟ್ಟಿದ್ದಾನೆ." ನಿಜ, ಅವರ ಸೂಜಿಗಲ್ಲಿನಂಥ ವ್ಯಕ್ತಿತ್ವವು ಅನೇಕ ಜನರನ್ನು ಸಂಗಡ ಎಳೆದುಕೊಂಡೇ ಹೊಯ್ಯುತ್ತೆಂಬ ಮಾತು ಅಕ್ಷರಶಃ ಸತ್ಯ. ಆದರೆ ಅವರು ಹೇಳಿದ್ದರ ಇಂಗಿತಾರ್ಥಗಳನ್ನೆಲ್ಲ ಜನರು ಪೂರ್ತಿಯಾಗಿ ಅರಿತುಕೊಳ್ಳಲೂ ಇಲ್ಲ, ಅವರು ಭಾರತದ ಪುನರುತ್ಥಾನಕ್ಕೆ ಅತ್ಯವಶ್ಯವೆಂದು ಬಗೆದ ಅನೇಕ ವಿಷಯಗಳಲ್ಲಿ ಜನರಿಗೆ ನಂಬಿಕೆಯೂ ಇದ್ದಿಲ್ಲ. ಕಾಂಗ್ರೆಸ್ಸಿನಲ್ಲೇ ಅನೇಕರಿಗೆ ಚರಕದ ಸಾರ್ಥಕ್ಯದ ಬಗ್ಗೆ ನಂಬಿಕೆಯಿದ್ದಿಲ್ಲ. ಆದರೂ ಖಾದಿಯನ್ನು ಕುರಿತ ಗೊತ್ತುವಳಿಗಳ ಅಂಗೀಕಾರದಲ್ಲಿ ಅವರೂ ಭಾಗಿಗಳಾಗಿದ್ದರು. ಅನೇಕರು, ಅವರ ತಾತ್ವಿಕ ಸೂತ್ರಗಳೂ ಉಚ್ಚ ಪ್ರತಿಯ ನಡೆವಳಿಗಳೂ ರಾಜಕಾರಣದಲ್ಲಿ ಒಂದು ಅವಗುಣವೆಂದು ಕೂಡ ಭಾವಿಸುತ್ತಿದ್ದರು. ಸತ್ಯ ಮತ್ತು ಅಹಿಂಸೆಗಳಿಗೆ ಇಂಥವರು ಕೇವಲ ಬಾಯ್ಮಾತಿನ ಮನ್ನಣೆಯನ್ನು ಮಾತ್ರ ಕೊಡುತಿದ್ದರು. ಕೆಲವರಂತೂ ಅಸ್ಪೃಶ್ಯತಾ ನಿವಾರಣೆ ಮತ್ತು ಹಿಂದೂ ಮುಸ್ಲಿಂ ಐಕ್ಯದ ಸೂಚ್ಯಾರ್ಥಗಳನ್ನೆಲ್ಲ ನಂಬುತ್ತಲೇ ಇರಲಿಲ್ಲ. ಗಾಂಧೀಜಿಗೆ ಇದೆಲ್ಲ ಗೊತ್ತಿದ್ದಿಲ್ಲವೆಂತಲ್ಲ, ಆದರೆ ಜನರು ಸಾವಕಾಶವಾಗಿ ಬದಲುಗೊಂಡು, ತಾವು ಅಂಗೀಕರಿಸಿದ ಗೊತ್ತುವಳಿಗಳಿಗೆ ಸರಿಯಾಗಿ ವರ್ತಿಸಬಹುದೆಂದು ಅವರು ಬಗೆದಿದ್ದರು. ಆದರೆ ಅವರ ಕಣ್ಮಂಜು ಹರಿಯಿತು. ಕೊನೆಯ ಮೂರು ನಾಲ್ಕು ವರ್ಷಗಳಲ್ಲಿ ಅವರ ಮನಸಿನಲ್ಲಿ, ಕಾಂಗ್ರೆಸನ್ನು ಆಡಸಿದ ಕೊಳೆಯನ್ನು ಹೇಗೆ ತೊಳೆಯಬೇಕೆಂಬ ಚಿಂತೆಯೇ ದೊಡ್ಡ ಚಿಂತೆಯಾಗಿತ್ತು. ಕೆಲವು ಸಲ ಅವರ ಚಿಂತನೆ ಶಬ್ದರೂಪದಲ್ಲಿ ಕೂಡ ಕಾಣಿಸಿಕೊಳ್ಳುತಿತ್ತು. ಬಹುವಿಧ ಜನರ ಮಹಾರಾಶಿಯಾದ ಒಂದು ಸಂಸ್ಥೆಯ ದೌರ್ಬಲ್ಯಗಳು ಅವರಿಗೆ ಚೆನ್ನಾಗಿ ಗೋಚರವಾಗಿದ್ದವು. ಗಾಂಧೀಜಿಗೇನೋ ಬಹುಮತವಿದ್ದೀತು, ಆದರೆ ಗಾಂಧೀ ತತ್ವಗಳಿಗಲ್ಲ. ಆದರೂ ಅವರ ವ್ಯಕ್ತಿತ್ವವೊಂದು ದೊಡ್ಡ ಐಕ್ಯ ಸಾಧನವಾಗಿತ್ತು. ಅವರ ಮರಣಾನಂತರ ಕಾಂಗ್ರೆಸ್ಸಿನೊಳಗಿನ ಕೊಳಕು ಬೇಗ ಬೇಗನೆ ಬೆಳಕಿಗೆ ಬರತೊಡಗಿತು. ಆದ್ದರಿಂದ ಅವರ ಅಗಲಿಕೆ ನಮಗೆ ಇನ್ನಷ್ಟು ತೀವ್ರವಾಗಿ ಅನುಭವಕ್ಕೆ ಬರುತಿದೆ. ಆದುದರಿಂದ ನಾವೆಲ್ಲರೂ ಸ್ವಲ್ಪ ಹೃದಯ ಪರೀಕ್ಷೆ ಮಾಡಿಕೊಳ್ಳುವ ಮತ್ತು ಈ ವಿಷಯವನ್ನು ಆಳವಾಗಿ ವಿಚಾರಿಸಿ ಧೈರ್ಯದಿಂದಲೂ ದೃಢನಿರ್ಧಾರದಿಂದಲೂ ಈ ಪ್ರಶ್ನೆಯನ್ನು ಎದುರಿಸುವ ಕಾಲ ಒದಗಿಬಂದಿದೆ.

ಪರಿಸ್ಥಿತಿಯ ಸ್ವರೂಪ ಸರಳವೇ ಆಗಿದೆ: ಕಾಂಗ್ರೆಸ್ಸಿನಲ್ಲಿ ಬಲು ದೊಡ್ಡ ಅಂಶಕ್ಕೆ ಗಾಂಧೀ ತತ್ವಗಳಲ್ಲಿ ಶ್ರದ್ಧೆಯಿದ್ದಿಲ್ಲ. ಆದರೂ ಅವರು ಮಂಡಿಸಿದ ಗೊತ್ತುವಳಿಗಳನ್ನು ಕಾಂಗ್ರೆಸ್ಸು ಸ್ವೀಕರಿಸುತಿದ್ದುದೇಕೆಂದರೆ, ಗಾಂಧೀಜಿ ಮಧ್ಯಪಂಚಾಯತಿ ಮಾಡಲು ಯಾವಾಗಲೂ ಸಿದ್ಧರಾಗಿದ್ದವರಾದರೂ ಮೂಲತತ್ವಗಳಲ್ಲಿ ಮಧ್ಯಮಾರ್ಗಕ್ಕೆ ಎಂದೂ ಒಪ್ಪುವವರಾಗಿದ್ದಿಲ್ಲ. ಅವುಗಳನ್ನು ಪೂರ್ತಿಯಾಗಿ ಒಪ್ಪಿದರೇನೇ ಅವರು ಮುಂದಾಳ್ತನ ವಹಿಸಲು ಸಮ್ಮತಿಸುವವರು. ಗಾಂಧೀಜಿಯ ಮುಂದಾಳ್ತನ ಅವಶ್ಯಕೆಂದು ಪರಿಗಣಿಸಲ್ಪಟ್ಟಿತ್ತು ಮತ್ತು ಆ ಕಾರಣದಿಂದಲೇ ಕಾಂಗ್ರೆಸಿಗರು ಆ ಮೂಲತತ್ವಗಳಿಗೂ ಗೋಣುಹಾಕಿದರು. ಫಲವಾಗಿ, 'ಅನೇಕರು "ಅಂತರಿಕ ದ್ವಂದ್ವ"ವೆಂದು ಕರೆಯಬಹುದಾದ ಬೇನೆಗೆ ಗುರಿಯಾಗಿ ಯಾತನೆಪಟ್ಟು ಹೇಡಿಗಳಾದರು. ಇಂಥ ಅವಸ್ಥೆಯಲ್ಲಿ ಇಂದು ಪರಿಸ್ಥಿತಿ ಈ ನಿಟ್ಟಿಗೆ ಬಂದುಮುಟ್ಟಿದ್ದು ಸೋಜಿಗವಲ್ಲ. ತಾನು ಉಪದೇಶಿಸುವದೊಂದು ಆಚರಿಸುವದು ಬೇರೊಂದು ಆದಾಗ ಒಂದಲ್ಲ ಒಂದು ದಿನ ಮನುಷ್ಯ ನಿಷ್ಪ್ರಭಾವನಾಗದಿರನು. ಆದುದರಿಂದ ಇದರ ಮೂಲ ಕಾರಣವನ್ನು ನಿವಾರಿಸುವದೊಂದೇ ಉಪಶಮನದ ಹಾದಿ.

ಜಯಪುರದಲ್ಲಿ ಕಾಂಗ್ರೆಸ್ಸು ಇಮ್ಮಡಿಯಾದ ಆ ಅಂತರ್ದ್ವಂದ್ವದೊಡನೆ ಗಾಂಧೀ ತತ್ವಸೂತ್ರಗಳನ್ನು ಪುನಶ್ಚರಿಸಿದೆ. ನಾವು ಗಾಂಧೀ ತತ್ವಗಳನ್ನು ಪುನಶ್ಚರಿಸಿದರೆ ಅದನ್ನು ಆಚರಣೆಯಲ್ಲಿ ತರಬೇಕು, ಇಲ್ಲದಿದ್ದರೆ ಅದನ್ನು ತ್ಯಜಿಸಿ ಬೇರೊಂದು ತತ್ವವನ್ನು ಅಂಗೀಕರಿಸುವಷ್ಟು ಧೈರ್ಯತೋರಬೇಕು. ಇದನ್ನು ಮಾಡುವ ಕಾಲವೀಗ ಬಂದಿದೆ. ಇಷ್ಟು ಮಾಡಬೇಕು, ಇಲ್ಲದಿದ್ದರೆ ಇತಿಹಾಸದಲ್ಲಿ ಗಾಂಧೀಜಿಯ ತತ್ವಗಳಿಗೆಲ್ಲ ಮಣ್ಣು ಕೊಟ್ಟವರೆಂದು ನಾವು ಶಾಶ್ವತವಾಗಿ ಅಪವಾದಕ್ಕೊಳಗಾಗುವದು ನಿಶ್ಚಯ. ಅಷ್ಟೇ ಅಲ್ಲ, ರಾಷ್ಟ್ರದ ಬೆಳವಣಿಗೆಯನ್ನು ಮೊಟಕಿಸಿದ್ದಕ್ಕಾಗಿ ನಾಳಿನ ಪೀಳಿಗೆ ನಮ್ಮನ್ನು ನ್ಯಾಯವಾಗಿ ಶಪಿಸುವದು.

ಅಶೋಷಿತ, ವರ್ಗರಹಿತ ಸಮಾಜವನ್ನು ಸಂಸ್ಥಾಪಿಸಬೇಕೆಂದು ಗಾಂಧೀಜಿ ಬಯಸಿದ್ದರು: ಅದಕ್ಕೆ ಅವರು ಕೃಷಿಕ ಮಜದೂರ ರಾಜ್ಯ ಅಥವಾ ರಾಮರಾಜ್ಯವೆಂದು ಹೆಸರಿಟ್ಟಿದ್ದರು. ಅಹಿಂಸೆಯೇ ಅವರ ವೇದಾಂತದ ಮೂಲಾಧಾರವು. ಹಿಂಸಾಬದ್ಧವಾದ ಸಮಾಜದಲ್ಲಿ ಕೆಲವೇ ಬಲಿಷ್ಠ ಜನರು ದುರ್ಬಲ ಜನಸಮೂಹವನ್ನೆ ಗುಲಾಮಗಿರಿಯಲ್ಲಿ ಇಡಬಲ್ಲರು! ಆದರೆ ಅಹಿಂಸಾತ್ಮಕ ಸಮಾಜದಲ್ಲಿ ಹಾಗಾಗುವದಶಕ್ಯವು. ಅಂತೆಯೆ ಅವರು ಹಿಂಸೆಯನ್ನು ಕಡೆಗಣಿಸಿದರು. ಎರಡನೆಯವರನ್ನು ಯಾವದೇ ಬಗೆಯಿಂದ ಶೋಷಿಸುವದೂ ಹಿಂಸೆಯೇ. ಸದ್ಯದ ಸಮಾಜ ರಚನೆಯೂ ಹಿಂಸೆಯನ್ನು ಆಧರಿಸಿ ರಚಿತವಾಗಿದೆ. ಅದನ್ನು ಬದಲಿಸಬೇಕೆಂದು ಅವರು ಬಯಸಿದರು. ಅವರ ತತ್ವಜ್ಞಾನಕ್ಕೆ ಅಹಿಂಸಾತ್ಮಕ ಸಾಮ್ಯವಾದವೆಂದು ಕರೆಯಬಹುದು. ಜಗತ್ತೆಲ್ಲವೂ ದ್ರುತಗತಿಯಿಂದ ಸಾಮ್ಯವಾದದತ್ತ ಧಾವಿಸುತಿದೆಯೆಂಬುದು ನಮಗೆ ಗೊತ್ತಾಗಲಿಕ್ಕಿಲ್ಲ ನಾವು ಕಣ್ಣುಮುಚ್ಚಿಕೊಂಡೂ ಕೂಡ್ರಬಹುದು. ಹಿಂದುಸ್ತಾನದಲ್ಲಿ ಅಹಿಂಸಾತ್ಮಕ ಸಾಮ್ಯವಾದವನ್ನು ಆಚರಣೆಯಲ್ಲಿ ತರದಿದ್ದರೆ ಹಿಂಸಾತ್ಮಕ ಸಾಮ್ಯವಾದವು ತನ್ನ ಪ್ರಸ್ಥವನ್ನು ಬೆಳೆಸಬಲ್ಲದು. ಸೂರ್ಯ ಪ್ರಕಾಶದಷ್ಟು ಸ್ಪಷ್ಟವಾಗಿ ಅದು ನನಗೆ ಕಾಣಹತ್ತಿದೆ. ಹಿಂಸಾತ್ಮಕ ಸಾಮ್ಯವಾದದ ರೋಗಕ್ಕೆ ಗಾಂಧೀಜಿಯ ತತ್ವಜ್ಞಾನವನ್ನು ಆಚರಿಸುವದೇ ಯೋಗ್ಯಮದ್ದು. ಸಂರಕ್ಷಕ ಕ್ರಮಗಳನ್ನು ಕೈಕೊಳ್ಳುವದರಿಂದ ಉದ್ದೇಶವು ಸಾಧ್ಯವಾಗಲಾರದು. ಕಾಂಗ್ರೆಸಿಗರು ಇಂದು ಈ ಮಾತಿನ ರಹಸ್ಯವನ್ನು ತಿಳಿದುಕೊಂಡದ್ದಾದರೆ ಅವರು ಹಿಂದುಸ್ತಾನಕ್ಕೆ ಸೇವೆಯನ್ನು ಸಲ್ಲಿಸುವರಷ್ಟೇ ಅಲ್ಲ. ಜಗತ್ತಿನಲ್ಲಿಯೇ ಒಂದು ಹೊಸ ಸಮಾಜ ರಚನೆಯ ಸ್ಥಾಪನೆಗೆ ಸಹಾಯ್ಯ ಮಾಡಬಲ್ಲರು. ಇಲ್ಲದಿದ್ದರೆ ಕಾಂಗ್ರೆಸ್ಸು ತನ್ನ ಚೈತನ್ಯವನ್ನೇ ಕಳೆದುಕೊಳ್ಳುವದು; ಇದನ್ನು ನೆನೆಸುವದು ಕೂಡ ಕಷ್ಟದಾಯಕವಾಗಿದೆ.

ಗಾಂಧೀಜಿಯ ತತ್ವಜ್ಞಾನದಂತೆ ನಡೆಯುವದೆಂದರೆ ಏನು ಎಂಬದನ್ನು ಸ್ವಲ್ಪ ವಿಮರ್ಶಿಸುವಾ. ಯಾವನೊಬ್ಬ ಮನುಷ್ಯನು ನೂಲು ತೆಗೆಯಬಹುದು ಆದರೆ ಅವನು ದುರ್ಜನನಿರಬಹುದು. ಆದರೆ ಯಾವನೊಬ್ಬನು ಎಷ್ಟೇ ಪ್ರಾಮಾಣಿಕನಿದ್ದರೂ ನೂಲು ತೆಗೆಯದಿದ್ದರೆ

ಗಾಂಧೀಜಿಯ ತತ್ವಜ್ಞಾನದ ಅನುಯಾಯಿ ಆವನಾಗಲಾರನು. ಅವನು ಪ್ರಾಮಾಣಿಕನೂ ಆಗಿರಬೇಕು, ನೂಲೂ ತೆಗೆಯುತ್ತಿರಬೇಕು. ಕಸಗೂಡಿಸುವವನ ಕೈಯಿಂದ ನೀರು ತಗೆದುಕೊಳ್ಳಲು ಯಾವನೊಬ್ಬನು ನಿರಾಕರಿಸಬಹುದು, ಅಪರೂ ಆವನು ಅತ್ಯಂತ ಪ್ರಾಮಾಣಿಕನಿರಬಹುದು. ಇಂಥವನು ಗಾಂಧೀಜಿಯ ತತ್ವಜ್ಞಾನದಿಂದ ಬಹಳ ದೂರಉಳಿಯುವವನು. ಈ ದೇಶದಲ್ಲಿಯ ಪ್ರಚಂಡ ಜನಸಮೂಹವು ಬಡತನದಿಂದ ಬಳಲಿ ಜಂಡಾಗುತ್ತಿದೆ. ಹಿಂಸೆಯ ಸುಸ್ಪಷ್ಟ ನಿದರ್ಶನವಿದ್ದು. ನಮ್ಮಲ್ಲಿ ಎಷ್ಟು ಜನರಿಗೆ ಇದರ ಅರಿವಿದೆ ಮತ್ತು ಎಷ್ಟು ಜನರು ಆ ಬಗ್ಗೆ ಪರಿತಪಿಸುತ್ತಿರುವರು. 'ಹಿಂದುಸ್ತಾನದ ಯಾವದೇ ಮೂಲೆಯಲ್ಲಿ ಅರಮನೆಯೊಂದು ಕಂಗೊಳಿಸುತ್ತಿದ್ದರೆ ಅದು ಒಕ್ಕಲಿಗರ ರಕ್ತದಿಂದಲೆ ಕಟ್ಟಲ್ಪಟ್ಟದೆಂದು ನನಗನಿಸುತ್ತದೆ" ಎಂದು ಗಾಂಧೀಜಿಯವರೆನ್ನುವಂತೆ ನಮ್ಮಲ್ಲಿ ಎಷ್ಟು ಜನರು ಎನ್ನುವರು? ಗಾಂಧೀಜಿಯ ತತ್ವಜ್ಞಾನವು ಅಖಂಡ ಪರಿಪೂರ್ಣವಾದುದು. ಖಾದೀ, ಗ್ರಾಮೋದ್ಯೋಗಗಳು, ಹಿಂದು ಮುಸಲ್ಮಾನರ ಐಕ್ಯ, ಅಸ್ಪೃಶ್ಯತಾನಿವಾರಣೆ, ಮೂಲ ಶಿಕ್ಷಣ, ಮದ್ಯಪಾನ ನಿರೋಧ ಮತ್ತು ಅವರ ರಚನಾತ್ಮಕ ಕಾರ್ಯಕ್ರಮದಲ್ಲಿರುವ ಉಳಿದ ಅಂಶಗಳು ಅಹಿಂಸೆಯ ವ್ಯಾವಹಾರಿಕ ಸ್ವರೂಪಗಳೇ ಇವೆ. ರಾಷ್ಟ್ರದ ಪ್ರತಿನಿಧಿಯೆಂದು ಹೇಳಿಕೊಳ್ಳುತ್ತಿರುವ ಕಾಂಗ್ರೆಸ್ಸು ಈ ಕಾರ್ಯಕ್ರಮಗಳ ಬಗ್ಗೆ ಕೇವಲ ಶಾಬ್ದಿಕ ಸಹಾನುಭೂತಿಯನ್ನು ತೋರಿಸಿದರೆ ಭಾವೀ ಇತಿಹಾಸಕಾರರು "ಶೂಲಕ್ಕೇರಿಸಲ್ಪಟ್ಟ ಕ್ರಿಶ್ಚನ್‌ನೊಬ್ಬನೆ ನಿಜವಾದ ಕ್ರಿಶ್ಚನ್‌ನಾಗಿದ್ದಂತೆ, ಗಾಂಧೀವಾದಿಯೂ ಒಬ್ಬನೇ ಇದ್ದನು; ಅವನೆಂದರೆ ಕೊಲೆಗಡಕನ ಗುಂಡಿಗೆ ಆಹುತಿಯಾದವನು" ಎಂದು ಹೇಳಬಹುದು. ಗಾಂಧೀಜಿಯ ತತ್ವಜ್ಞಾನದ ಅನುಯಾಯಿಗಳೆಂದು ಹೇಳಿಕೊಳ್ಳುವ ನಮ್ಮ ಮೇಲೆ ಈ ಸಂದರ್ಭದಲ್ಲಿ ಮಹತ್ವದ ಹೊಣೆಯಿದೆ. ಈ ದುರಂತ ನಾಟಕದ ಕೇವಲ ಪ್ರೇಕ್ಷಕರಾಗಿ ನಾವು ಕೂಡ್ರಲಾರೆವು, ಕಾಂಗ್ರೆಸ್ಸಿನಲ್ಲಿ ಜೀವಕಳೆಯನ್ನು ತುಂಬಲು ನಾವು ಪ್ರಯತ್ನಿಸಲಿಕ್ಕೆ ಬೇಕು. ನಮ್ಮ ಕಡೆಯಿಂದ ಅದು ಸಾಧ್ಯವಾಗದಿದ್ದರೆ ಹೊರಟಿದ್ದು ಹೋಗುವ ಧೈರ್ಯವು ನಮ್ಮಲ್ಲಿ ಇರಲಿಕ್ಕೆ ಬೇಕು; ಹದ್ದಿಲ್ಲದೆ ರಚನಾತ್ಮಕ ಕಾರ್ಯವನ್ನು ಮಾಡುತ್ತ ನಿಜವಾದ ಶಕ್ತಿಯನ್ನು ಸಂಪಾದಿಸಿಕೊಂಡ ನಂತರವೇ ಮತ್ತೆ ರಂಗಭೂಮಿಯ ಮೇಲೆ ಬರತಕ್ಕದ್ದು. ಅದರಲ್ಲಿಯೆ ನಿಜವಾದ ಮೋಕ್ಷವಿದೆ ನಮಗೆ. ಗಾಂಧೀ ತತ್ವಜ್ಞಾನದ ಪ್ರಸ್ಥಾಪನೆಯನ್ನು ನಾವು ಈ ಮಾರ್ಗದಿಂದಲೆ ಮಾಡಬಲ್ಲೆವು. ಗಾಂಧೀ ವಾದವು ಚಿರಾಯುವಾಗಲಿ! ಬಾಪೂ ಚಿರಾಯುವಾಗಲಿ.

ನೈಜ ಜೀವನವನ್ನು ಕುರಿತು ಗಾಂಧೀಜಿ

[ಈ ಕೆಳಗಿನದು ಗಾಂಧೀಜಿಯವರು ಜೋಹಾನ್ಸಬರ್ಗ (ದಕ್ಷಿಣ ಆಫ್ರಿಕೆ) ಥಿಯಾಸಾಫಿಕಲ್ ಮಂದಿರದಲ್ಲಿ ಆಗಸ್ಟ ೨೨(೧೯೦೫?) ನೆ ದಿನ ಒಂದು ಸಭೆಯಲ್ಲಿ ಮಾಡಿದ ಭಾಷಣದ ಸಾರ. ಇದನ್ನು ಡಿಸೆಂಬರ ೧೯೪೮ ರ "ಥಿಯಾಸಫಿಸ್ಟ" ಪತ್ರಿಕೆಯಿಂದ ಎತ್ತಿಕೊಳ್ಳಲಾಗಿದೆ.

— ಸಿ. ಸ. ವಿ]

ಥಿಯಾಸಫಿಯೆಂದರೆ ಹಿಂದೂಧರ್ಮದ ತತ್ವಜ್ಞಾನರೂಪವೆಂದೂ ಹಿಂದೂಧರ್ಮವೆಂದರೆ ಥಿಯಾಸಫಿಯ ಆಚಾರ ಸ್ವರೂಪವೆಂದೂ ತಾವು ತೀರ್ಮಾನಕ್ಕೆ ಬಂದಿರುವದಾಗಿ ಅವರು (ಗಾಂಧೀಜಿ) ಹೇಳಿದರು.

ಥಿಯಾಸಫಿಯ ಸಾಹಿತ್ಯದಲ್ಲಿ ಅನೇಕ ಪ್ರಶಂಸನೀಯ ಗ್ರಂಥಗಳಿವೆ. ಅವನ್ನು ಓದಿದರೆ ತುಂಬ ಲಾಭವಾಗುವದು ಖಂಡಿತ. ಆದರೂ ಅದರಲ್ಲಿ ಬೌದ್ಧಿಕ ಅಭ್ಯಾಸಕ್ಕೂ ವಾದಕ್ಕೂ ಯೋಗಶಕ್ತಿಯ ಸಾಧನೆಗೂ ಕೊಟ್ಟ ಮಹತ್ವ ಅತಿರೇಕವಾಯಿತೆಂದು ಗಾಂಧೀಜಿ ಅಭಿಪ್ರಾಯಪಟ್ಟರು. ಈ ಕಾರಣದಿಂದ ಥಿಯಾಸಫಿಯ ಮುಖ್ಯ ತತ್ವವಾದ ಮಾನವ ಕುಲದ ಭ್ರಾತೃತ್ವವನ್ನು ಮನುಷ್ಯನ ನೈತಿಕ ಅಭಿವೃದ್ಧಿಯನ್ನೂ ಕಡೆಗಣಿಸಲಾಗಿದೆ. ಇಂಥ ಸಾಧನೆಗೆ ಮಾನವ ಜೀವಿತದಲ್ಲಿ ಸ್ಥಾನವೇ ಇಲ್ಲೆಂದು ಅರ್ಥವಲ್ಲ. ಆದರೆ ಅದು ಮಾನವ ಜೀವನಕ್ಕೆ ಅವಶ್ಯವಾದ ಸರ್ವಥಾ ಸ್ಪಷ್ಟವಾದ ಕರ್ಮಗಳನ್ನು ಅನುಸರಿಸಿಯೆ ಬರಬೇಕಲ್ಲದೆ ಅವುಗಳಿಗಿಂತ ಅಗ್ರಸ್ಥಾನ ಅದಕ್ಕೆ ದೊರೆಯತಕ್ಕದ್ದಲ್ಲವೆಂದು ತಮಗೆ ತೋರುತ್ತದೆಂದು ಅವರು ನುಡಿದರು. ಮಹತ್ತರವಾದ ಶಾಸ್ತ್ರಗ್ರಂಥಗಳನ್ನು ಅರ್ಥಮಾಡಿಕೊಳ್ಳಬೇಕಾದರೆ ಮೊದಲು ಮನುಷ್ಯನು ತನ್ನ ಮನೋಬುದ್ಧಿಗಳಲ್ಲಿ ಹಾಸುಹೊಕ್ಕಾಗಿ ನೇಯ್ದುಕೊಳ್ಳಬೇಕಾದ ಕೆಲ ಮೂಲತತ್ವಗಳುಂಟು.

ಯಾವುದೊಂದು ವಿಜ್ಞಾನದಲ್ಲಿ ಅಧ್ಯಯನಕ್ಕೆ ಪ್ರವೇಶ ದೊರೆಯಬೇಕಾದರೆ ವಿಜಿಜ್ಞಾಸುವು ಮೊಟ್ಟಮೊದಲು ಒಂದು ಪ್ರವೇಶಿಕಾ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಬೇಕೆಂದು ವಿಧಿಸಲ್ಪಟ್ಟಿರುತ್ತದೆ. ಆದರೆ ಯಾವುದಾದರೊಂದು ಧಾರ್ಮಿಕ ಗ್ರಂಥವನ್ನು ಕೈಯಲ್ಲಿ ತೆಗೆದುಕೊಂಡಾಗ ಆದಕ್ಕೆ ಯಾವುದಾದರೊಂದು ದಿಶೆಯಿಂದ ಪೂರ್ವ ಸನ್ನಾಹ ಅವಶ್ಯವೇ ಇಲ್ಲವೆಂದೂ ಈ ಧರ್ಮಗ್ರಂಥಗಳನ್ನು ತಾವೇ ಗುರೂಪದೇಶವಿಲ್ಲದೆ ಓದಿಕೊಂಡು ಅವುಗಳಿಗೆ ತಾವೇ ಭಾಷ್ಯ ಮಾಡಿಕೊಳ್ಳಬಲ್ಲೆವೆಂದೂ ಜನರು ಬಗೆದಂತೆ ತೋರುತ್ತದೆ. ಈ ಮನೋವೃತ್ತಿಯೇ ನಿಜವಾದ ಆಧ್ಯಾತ್ಮಿಕ ಸ್ವಾತಂತ್ರ್ಯವೆಂದು ತಿಳಿದುಕೊಳ್ಳುವವರೂ ಇದ್ದಾರೆ. ಇದು ತನಗೆ ಏನೂ ಪರಿಜ್ಞಾನವಿಲ್ಲದ ವಿಷಯದಲ್ಲಿ ವ್ಯಭಿಚಾರ ಮಾಡಿದಂತೆಯೇ ಸರಿಯೆಂದು ಗಾಂಧೀಜಿ ಅಭಿಪ್ರಾಯಪಟ್ಟರು. ಹಿಂದೂ ಧರ್ಮಗ್ರಂಥಗಳೆಲ್ಲವೂ ಸಾರಿ ಹೇಳುವಂತೆ, ಮೊಟ್ಟಮೊದಲು ಬುದ್ಧಿಯನ್ನು ಗುರಿಯಿಂದ ಅತ್ತಿತ್ತ ವಿಚಲಗೊಳಿಸುವ ಇಂದ್ರಿಯ ವಿಕಾರಗಳನ್ನು ಸಂಯಮಿಸಲು ಕಲಿಯಬೇಕು ಮತ್ತು ಸರ್ವಥಾ ಶುದ್ಧ, ಸತ್ಯಸಂಧ ಜೀವನವನ್ನು ಸಾಧಿಸಿಕೊಳ್ಳಬೇಕು.

ಮನಸನ್ನು ಸೆರೆಕುಡಿದ ಕಪಿಗೆ ಹೋಲಿಸಲಾಗಿದೆ, ಅದು ಯುಕ್ತವೇ ಆದ ಉಪಮಾನ. ನಮ್ಮ ಮನೋವ್ಯಾಪಾರವನ್ನು ನಾವೇ ಬಿಡಿಬಿಡಿಸಿ ನೋಡಿದರೆ ಅನ್ಯರನ್ನು ಕುರಿತು ದುಃಶಂಕೆಗಳನ್ನು ಇಟ್ಟುಕೊಳ್ಳಲು ಕಾರಣವೇ ಇಲ್ಲೆಂದು ಮನವರಿಕೆಯಾಗಿ, ಸ್ವಂತದ ಬಗ್ಗೆಯೆ ಶಂಕೆಗಳು ಪ್ರಾರಂಭವಾಗಬಹುದು. ಏಕೆಂದರೆ ಆಗ ನಾವು ದುರಭಿಮಾನದಿಂದ ಅನ್ಯರ ಬಗ್ಗೆ ಉಪಯೋಗಿಸುವ ಕಳ್ಳರು ಕೊಲೆಗಡಕರೆಂಬ ಶಬ್ದಗಳು ನಮ್ಮ ಅಂತರಂಗದಲ್ಲಿ ಆಶ್ರಯಪಡೆದ ಪ್ರವೃತ್ತಿಗಳಿಗೇ ಚೆನ್ನಾಗಿ ಒಪ್ಪುವವೆಂದು ಕಂಡುಬಂದೀತು. ಥಿಯಾಸಫಿಸ್ಟರು ಅಭ್ಯಾಸ - ಅಧ್ಯಯನಗಳಿಗೊಂದು ಮಿತಿಯಿದೆಯೆಂದು ಮನಗಾಣಬೇಕೆಂದು ಗಾಂಧಿಯವರು ಸೂಚಿಸಿದರು. ಅದರಿಂದ ಅವರ ಚಟುವಟಿಕೆಗಳು ಕುಂಠಿತವಾಗುವ ಬದಲು ಅವರಿಗೆ ಇನ್ನಷ್ಟು ಎತ್ತರಕ್ಕೇರಲು ಅನುಕೂಲವಾಗಬಹುದು.

ಜೀವನದ ವ್ಯಾಪ್ತಿಯನ್ನು ವಿಸ್ತರಿಸುವದು ನಮ್ಮ ಕರ್ತವ್ಯವಲ್ಲ; ನಮ್ಮ ಅಭ್ಯಾಸದಲ್ಲೇ ಇರಲಿ, ಚಟುವಟಿಕೆಗಳಲ್ಲೇ ಇರಲಿ, ನಾವು ಅದರ ಸಾಧನೆಯನ್ನು ತೀವ್ರವಾಗಿ ಮಾಡಬೇಕು. ಏಕೆಂದರೆ, ಒಬ್ಬನು ಜೀವನದಲ್ಲಿ ಒಂದೇ ವಿಚಾರದಲ್ಲಿ ವಿಶೇಷ ಪರಿಶ್ರಮಪಟ್ಟರೆ, ಹಲ ಬಗೆಯ ಹವ್ಯಾಸಗಳಲ್ಲಿ ಮನಸನ್ನು ಹರಿಬಿಡುವ ಮೂಲಕ ದೊರೆಯಬಹುದಾದುದಕ್ಕಿಂತ ಹೆಚ್ಚು ಪ್ರಯೋಜನವಾದೀತು.

ಎಷ್ಟೇ ಕುಂಠಿತವಿರಲಿ, ಎಷ್ಟೇ ಸಂಕುಚಿತವಿರಲಿ ಒಳ್ಳೆಯ ಬಾಳುವೆಯನ್ನು ಬಾಳುವದೇ ಅಪರೋಕ್ಷಾನುಭೂತಿಗಿಂತ ಎಷ್ಟೋ ಶ್ರೇಷ್ಠವೆಂದು ಹಿಂದೂ ದ್ರಷ್ಟಾರರು ಹೇಳಿದ್ದಾರೆ. ಒಂದೊಂದಾಗಿ ಹಂತಹಂತವಾಗಿ ಈ ವಿಷಯಗಳನ್ನು ಜೀವನದಲ್ಲಿ ಸಂಚಿತಗೊಳಿಸಿದಲ್ಲದೆ ಆಧ್ಯಾತ್ಮಿಕ ಜ್ಞಾನದ ಪರಿಪೂರ್ಣ ಗ್ರಹಣ ಅಸಾಧ್ಯವೆಂದು ಅವರು ಉಪದೇಶಿಸಿದ್ದಾರೆ. "ಈ ದುಡಿರಿಂದ ನಿಮಗೆ ನಿಜವಾದ ಜೀವನವನ್ನು ಜೀವಿಸುವ ಲವಲವಿಕೆಯಿದ್ದರೆ, ಜೀವನವನ್ನು ಈ

—೨೦ನೆಯ ಪುಟಕ್ಕೆ

ನವ ಯುಗ

ಲೇ— ಶ್ರೀ ಜಗಜೀವನರಾಮ

ಬಾಪೂಜಿಯ ಸಿದ್ಧಿಗಳಲ್ಲಿ ಕಣ್ಣು ಕುಕ್ಕಿಸುವಂಥವು ರಾಜಕೀಯ ರಂಗದಲ್ಲಿ ಸಂಪಾದಿಸಲ್ಪಟ್ಟಿದ್ದರೂ ಭಾರತದ ವಿಮೋಚನೆಯ ಕೀರ್ತಿಯೂ ಅವರಿಗೇ ಸಲ್ಲಬೇಕಾಗಿದ್ದರೂ ಅವರ ಪಾಲಿಗೆ ರಾಜಕಾರಣವು ಜೀವನದ ಒಂದು ಪ್ರತ್ಯೇಕ ಅಂಗವೆಂದೂ ಆಗಿದ್ದಿಲ್ಲ. ನಿಜವಾಗಿ ಅವರ ಜೀವನವನ್ನು ಬೇರೆ ಬೇರೆ ವಿಭಾಗಗಳಾಗಿ ವಿಂಗಡಿಸುವದೇ ಅಸಾಧ್ಯ. ಅವರ ದೃಷ್ಟಿಯಲ್ಲಿ ಮನುಷ್ಯನು ಒಂದು ಚೈತನ್ಯಕೇಂದ್ರಿತವಾದ ಮತ್ತು ಚಿತ್ತವೃತ್ತಿ ಇಂದ್ರಿಯವೃತ್ತಿಗಳನ್ನು ನಿರೋಧಿಸುವ ಸಾಮರ್ಥ್ಯವುಳ್ಳ ಅಖಂಡ ಅವಿಭಾಜ್ಯವಸ್ತು. "ಪರರ ಕ್ಲೇಶಗಳನ್ನು ಅರಿಯುವವನೇ ನಿಜ ವೈಷ್ಣವ" ಎಂದು ಗುಜರಾಥಿ ಕವಿ ನರಸೀಮೆಹತಾನ ಉಕ್ತಿ. ಈ ಭಜನೆ ಬಾಪುವಿಗೆ ತುಂಬ ಮೆಚ್ಚುಗೆ. ಆ ಪಂಕ್ತಿಗಳಲ್ಲಿ ವ್ಯಕ್ತವಾದ ಭಾವವು ಅವರ ಚರಿತ್ರದ ಮೇಲೆ ಆಳವಾದ ಮುದ್ರೆಯನ್ನು ಒತ್ತಿತ್ತು. ಅವರ ಪಾಲಿಗೆ ಅದರಲ್ಲಿ ಮಾನವಧರ್ಮದ ಸಾರ ಅಡಕವಾಗಿತ್ತು. ಅದು ಜೀವನದ ಎಲ್ಲ ಅಂಗಗಳಿಗೂ ಧಾರ್ಮಿಕ, ಸಾಮಾಜಿಕ, ರಾಜಕೀಯ, ಮತ್ತು ಆರ್ಥಿಕ. ಇವೆಲ್ಲವುಗಳಿಗೂ—ಅನ್ವಯಿಸುವಂಥದು. ಸಂಕಟದ ಆರ್ತನಾದ ಯಾವ ದೆಸೆಯಿಂದ ಬಂದರೂ ಬಾಪುವಿನ ಹೃದಯದ ಮೃದುತರ ಗ್ರಂಥಿಗಳನ್ನು ಅದು ಮಿಡಿಯುತ್ತಿತ್ತು. ಅದರಲ್ಲಿ ಕರ್ತವ್ಯದ ಕರೆಯನ್ನು ಅವರು ಆಲಿಸುತಿದ್ದರು ಮತ್ತು ಒಡನೆ ಅದಕ್ಕೆ ಓಗೊಡುತ್ತಿದ್ದರು.

ಬಾಪುವನ್ನು ರಾಷ್ಟ್ರಪಿತನೆಂದು ಸಮುಚಿತವಾಗಿಯೆ ಕರೆಯಲಾಗುತಿದೆ; ಆದರೆ ಅವರು ಹೊಸ ಯುಗದ ಪ್ರವರ್ತಕರೂ ಆಗಿದ್ದರು—ಜಗತ್ತಿನಲ್ಲಿ ಒಂದು ಹೊಸ ವಿಧಾನವನ್ನು ಅವರು ನಿರ್ಮಿಸಿ ಪ್ರಚುರಗೊಳಿಸಿದರು. ಯಾವಾತನು ಜೀವಮಾನವೆಲ್ಲ ಹಿಂಸೆಯ ಸ್ಥಾನದಲ್ಲಿ ಅಹಿಂಸೆಯನ್ನು, ದ್ವೇಷವಿದ್ದಲ್ಲಿ ಪ್ರೇಮವನ್ನು, ಅಸೂಯೆ ಮತ್ತು ಸ್ಪರ್ಧೆಯ ಬದಲು ಸಹಾನುಭೂತಿ ಸಂವೇದಗಳನ್ನು ಮತ್ತು ಘರ್ಷಣೆಯ ನೆಲೆಯಲ್ಲಿ ಸಹಕಾರವನ್ನು ಅಧಿಷ್ಠಾನಗೊಳಿಸಲು ಹೆಣಗಿದನೊ ಅಂಥವನು ನಿಜವಾಗಿ ಒಂದು ಹೊಸಯುಗದ ಪ್ರವರ್ತಕನೇ ಸರಿ. ಮಾನವಕುಲಕ್ಕೆ ಹೊಸ ಸಂದೇಶವನ್ನು ತಂದ ದೇವದೂತನೆ ಸರಿ. ಇತಿಹಾಸದಲ್ಲಿ ಈ ಬಗೆಯಾಗಿ ತನ್ನ ಜೀವಮಾನದಲ್ಲೆ ಇಷ್ಟೆಲ್ಲ ಜನರ ಮನಸಿನ ಮೇಲೆ ಪ್ರಭಾವವನ್ನು ಬೀರಲು ಸಮರ್ಥನಾಗಿ ಸಮಕಾಲೀನ ಜಗತ್ತಿನಲ್ಲಿ ತನ್ನ ಅಚ್ಚಳಿಯದ ಕುರುಹನ್ನು ಬಿಟ್ಟುಹೋದ ಮಹಾಪುರುಷನ ಉದಾಹರಣೆ ಬೇರೊಂದು ದೊರೆತೀತೇ?

ಅಸ್ಪೃಶ್ಯತೆಯ ವಿಚಾರವೇ ಬಾಪುವಿಗೆ ಅತ್ಯಂತ ಘೋರವೆನಿಸುತಿತ್ತು. ಅದಕ್ಕಾಗಿ ಅವರು "ಅಸ್ಪೃಶ್ಯ" ಶಬ್ದದ ಸ್ಥಾನದಲ್ಲಿ "ಹರಿಜನ" ಎಂಬ ಹೊಸ ಪರಿಭಾಷೆಯನ್ನು ನಿರ್ಮಿಸಿದರು. ಈ ಶಬ್ದ ಗಹನಾರ್ಥಗರ್ಭಿತವಾಗಿದೆ. ನಾಮಧೇಯವನ್ನು ಬದಲಿಸುವದರಲ್ಲಿ ದಲಿತ, ತಿರಸ್ಕೃತ ಜನರಿಗೆ ಗೌರವದಾನ ಮಾಡುವದು ಬಾಪುವಿನ ಉದ್ದೇಶವಾಗಿತ್ತು. ಆ ಮೂಲಕ ಅವರಲ್ಲಿ ಸ್ವಾಭಿಮಾನವನ್ನೂ, ನೈತಿಕ ಬಲವನ್ನೂ ಎಚ್ಚರಿಸಲು ಅವರು ಹವಣಿಸಿದರು. ಅನ್ಯಾಯವನ್ನೂ ದಬ್ಬಾಳಿಕೆಯನ್ನೂ ಕಂಡಕಂಡಲ್ಲಿ ಪ್ರತಿರೋಧಿಸುವ ಧರ್ಮಯುದ್ಧದಲ್ಲೆ ಬಾಪುವಿನ ಜನ್ಮ ಸವೆಯಿತು. ಈ ದುಷ್ಟ ರೂಢಿಗಿರುವ ಶಾಸ್ತ್ರಾಧಾರವೇನೇ ಇರಲಿ, ಅದು ಮನುಷ್ಯನಿಗೆ ಅವನ ದೇವಾಂಶದ ದ್ಯೋತಕವಾಗಿ ಸಲ್ಲಬೇಕಾದ ಮರ್ಯಾದೆಯನ್ನು ಅಪಹರಿಸುವದರಿಂದ ನೈತಿಕ ದೃಷ್ಟಿಯಲ್ಲಿ ಅದು ಸರ್ವಥಾ ಅಸಮರ್ಥನೀಯವೆಂದು ಅವರು ಅಂದುಕೊಂಡರು. ಅದುದರಿಂದ ಹಿಂದೂ ಜನಾಂಗಕ್ಕೆ ಅಂಟಿದ ಈ ಕಲಂಕವನ್ನು ತೊಡೆದು ಹಾಕಲು ಅವರು ಅಚಲ ನಿರ್ಧಾರ ಮಾಡಿದರು. ತಮ್ಮ ಉದಾತ್ತಗಂಭೀರ ಧ್ವನಿಯನ್ನು, ಅಸ್ಪೃಶ್ಯತೆಯ ವಿರುದ್ಧ ಎತ್ತಿ ಅವರು ಹಿಂದೂ ಸುಶಿಕ್ಷಿತರ ಮನಸ್ಸಾಕ್ಷಿಯನ್ನು ಕಲಕಿ ಎಚ್ಚರಿಸಿದರು. ಅವರ ಮಾರ್ಗ ಹೂವಿನ ಹಾಸಿಗೆಯಾಗಿರಲಿಲ್ಲ. ಅವರಿಗೆ ಅಡ್ಡಿಗಳು ಎದುರಾದವು. ಅವರ ಕೃತಿಗೆ ಅಪಾರ್ಥವನ್ನು ಆರೋಪಿಸಿ ನಿಂದಿಸಲಾಯಿತು. ಆದರೂ ಬಾಪು ವಿಚಲಿತರಾಗಲಿಲ್ಲ. ಅವರ ಆಂದೋಲನವು ಸಂಪ್ರದಾಯ ಶರಣರ ದುರ್ಗವನ್ನೆ ಮುತ್ತಿ ಅದರ ತಳಪಾಯವನ್ನೆ ಅಲುಗಿಸಿ ಬಿಟ್ಟಿತು. ಅವರ ಸ್ಫೂರ್ತಿಯ ಪ್ರತ್ಯಕ್ಷ ಪ್ರೇರಣೆಯಿಂದಲೇ ನಮ್ಮ ಹೊಸ ರಾಜ್ಯಘಟನೆಯಲ್ಲಿ ಅಸ್ಪೃಶ್ಯತೆಯನ್ನು ಸಂಪೂರ್ಣವಾಗಿ ರದ್ದುಗೊಳಿಸಿ ಅದರ ಎಲ್ಲ ಕುರುಹುಗಳನ್ನೆ ತೊಡೆದು ಹಾಕಲಾಗಿದೆ.

ಬಾಪುವಿನ ಜೀವನವೇ ಸತ್ಯದ ಪ್ರಯೋಗಸ್ವರೂಪವಾಗಿತ್ತು. ಅನೇಕ ವಿಷಯಗಳಲ್ಲಿ ಅವರು ತಮ್ಮ ಸ್ವಂತ ಬಾಳುವೆಯನ್ನೂ ದೇಹವನ್ನೂ ಅದರ ಪ್ರಯೋಗ ಶಾಲೆಯಾಗಿ ಮಾಡಿಕೊಂಡಿದ್ದರು. ಬಾಪುವಿನ ಸ್ವಭಾವದಲ್ಲಿ ಗಮನಾರ್ಹವಾದೊಂದು ಅಂಶವೆಂದರೆ, ಅವರು ಉಪದೇಶಕ್ಕೆ ಅನುರೂಪವಾದ ಆಚಾರವನ್ನಿಟ್ಟುಕೊಂಡಿದ್ದರು. ಅವರ ಮಾತುಗಳು ಆ ಕಾರಣದಿಂದಲೇ ವಿಶೇಷ ಹೃದಯಸ್ಪರ್ಶಿಯಾಗಿದ್ದವು; ಅವು ಅದರಿಂದಲೇ ವಿಶೇಷ ಅರ್ಥಭರಿತವೆನಿಸಿದವು. ತಾವು ಮಾಡಿದುದೆಲ್ಲದರ ಪೂರ್ಣ ಹೊಣೆಯನ್ನು ಹೊರಲು ಅವರು ಸದಾ ಸಿದ್ಧರು; ಇಷ್ಟೇ ಅಲ್ಲ, ಅವರು ಅದಕ್ಕೂ ಮುಂದೆ ಹೋಗಿ ಇತರರ ಲೋಪದೋಷಗಳ ಹೊಣೆಯನ್ನೂ ತಮ್ಮ ತಲೆಯ ಮೇಲೆ ಹೊರಿಸಿಕೊಂಡು, ತಕ್ಕ ಪ್ರಾಯಶ್ಚಿತ್ತ ಮಾಡಿಕೊಳ್ಳುತ್ತಿದ್ದರು. ಈ ಅತಿ ಮಾನುಷ ಘನತೆಯ ಮುಂದೆ ಎಂಥವನ ತಲೆಯೂ ಭಕ್ತಿಯಿಂದ ತಗ್ಗಲೇ ಬೇಕು. ಅವರ ಪಾಲಿಗೆ ಇಡಿ ಜಗತ್ತು ಒಂದು ಅಖಂಡವಾದ ಏಕ, ಅದು ದೇಶ, ಜಾತಿ, ಧರ್ಮ, ಪಂಥಗಳನ್ನು ಮೀರಿ ನಿಂತದ್ದು. ಅವರು ವಿಶ್ವಕುಟುಂಬಿಯಾಗಿದ್ದರು, ಸೀಮಾತೀತರಾಗಿದ್ದರು. ಮಾನವನನ್ನು ಮಾನವನಿಂದ ದೂರಮಾಡಿ, ಅಲ್ಪತನ, ಹೊಟ್ಟೆಕಿಚ್ಚು, ಮತ್ತು ಅನಂತ ಘರ್ಷಣೆಗಳಲ್ಲಿ ಪರಿಣಮಿಸಿ, ಜೀವನದ ಸಮಸ್ತ ಸೌಂದರ್ಯವನ್ನೂ ಕೆಡಿಸಿಬಿಡುವ ಎಲ್ಲ ಬಗೆಯ ಸಂಕುಚಿತ ಭಾವಗಳಿಂದ ಅವರು ನಿರ್ಲಿಪ್ತರಾಗಿದ್ದರು.

ಬಾಪುವಿನ ತತ್ವಜ್ಞಾನದಲ್ಲಿ ಭಾರತದ ಪ್ರಾಚೀನ ಜ್ಞಾನವೂ ಪರಮ ಆಧ್ಯಾತ್ಮಿಕ ಧ್ಯೇಯಗಳೂ ಹೊಂದಿಕೆಯಾಗಿ ಆಳವಪ್ಪು, ಹೊಸ ಅರ್ಥಗಳಿಂದ ಸಾಫಲ್ಯ ಹೊಂದಿದವು. ಋಷಿಸಹಜವಾದ ಜ್ಞಾನದೃಷ್ಟಿಯಿಂದಲೂ ಭಾಗ್ಯವಿಧಾತನಿಗೆ ಮಾತ್ರ ನಿಲುಕುವ ಧೈರ್ಯ ವಿಶ್ವಾಸಗಳಿಂದಲೂ ಅವನು ಮಾನವ್ಯದ ಇಂದಿನ ಜಾಡ್ಯಗಳ—ಸಾಮಾಜಿಕ, ಆರ್ಥಿಕ, ಆಧ್ಯಾತ್ಮಿಕ ಜಾಡ್ಯಗಳ—ಮೂಲವನ್ನು ಶೋಧಿಸಿ ಅವುಗಳಿಗೆ ಅವಿಫಲವಾದ ಪ್ರತೀಕಾರೋಪಾಯಗಳನ್ನು ಸೂಚಿಸಿದರು. ಮನುಷ್ಯನು ಧ್ಯೇಯಚ್ಯುತನಾಗಿದ್ದಾನೆ, ಅವನು ದುರ್ಮಾರ್ಗಗಾಮಿಯಾಗಿದ್ದಾನೆ. ಮನುಷ್ಯನು ತನ್ನನ್ನೆ ತಾನು ಮರೆತಿದ್ದಾನೆ. ಸುತ್ತುಮುತ್ತಲೂ ಕಗ್ಗತ್ತಲು ಮುಸುಕಿರಲು, ಜ್ಞಾನಜ್ಯೋತಿಯನ್ನು ಎತ್ತಿಹಿಡಿದು ಜಗತ್ತಿಗೆ ಸತ್ಯ ಅಹಿಂಸೆಗಳ ಪಾಠವನ್ನು ಬೋಧಿಸಿ, ಶಾಂತಿ ಸೌಖ್ಯಗಳ ದಾರಿದೋರಿದವರು ಬಾಪುವಲ್ಲವೆ? ಅವರದೊಂದೇ ಮಾರ್ಗ, ಅನ್ಯಮಾರ್ಗವಿಲ್ಲ.

(ಹರಿಜನ)


(೧೯ನೆಯ ಪುಟದಿಂದ)

ಮಂದಿರದಲ್ಲಾಗಲಿ ಥಿಯಾಸಫಿಕಲ್ ಪುಸ್ತಕಾಲಯಗಳಲ್ಲಾಗಲಿ ಬಾಳುವದು ಸಲ್ಲದು, ಬದಲಿಗೆ ಸುತ್ತಮುತ್ತು ಇರುವ ಜಗತ್ತಿನ ಜೀವನದಲ್ಲಿ ಬೆರೆತು ನೀವು ಗ್ರಹಿಸಿರಬಹುದಾದ ಅಲ್ಪಸ್ವಲ್ಪ ಜ್ಞಾನವನ್ನು ಆಚರಣೆಯಲ್ಲಿ ಅಳವಡಿಸುವ ಪ್ರಯತ್ನವನ್ನು ಮಾಡಿದರೆ ಅದು ನೈಜ ಜೀವನ"ವೆಂದು ಗಾಂಧೀಜಿ ಕೊನೆಗೊಳಿಸಿದರು.

ಏಶಿಯದಲ್ಲಿ ಪರರಾಷ್ಟ್ರಗಳ ದಬ್ಬಾಳಿಕೆಗೆ ಅಂತ್ಯವಿಧಿ

ಪಂಡಿತರ ವೀರೋಚಿತ ಭಾಷಣ — ಇಂಡೋನೇಶಿಯದ ಸಮಸ್ಯೆಯ ಮಹತ್ವ — ಪಶ್ಚಿಮಾತ್ಯ ರಾಷ್ಟ್ರಗಳಿಂದ ಡಚ್ಚರ ಕೃತ್ಯದ ಖಂಡನೆ — ಭದ್ರತಾಮಂಡಲಕ್ಕೆ ಶಾಂತಿ ಯೋಜನಾ ಪ್ರೇಷಣ — ನೆಹರುಗಳ ಧುರೀಣತ್ವ ಮತ್ತು ದೃಢತನಗಳ ಪ್ರಶಂಸೆ

'ಇಂಡೋನೇಶಿಯದ ಪ್ರಶ್ನೆಯೆಂದರೆ ಏಶಿಯದ ಸರ್ವ ರಾಷ್ಟ್ರಗಳ ಪ್ರಶ್ನೆ. ಸಾಮ್ರಾಜ್ಯವಾದಕ್ಕೆ ಇಲ್ಲಿ ಸ್ಥಳಕೊಟ್ಟರೆ ಸರ್ವನಾಶವಾದೀತು. ಭದ್ರತಾಮಂಡಲದ ಆದೇಶವನ್ನು ಧಿಕ್ಕರಿಸಿದ್ದರಿಂದ ಅದಕ್ಕೆ ಈ ದಿಲ್ಲಿ ಪರಿಷತ್ತಿನ ಮೂಲಕ ಬೆಂಬಲ ಕೊಡಬೇಕಾಗಿದೆ. ಪರಿಷತ್ತಿನ ಒಪ್ಪಂದದ ಯೋಜನೆಯನ್ನು ಭದ್ರತಾಮಂಡಲ ಮುಂದಿಟ್ಟಾಗ ಡಚ್ಚರಾಗಲಿ ಇಂಡೋನೇಶಿಯದ ಪ್ರಜಾರಾಜ್ಯದವರಾಗಲಿ ಒಪ್ಪದಿದ್ದಲ್ಲಿ ಅದು ತಕ್ಕ ಕ್ರಮವನ್ನು ಕೈಗೊಳ್ಳಬೇಕು. ನಾವು ಯಾವ ರಾಷ್ಟ್ರದ ಬಗೆಗೂ ದ್ವೇಷಭಾವನೆಯುಳ್ಳವರಲ್ಲ. ನಮ್ಮ ಒಕ್ಕಟ್ಟಿನ ಒಮ್ಮತಗಳಿಂದ ಸಂ. ರಾ. ಸಂಘ, ಬಲಗೊಳ್ಳುತ್ತದೆ. ಜಾಗತಿಕ ಶಾಂತಿಗೆ ಏಶಿಯದಲ್ಲಿ ನಾವು ತಳಪಾಯ ಹಾಕುವೆವು,' ಎಂದು ಮುಂತಾಗಿ ದಿಲ್ಲಿಯಲ್ಲಿ ಮೊನ್ನೆ ಸೇರಿದ ಏಶಿಯದ ಹದಿನೆಂಟು ರಾಷ್ಟ್ರಗಳು ಒಕ್ಕೊರಲಿನಿಂದ ಭಾರತಪ್ರಧಾನ ಪಂಡಿತ ನೆಹರುಗಳ ಅಧ್ಯಕ್ಷತೆಯಲ್ಲಿ ಸಾರಿ, ಇಂಡೋನೇಶಿಯದ ಸ್ವಾತಂತ್ರ್ಯ ಸ್ವರಾಜ್ಯಗಳನ್ನು ಮನ್ನಿಸಿ ಡಚ್ಚರ ಕೃತಿಯನ್ನು ತೀವ್ರವಾಗಿ ಖಂಡಿಸಿ ಭದ್ರತಾಮಂಡಲಕ್ಕೆ ಅಧ್ಯಕ್ಷರ ಮೂಲಕ ತಮ್ಮ ನಿರ್ಣಯಗಳನ್ನು ತಿಳಿಸಿ, ಅಧ್ಯಕ್ಷತೆ ವಹಿಸಿದ ನೆಹರುಗಳ ಪ್ರತಿಭೆ, ಸಾಹಸ, ದೂರದರ್ಶಿತ್ವಗಳನ್ನು ಮನಸಾರೆ ಕೊಂಡಾಡಿದವು.




[illegible] ಪ್ರಸಿದ್ಧವಾದ [illegible] ಪರಿಷತ್ತಿನ ಅಧ್ಯಕ್ಷ [illegible] ನಚ್ಚಿನ ಪಂಡಿತ ಜವಾಹರಲಾಲರು ಏಶಿಯದ ಸಹೋದರ ರಾಷ್ಟ್ರಗಳಲ್ಲಿ ಒಂದಾದ ಇಂಡೋನೇಶಿಯದ ಸ್ವಾತಂತ್ರ್ಯವನ್ನು ಅಪಹರಿಸಲು ಏಶಿಯೇತರ ರಾಷ್ಟ್ರೀಯರೆನಿಸಿದ ಡಚ್ಚರು ತಮ್ಮ ಸಾಮ್ರಾಜ್ಯವಾದದ ನೆತ್ತರಾಳುಗಳನ್ನು ಹರಿಬಿಟ್ಟದ್ದನ್ನು ಪ್ರತಿಭಟಿಸಿ, ಅವರ ದೌರ್ಜನ್ಯವನ್ನು ತಡೆಯಲು ಹುರುಪಿನಿಂದ ಹರಿಸಿದ್ದ ಭಾರತ ಪ್ರಧಾನ ನೆಹರುಗಳು ತಾವು ಕರೆದ ಪರಿಷತ್ತನ್ನು ಉದ್ಘಾಟಿಸುತ್ತ ವೀರೋಚಿತ ಭಾಷಣಮಾಡಿದರು. ಅವರ ಸ್ಥೂಲರೂಪ ಈ ಕೆಳಗಿನಂತಿದೆ:

“ಮಾನ್ಯರೇ ಮತ್ತು ಸಭ್ಯರೇ, ಭಾರತ ಸರಕಾರದ ಪರವಾಗಿಯೂ ನನ್ನ ಪರವಾಗಿಯೂ ನಾನಿಂದು ನಿಮ್ಮೆಲ್ಲರನ್ನು ಆದರಪೂರ್ವಕವಾಗಿ ಸ್ವಾಗತಿಸುತ್ತೇನೆ. ಇಷ್ಟು ಅಲ್ಪಾವಧಿಯಲ್ಲಿ ಅತ್ಯವಸರದ್ದೆನಿಸಿರುವ ಇಂಡೋನೇಶಿಯದ ಸಮಸ್ಯೆಯನ್ನು ಬಗೆಹರಿಸುವ ನಿಮಿತ್ತ ನೀವು ದಯಮಾಡಿಸಿದ್ದಕ್ಕೆ ನಾನು ತುಂಬಾ ಕೃತಜ್ಞನಾಗಿದ್ದೇನೆ.

ಏಶಿಯಕ್ಕೆ ರಣಾಹ್ವಾನ

“ಇಂದು ನಾವಿಲ್ಲಿ ಸೇರಲು ನಮ್ಮ ಸಹೋದರ ರಾಷ್ಟ್ರವೊಂದರ ಸ್ವಾತಂತ್ರ್ಯವು ಅಪಾಯಕ್ಕೆ ಗುರಿಯಾಗಿರುವುದೇ ಕಾರಣ. ಪುನರ್ಘಟಿತವಾದ ಹಳೆಗಾಲದ ಉಪನಿವೇಶವಾದವೀಗ ಹೆಡೆಯೆತ್ತಿ ಜಗತ್ತಿನಲ್ಲಿಂದು ನವನಿರ್ಮಿತಿಯನ್ನು ಮಾಡಲು ಹೆಣಗುತ್ತಿರುವ ಶಕ್ತಿಗಳನ್ನು ಸತ್ವಸ್ಪರ್ಧೆಗಾಗಿ ಕಣಕಾಳಗಕ್ಕೆ ಕರೆದಿದೆ. ಈ ರಣಾಹ್ವಾನಕ್ಕೆ ಒಳ ಅರ್ಥವಿದೆ. ಅದು ಕೇವಲ ಇಂಡೋನೇಶಿಯಕ್ಕೆ

ಮಾತ್ರವಿರದೆ, ಇಲ್ಲಿಯವರೆಗೆ ಉಪನಿವೇಶವಾದಿಗಳ ಕೈಯಲ್ಲಿ ನರಳಿರಳಿ, ಈಗ ಜೋರಾಗಿ ಎಚ್ಚೆತ್ತಿರುವ ಏಶಿಯಕ್ಕೆ ಗುರಿಯಿಟ್ಟದ್ದಾಗಿದೆ. ಅಲ್ಲದೆ, ಅದು ವಿಭಕ್ತವೂ ಭ್ರಮಿಷ್ಟವೂ ಆದ ಜಗತ್ತಿನ ಸರ್ವ ಪ್ರಗತಿಪರ ಶಕ್ತಿಗಳಿಗೂ ಮಾನವನ ಮಾನವತ್ವಕ್ಕೂ ಕೊಟ್ಟ ಅಹ್ವಾನವಾಗಿದೆ. ಏಕೀಕೃತ ಪ್ರಪಂಚದ ಪ್ರತೀಕವೆನಿಸಿದ ಸಂಯುಕ್ತ ರಾಷ್ಟ್ರಸಂಘದ ಉಪದೇಶವನ್ನು ಉಪನಿವೇಶವಾದಿಗಳು ಉಃ ಪೆಂದು ಊದಿ ಬದಿಗೆಸೆದಿದ್ದಾರೆ. ಈ ಆಹ್ವಾನವನ್ನು ನಾವಿಂದು ಪರಿಣಾಮಕರವಾಗಿ ಅಭಿಯೋಗಿಸದಿದ್ದರೆ, ನಾಳೆ ಕೇವಲ ಇಂಡೊನೇಶಿಯವಷ್ಟೇ ಅಲ್ಲ, ಇಡೀ ಏಶಿಯ ಮತ್ತು ಸಂಪೂರ್ಣ ಜಗತ್ತೂ ಇದರ ಫಲವನ್ನು ಉಣ್ಣಬೇಕಾದೀತು. ಅದು ವಿಲಯ ವಿಚ್ಛೇದ ಶಕ್ತಿಗಳ ವಿಜಯವೆನಿಸಿ ಅಜಸ್ರ ಘರ್ಷಣೆಗೆ ಅವಕಾಶ ತಂದೊಡ್ಡಿ ಜಾಗತಿಕ ಅಸಾಂಗತ್ಯ ಅನ್ಯವಸ್ಥೆಗಳಿಗೆ ಕಾರಣವಾದೀತು.



ಏಶಿಯನ್ ಸಮ್ಮೇಲನವನ್ನು ಪಂ. ನೆಹರೂ ಅವರು ಪ್ರಾರಂಭಿಸುತ್ತಿರುವದು

ಐತಿಹಾಸಿಕ ಅರ್ಥಪೂರ್ಣತೆ

"ನಾವು ಸದ್ಯಃ ಪ್ರಧಾನವೆನಿಸುವ ಒಂದು ಪ್ರಾಣಸ್ಥಾನ ಪತಿತ ಪ್ರಶ್ನೆಯನ್ನು ಚರ್ಚಿಸಲು ಕೂಡಿರುವೆವಾದರೂ ಅನನ್ವಯ, ಅಸದೃಶ, ಅಪೂರ್ವ ಎನಿಸುವ ಈ ಪರಿಷತ್ತಿನ ಐತಿಹಾಸಿಕ ಅರ್ಥಪೂರ್ಣತೆ ನನ್ನ ಮನಸ್ಸಿನಲ್ಲಿ ಮೂಡಿ ಮೇರೆವರಿಯುತ್ತಿದೆ. ಏಶಿಯದ ಸ್ವತಂತ್ರ ರಾಜ್ಯಗಳ ಪ್ರತಿನಿಧಿಗಳೆನಿಸಿದ ನಾವು ಗೆಳೆಯರಾದ ಆಸ್ಟ್ರೇಲಿಯ, ನೂಜಿಲೆಂಡ್, ಎತಿಯೋಪಿಯ ಮತ್ತು ಈಜಿಪ್ಟಿನ ಪ್ರತಿನಿಧಿಗಳೊಡನೆ ಇಲ್ಲಿ ಮೊದಲ ಬಾರಿಗೆ ಹೀಗೆ ಕೂಡಿದ್ದೇವೆ. ನಾವು ಪ್ರಾಚೀನ ನಾಗರಿಕತೆ ಮತ್ತು ಇಂದಿನ ಉತ್ಸಾಹಪೂರ್ಣವಾದ ಪಾಶ್ಚಾತ್ಯ ನಾಗರಿಕತೆ ಈ ಎರಡನ್ನೂ ಪ್ರತಿನಿಧಿಸುತ್ತೇವೆ. ನಾವು ಈ ಸುದೀರ್ಘವಾದ ನಿನ್ನೆಗಳ ಆಸ್ತಿಯನ್ನು ಪಡೆದವರಷ್ಟೇ ಅಲ್ಲದೆ ನಾಳೆಯನ್ನು ಕಟ್ಟುವವರಿದ್ದೇವೆ. ನಾವು ಆ ನಾಳಿನ ಹೊಣೆಯನ್ನು ಹೊತ್ತಿದ್ದೇವೆ; ಅದನ್ನು ಹೊರಲು ನಾವು ತಕ್ಕವರೆಂಬುದನ್ನು ಸಿದ್ಧ ಮಾಡಿ ತೋರಿಸಬೇಕಾಗಿದೆ. ಇಲ್ಲಿಯ ವರೆಗೆ ಹೆಗಲ ಮೇಲೆ ನೊಗಹೊತ್ತು ತಲೆಬಾಗಿ ನಡೆವ ಮುದಿಯೆತ್ತಿನಂತೆ ಏಶಿಯವು ಪರರಾಷ್ಟ್ರಗಳಿಗೆ ದಾಸೋಹವೆಂದು, ಅವುಗಳಿಗೊಂದು ಕ್ರೀಡಾವಸ್ತುವೆನಿಸಿತ್ತು. ಆದರೆ ಇನ್ನು ಮೇಲೆ ಅದೆಂದೂ ತನ್ನ ಸ್ವಾತಂತ್ರ್ಯದಲ್ಲಿ ಅವರು ಕೈಹಾಕುವುದನ್ನು ಸಹಿಸಲಾರದು.

ಜಗತ್ತಿಗೇ ಆಶ್ಚರ್ಯ

ಜಪಾನರಿಂದ ಇಂಡೊನೇಶಿಯನ್ನು ಮಿತ್ರರಾಷ್ಟ್ರಗಳು ಗೆದ್ದು ಪುನಃ ಅದನ್ನು ಡಚ್ಚರಿಗೆ ಕೊಟ್ಟವು. ಆದುದರಿಂದ ಇದರಲ್ಲಿ ಮಿತ್ರರಾಷ್ಟ್ರಗಳಿಗೊಂದು ವಿಶೇಷ ಹೊಣೆಯಿದೆ. ಕಳೆದ ಮೂರು ವರ್ಷಗಳಲ್ಲಿ ಅನೇಕಾನೇಕ ಗಣ್ಯ ಘಟನೆಗಳು ಇಂಡೊನೇಶಿಯದಲ್ಲಿ ನಡೆದು ಹೋದವು. ಡಚ್ಚರು ಮುರಿದ ವಚನಗಳದೊಂದು ನೀಳ್ಗತೆ, ಇಂಡೊನೇಶಿಯನ್ನರ ಪ್ರಜಾರಾಜ್ಯವನ್ನು ದುರ್ಬಲಗೊಳಿಸಿ ಮುರಿದೊಗೆಯಲು ಅವ್ಯಾಹತವಾಗಿ ಮಾಡಿದ ಠಕ್ಕಿನ ಪ್ರಯತ್ನಗಳ ಒಂದು ಸುದೀರ್ಘ ಕಾದಂಬರಿ. ಕಳೆದ ವರ್ಷದ ಡಿಸೆಂಬರ್ ೧೮ ರಲ್ಲಿ ಶಾಂತಿಯುತ ಸಂಧಾನ ನಡೆಯುತ್ತಿರುವಾಗಲೇ ಡಚ್ಚರು ಒಮ್ಮಿಂದೊಮ್ಮೆ ಪ್ರಜಾರಾಜ್ಯದ ಮೇಲೆ ಬಿದ್ದರು.

"ಜಡವೂ ಮೊಂಡವೂ ಆಗಿ ಹೋಗಿದ್ದ ಜಗತ್ತಿನ ಪ್ರಜ್ಞೆಯನ್ನು ಇದು ಥಟ್ಟನೆ ಹೊಡೆದೆಬ್ಬಿಸಿ ಬೆರಗುಗೊಳಿಸಿತು! ಪ್ರಜಾರಾಜ್ಯದ ನೈತೃಗಳನ್ನು ಬಂಧಿಸಲಾಯಿತು, ಬೇರೆಬೇರೆ ಇಡಲಾಯಿತು ಮತ್ತು ಅವರನ್ನು ಅಮಾನುಷ ರೀತಿಯಿಂದ ನಡೆಸಿಕೊಳ್ಳಲಾಯಿತು. ಸಂ. ರಾ. ಸಂಘದ ಭದ್ರತಾಮಂಡಲವು ಮುಖಂಡರನ್ನು ಬಿಡಬೇಕೆಂದೂ ಹಗೆತನದ ಚಟುವಟಿಕೆಗಳನ್ನು ನಿಲ್ಲಿಸಬೇಕೆಂದು ಸಾಲುಸಾಲಾಗಿ ಗೊತ್ತುವಳಿಗಳನ್ನು ಸ್ವೀಕರಿಸಿ ಕಳಿಸಿತು; ಇದರಿಂದ ಶಾಂತಿಯುತವೂ ಗೌರವಾಸ್ಪದವೂ ಆದ ಒಪ್ಪಂದದ ಮಾತುಕತೆಗಳನ್ನಾಡಲು ಅನುಕೂಲವಾಗುವುದು ಎಂದಿತು. ಆದರೆ ಭದ್ರತಾಮಂಡಲದ ಈ ಸಲಹೆಗಳನ್ನು ಡಚ್ಚರು ಲಕ್ಷಿಸಲೇ ಇಲ್ಲ; ಇನ್ನೂ ಅವರು ಅವನ್ನು ಆಚರಣೆಗೆ ತಂದಿಲ್ಲ. ಡಚ್ ಅಧಿಕಾರಿಗಳು ಇಂಡೊನೇಶಿಯ ತಮಗೆ ಅಧೀನವಾಗಿ ಉಳಿದೀತೆಂಬ ಆಸೆಯಿಂದ ಸಂಯುಕ್ತ ಸರಕಾರವನ್ನು ಸ್ಥಾಪಿಸಲು ಈಗ ಬಹಳ ಗಡಬಡಿಸುವಂತೆ ತೋರುತ್ತದೆ.

ಪ್ರತಿಜ್ಞಾಗಾಂಗೇಯರು

"ಇಂಡೊನೇಶಿಯನ್ನರ ಅಥವಾ ಏಶಿಯದ ಇಂದಿನ ಮನಃಸ್ಥಿತಿಯನ್ನು ಬಲ್ಲ ಯಾವನೇ ಆಗಲಿ, ಇಂಡೊನೇಶಿಯದ ರಾಷ್ಟ್ರೀಯತೆಯನ್ನು ಸ್ವಾತಂತ್ರ್ಯಬುಭುಕ್ಷೆಯನ್ನು ಸದೆಬೊಗೆಯಲು ಮಾಡಿದ ಈ ಪ್ರಯತ್ನವು ವ್ಯರ್ಥವಾಗುವುದೇ ಸೈ ಎಂದು ಹೇಳದಿರಲಾರನು. ಆದರೆ ಈ ಪ್ರಕಾರ ಬಟ್ಟಬಯಲಾಗಿ ನಿರ್ಲಜ್ಜೆಯಿಂದ ಸ್ವಾತಂತ್ರ್ಯಾಪಹಾರಮಾಡುವುದನ್ನು ಬೇರೆ ರಾಷ್ಟ್ರಗಳು ಕಣ್ಣು ಮುಚ್ಚಿ ನೋಡುತ್ತ ಕುಳಿತುಕೊಂಡರೆ ಇಂಡೊನೇಶಿಯನ್ನರ ಈ ಭರವಸೆಗಳು ನುಚ್ಚುನೂರಾಗಿ, ಅವರು ಈ ಮಾರ್ಗವನ್ನು ಬಿಟ್ಟು ಎಷ್ಟೇ ದುಷ್ಕರವಿರಲಿ, ಬೇರೆಯ ಮಾರ್ಗವನ್ನು ಹಿಡಿದು ಹೋರಾಡಬೇಕಾಗುತ್ತದೆ. ಆದರೆ ಒಂದು ಮಾತ್ರ ನಿಶ್ಚಿತ: ಪಡ್ಚಾಳಿಕೆಗೆ ಅವರಿಂದೂ ಮಣಿಯರು,

ಔಪನಿವೇಶಿಕ ನಿಯಂತ್ರಣಕ್ಕೆ ಅವರೆಂದೂ ತಲೆಬಾಗಲಾರರು. ಇಂಡೋನೇಶಿಯನ್ನರಿಂದು ಪ್ರತಿಜ್ಞಾಗಿಂಗೇಯುಳು!

ನವವ್ಯವಸ್ಥೆಯ ಪ್ರತೀಕ

"ಸಂಯುಕ್ತ ರಾಷ್ಟ್ರ ಸಂಘವನ್ನು ನವವ್ಯವಸ್ಥೆಯ ಪ್ರತೀಕವೆಂದು ನಾವು ಪರಿಗಣಿಸಿರುವದರಿಂದ ಅದನ್ನು ದುರ್ಬಲಗೊಳಿಸುವಂಥ ಯಾವ ಕಾರ್ಯಕ್ರಮವನ್ನು ನಾವು ಕೈಕೊಳ್ಳಲಾರೆವು. ಆದರೆ ಭದ್ರತಾ ಮಂಡಲದ ಆದೇಶವನ್ನೇ ಡಚ್ಚರು ಮೂಲೆಗೊತ್ತಿದ ಮೇಲೆ ನಾವು ಇನ್ನು ಸುಮ್ಮನಿರದೆ ಅವರ ಬಲವನ್ನು ವೃದ್ಧಿಗೊಳಿಸಬೇಕು ಎಂದು ಆಲೋಚಿಸಿ ಈ ರೀತಿ ಇಲ್ಲಿ ಕೂಡಿದ್ದೇವೆ. ಸಂ. ರಾ. ಸಂಘದ ಶಾಸನಪಟ ಇಂಥ ಪ್ರಾದೇಶಿಕ ಸಂಘಟನೆಗೆ ಅವಕಾಶ ಕೊಡುತ್ತದೆ. ಭದ್ರತಾ ಮಂಡಲಕ್ಕೆ ಇಂಡೋನೇಶಿಯರ ಸಮಸ್ಯೆಯನ್ನು ಶಾಂತಿಯುತವಾಗಿ ಬೇಗ ಬಗೆಹರಿಸಲು ನಾವು ಹೇಗೆ ನೆರವಾಗಬೇಕೆಂಬುದೇ ನಮ್ಮ ಗುರಿಯಾಗಿದೆ. ನಮಗೆ ಯಾವ ರಾಷ್ಟ್ರದೊಡನೆಯೂ ಶತ್ರುತ್ವವಿಲ್ಲ. ಸ್ವಾತಂತ್ರ್ಯ ವಿಸ್ತರಣದ ಮೂಲ ಶಾಂತಿಯನ್ನು ಹೆಚ್ಚಿಸುವುದೇ ನಮ್ಮ ಉದ್ದೇಶ. ಏಕೆಂದರೆ, ಶಾಂತಿ ಸ್ವಾತಂತ್ರ್ಯವೆಂಬ ಈ ಎರಡು ಯಾವಾಗಲೂ ನಿಯತ ಸಾಹಚರ್ಯವುಳ್ಳವು.

ಉದ್ದೇಶ

"ಈ ಅಥವಾ ಇನ್ನಾವ ಸಮಸ್ಯೆಯನ್ನೇ ಆಗಲಿ ನಾವು ಕುಲಭೇದ ನೀತಿಯಿಂದ ಬಗೆಹರಿಸಹೊರಟವರಲ್ಲ. ನಮ್ಮ ಕಾರ್ಯ ತ್ರಿವಿಧವಿದೆ. ಉಭಯ ಪಕ್ಷಕ್ಕೂ ಸ್ವೀಕಾರ್ಯವೆನಿಸುವ ಶಾಂತಿ ಯೋಜನೆಯನ್ನು ತಯಾರಿಸಿ ಭದ್ರತಾ ಮಂಡಲಕ್ಕೆ ಕಳಿಸುವುದು, ಭದ್ರತಾ ಮಂಡಲದ ಆದೇಶವನ್ನು ಉಭಯ ಪಕ್ಷದವರಲ್ಲಿ ಒಬ್ಬರು ಅಥವಾ ಇಬ್ಬರೂ ತಿರಸ್ಕರಿಸಿದರೆ ಯಾವ ಕ್ರಮ ತೆಗೆದುಕೊಳ್ಳಬೇಕು ಎಂಬುದನ್ನು ತಿಳಿಸುವುದು ಮತ್ತು ಮೂರನೆಯದಾಗಿ ಇಲ್ಲಿ ಪ್ರತಿನಿಧಿಸಲ್ಪಟ್ಟಿರುವ ಸರಕಾರಗಳು ಪರಸ್ಪರ ವಿಚಾರ ವಿನಿಮಯ ಮಾಡಲು, ಒಕ್ಕಟ್ಟಿನಿಂದ ಕೆಲಸ ಮಾಡಲು ಯಾವ ಅನುಕೂಲತೆಗಳನ್ನು ಕಲ್ಪಿಸಿಕೊಳ್ಳಬೇಕೆಂಬುದನ್ನು ನಿರ್ಣಯಿಸುವುದು.

"ಈ ದ್ವೇಷಪ್ರಪಂಚದಲ್ಲಿ, ಘರ್ಷಣಾ ನುರ್ಷಣಗಳ ವಲಯದಲ್ಲಿ, ಹಿಂಸೆ ಹತ್ಯೆಗಳ ಜಗತ್ತಿನಲ್ಲಿ ನಾವೆಲ್ಲರೂ ಅಮೇರಿಕನ್ ಮತ್ತು ಯುರೋಪಿಯನ್ನರಂತೆ. ಒಕ್ಕಟ್ಟಿನಿಂದ ಸಹಕರಿಸಿ ಶಾಂತಿ, ಸಹನೆ ಮತ್ತು ಸ್ವಾತಂತ್ರ್ಯಗಳ ಪಾಲನೆ ಪೋಷಣೆಗಳಿಗಾಗಿ ಪ್ರಯತ್ನಿಸೋಣ. ಹಿಂಸಾ ಮಾರ್ಗವನ್ನು ಹಿಡಿದು ಜಗತ್ತನ್ನು ಇನ್ನು ಛಿನ್ನ ಭಿನ್ನ ಮಾಡಹೋದರೆ ನಮಗೆ ಜಯಸಿಗದು. ಆದರೆ ನಾವು ಏಶಿಯದ ಸನಾತನ ನೀತಿಯಂತೆ ನಮ್ಮನ್ನು ನಾವು ರೂಪಿಸಿಕೊಂಡು ಯುದ್ಧೋನ್ಮತ್ತ ಜನತೆಗೆ ಸತ್ಯದ ಕೈದೀವಿಗೆಯನ್ನು ಎತ್ತಿಹಿಡಿದರೆ ಆದರಿಂದ ಜಗತ್ತಿನಲ್ಲಿ ಅದ್ಭುತವಾದ ವ್ಯತ್ಯಾಸವನ್ನು ನಾವು ಉಂಟುಮಾಡಬಹುದು.

ರಾಷ್ಟ್ರಪಿತನ ಸಂದೇಶ

"ನಮ್ರತೆಯಿಂದ ನಾನು ಈ ಪರಿಷತ್ತಿನ ನೆನಪಿಗೆ ನಮ್ಮ ರಾಷ್ಟ್ರಪಿತನ ಸಂದೇಶವನ್ನು ತರಬಯಸುತ್ತೇನೆ. ರಾಷ್ಟ್ರಗಳು ಬೆಳೆಯುವುದಾಗಲಿ, ಸ್ವತಂತ್ರವಾಗುವುದಾಗಲಿ ಪರಸ್ಪರ ದ್ವೇಷ, ಹಿಂಸೆ, ಅಸಹನೆಗಳಿಂದಲ್ಲ ಎಂದು ಆತನು ನಮಗೆ ಹೇಳಿದ್ದಾನೆ. ಆತನ ಮಾರ್ಗದರ್ಶನದಿಂದಲೇ ನಾವು ಸ್ವಾತಂತ್ರ್ಯ ಗಳಿಸಿದೆವು. ಭಯ, ಹಗೆತನ ಮತ್ತು ಹಿಂಸೆಗಳ ವಿಷಮ ಚಕ್ರದಲ್ಲಿ ಜಗತ್ತು ಸಿಕ್ಕಿಬಿದ್ದಿದೆ. ಅನ್ಯಮಾರ್ಗವನ್ನು ಹಿಡಿದಲ್ಲಿ ಅದು ಆ ಚಕ್ರದಿಂದ ಮುಕ್ತವಾಗದು. ಆದುದರಿಂದ ನ್ಯಾಯ ಮಾರ್ಗ ಯಾವಾಗಲೂ ನ್ಯಾಯವಾದ ಗುರಿಗೊಯ್ದು ಮುಟ್ಟಿಸುವದೆಂಬ ದೃಢ ವಿಶ್ವಾಸದಿಂದ ನಾವು ನ್ಯಾಯ್ಯವಾದ ಮಾರ್ಗವನ್ನೇ ಹಿಡಿಯೋಣ. ಈ ಪ್ರಕಾರ ಈಗ ಜಗತ್ತಿಗೆ ಅತ್ಯಗತ್ಯವಾಗಿರುವ ಸಾಮರಸ್ಯ ಸಮುನ್ನತಿಗಳ" ಸಾಧನೆಯಲ್ಲಿ ಸಹಾಯ ಸಲ್ಲಿಸೋಣ.

ನೆಹರುಗಳ ಅಧ್ಯಕ್ಷತೆ

ಪರಿಷತ್ತಿಗೆ ನೆಹರುಗಳನ್ನು ಅಧ್ಯಕ್ಷರನ್ನಾಗಿ ಆರಿಸಲು ಅಫಗಾಣ ಪ್ರತಿನಿಧಿ ಸೂಚಕರೂ ಬ್ರಹ್ಮೀ ಪ್ರತಿನಿಧಿ ಅನುಮೋದಕರೂ ಆದರು. ಅಂತೂ ಪರಿಷತ್ತಿನ ಅಧ್ವರ್ಯುಗಳೇ ಅಧ್ಯಕ್ಷರಾದರು. ಪರಿಷತ್ತಿನ ಭವನವು ಪ್ರೇಕ್ಷಕರಿಂದ ಕಿಕ್ಕಿರಿದು ಹೋಗಿತ್ತು. ದೇಶ ವಿದೇಶದ ಅನೇಕ ಪತ್ರಿಕಾ ಪ್ರತಿನಿಧಿಗಳೂ ನೆರೆದಿದ್ದರು. ಅಧ್ಯಕ್ಷರ ಆಯ್ಕೆಯ ನಂತರ ಅಫಗಾಣ ಪ್ರತಿನಿಧಿ ಸರದಾರ ನಜೀಬುಲ್ಲ ಮೊದಲು ಮಾತಾಡಿದರು. ಚೀನದಿಂದ ಇಥಿಯೋಪಿಯ ಮತ್ತು ಅಸ್ಟ್ರೇಲಿಯದಿಂದ ಲೆಬನಾನಿನ ವರೆಗಿನ ರಾಷ್ಟ್ರಗಳು ಹೀಗೆ ಸೇರಿದ್ದು ಇದೇ ಮೊದಲು ಎಂದು ಅವರು ಹೇಳಿದರು. "ಅಫಗಾಣರಾದ ನಾವು ನಮಗೆ ಮಾತ್ರವಲ್ಲದೆ ಅನ್ಯರಿಗೂ ಸ್ವಾತಂತ್ರ್ಯ ಬೇಕೆಂಬವರು. ಜಗತ್ತಿನ ಸುರಕ್ಷಿತತೆಗೆ ಪ್ರತಿಯೊಂದು ರಾಷ್ಟ್ರದ ಹಕ್ಕು ಮತ್ತು ಅಧಿಕಾರಗಳನ್ನು ಮನ್ನಿಸುವದೇ ಮುಖ್ಯ" ಎಂದು ಭಾಷಣ ಮಾಡಿದರು. ಇಂಡೋನೇಶಿಯದ ಸಮಸ್ಯೆ ನ್ಯಾಯ್ಯವಾದ ರೀತಿಯಲ್ಲಿ ಬಗೆಹರಿಸಲು ತಕ್ಕ ಸೂಚನೆಯನ್ನು ಈ ಪರಿಷತ್ತು ಮಾಡಬಲ್ಲುದೆಂದು ಅವರು ಆಶಿಸಿದರು. ಅಲ್ಲದೆ, ಪಂಡಿತ ನೆಹರುಗಳನ್ನೂ ಮಹಾತ್ಮರನ್ನೂ ಬಾಯತುಂಬ ಕೊಂಡಾಡಿದರು.

ಬ್ರಹ್ಮದೇಶದ ಒತ್ತಾಯ

ಬ್ರಹ್ಮೀ ಪ್ರತಿನಿಧಿ ಯುವಿನ್ನರು ಮಾತಾಡುತ್ತ "ಬ್ರಹ್ಮದೇಶ ಹೀಗೆ ಪರಿಷತ್ತನ್ನು ಕರೆಯಲು ನೆಹರುಗಳಿಗೆ ಮೊದಲು ಸೂಚನೆ ಕೊಟ್ಟಿತು, ಆ ಪ್ರಕಾರ ಅವರು ಕರೆದರು. ಡಚ್ಚರ ಪೋಲೀಸುಕ್ರಮವೆಂದರೆ ಇಂಡೋನೇಶಿಯಾದಲ್ಲಿ ತಾವು ಕಳೆದುಕೊಂಡ ಪ್ರಭುತ್ವವನ್ನು ಪುನಃ ಸ್ಥಾಪಿಸುವುದೇ ಆಗಿದೆ. ಏಶಿಯವು ಭದ್ರತಾಮಂಡಳಿ ತಟಸ್ಥವಾಗಿರುವುದನ್ನು ಅಥವಾ ಅರ್ಧಮರ್ಧ ಕಾರ್ಯಕ್ರಮ ಕೈಗೊಳ್ಳುವದನ್ನು ಸಹಿಸದು ಎಂದು ಪರಿಷತ್ತು ಭದ್ರತಾಮಂಡಲದ ಮೇಲೆ ಒತ್ತಾಯವನ್ನು ಹೇರಬೇಕು" ಎಂದು ಸಾರಿದರು.

ಸರ್ ಜಾಫರುಲ್ಲಾ ಖಾನರ ಭಾಷಣ

ಅನಂತರ ಪಾಕಿಸ್ತಾನದ ಪ್ರತಿನಿಧಿಗಳಾದ ಸರ್ ಜಾಫರುಲ್ಲಾಖಾನರೆದ್ದು ಸದ್ಯದ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಹೀಗೆ ಏಕಹಿತ ಸಂಬಂಧವುಳ್ಳ ರಾಷ್ಟ್ರಗಳು ಸೇರಿದ್ದಕ್ಕೆ ಸಂತೋಷವನ್ನು ವ್ಯಕ್ತಪಡಿಸಿ, ಇದೇ ಪ್ರಕಾರ ಆಗಾಗ ಇಂಥ ಪರಿಷತ್ತು ಕೂಡುತ್ತಿರಬೇಕೆಂದು ಹೇಳಿದರು. ಅವರು ಮುಂದುವರಿದು, "ನಾನು ಅಧ್ಯಕ್ಷಪೀಠದಿಂದ ನೆಹರುಗಳು ತಮ್ಮ ವಾಗ್ವೈಖರಿಯಿಂದ ಹೇಳಿದ ಅಂಶಕ್ಕಿಂತ ಹೆಚ್ಚನ್ನು ಈ ವಿಷಯದಲ್ಲಿ ಹೇಳಲಾರೆ. ಇಂಡೋನೇಶಿಯದ ಪ್ರಶ್ನೆಯ ಮೇಲೆ ಮತ್ತು ಇತ್ತೀಚಿನ ಡಚ್ಚರ ಆಕ್ರಮಣದ ಮೇಲೆ ಪಾಕಿಸ್ತಾನದ ಅಭಿಪ್ರಾಯವೇನೆಂಬುದು ಆಗಲೇ ತಿಳಿದಿರುವದರಿಂದ ನಾನು ಅದನ್ನು ಪುನಃ ಉಚ್ಚರಿಸಬಯಸುವುದಿಲ್ಲ. ಚರ್ಚೆ ಸಾಗುವಾಗ ಈ ನಮ್ಮ ಅಭಿಪ್ರಾಯವನ್ನು ವಿಶದಪಡಿಸುತ್ತ ಹೋಗುವೆನು" ಎಂದರು.

ಪರಿಷತ್ತಿನಲ್ಲಿ ಕೆಳಗಿನ ಅಂಶಗಳನ್ನು ಭದ್ರತಾ ಮಂಡಲಕ್ಕೆ ತಿಳಿಸಬೇಕೆಂದು ನಿರ್ಣಯವಾಯಿತೆಂದು ವರದಿಯಾಗಿದೆ.

(೧) ಪ್ರಜಾರಾಜ್ಯಕ್ಕೆ ಕಾರ್ಯಸ್ವಾತಂತ್ರ್ಯವನ್ನು ಸಂಪೂರ್ಣವಾಗಿ ಕೊಡಿಸಬೇಕು.

(೨) ಡಿಸೆಂಬರ ೧೮ ರ ಹಿಂದೆ ಅದಕ್ಕೆ ಸೇರಿದ್ದ ಪ್ರದೇಶಗಳನ್ನು ಅದಕ್ಕೆ ನಾಳಿನ ಮಾರ್ಚ ೧೫

ರೊಳಗೆ ತಿರುಗಿ ಕೊಡುವುದು ಮತ್ತು ಅಲ್ಲಿಂದ ಡಚ್ಚ ಸೈನ್ಯವನ್ನು ಹಿಂತೆಗೆದುಕೊಳ್ಳುವುದು.

(೩) ಮಾರ್ಚ ೧೫ ೧೯೪೯ ರೊಳಗೆ ನಡುಗಾಲ ಸರಕಾರವನ್ನು ರಚಿಸುವುದು.

(೪) ಘಟನಾ ಸಮಿತಿ ರಚನೆಗಾಗಿ ಚುನಾವಣೆ ನಡೆಸಲು ಅನುಕೂಲ ಕಲ್ಪಿಸುವುದು ಮತ್ತು ಇಂಡೋನೇಶಿಯದ ಸಂಯುಕ್ತ ಸಂಸ್ಥಾನಕ್ಕೆ ೧೯೫೦ ರ ಜನವರಿ ೧ ರೊಳಗೆ ಅಧಿಕಾರವನ್ನು ವರ್ಗಾಯಿಸುವುದು.

(೫) ಮೇಲಿನ ಸಲಹೆಗಳನ್ನು ಅಮಲಿನಲ್ಲಿ ತರಲು ಭದ್ರತಾಮಂಡಲ ಒಂದು ಅಧಿಕಾರ ಯುಕ್ತ ಸಮಿತಿಯನ್ನು ರಚಿಸುವುದು.

ಉಪಸಂಹಾರ

೨೦ ರಲ್ಲಿ ಪ್ರಾರಂಭವಾದ ಪರಿಷತ್ತು ೨೩ ರಲ್ಲಿ ಕೊನೆಗೊಂಡಿತು. ಪರಿಷತ್ತು ನಿಜವಾಗಿಯೂ ಐತಿಹಾಸಿಕ ಪ್ರಸಿದ್ಧಿಗೆ ಪಾತ್ರವಾಯಿತು ಎಂದರು ನೆಹರುಗಳು. ಈ ಮಹತ್ವದ ಸಂದರ್ಭದಲ್ಲಿ ಎಲ್ಲ ರಾಷ್ಟ್ರಗಳೂ ತಂತಮ್ಮ ಪ್ರತಿನಿಧಿಗಳನ್ನು ಕಳಿಸಿ ಸಹಕರಿಸಿದ್ದಕ್ಕೆ ಅವನ್ನು ಅಭಿನಂದಿಸಿ, ಎಲ್ಲ ರಾಷ್ಟ್ರಗಳೂ ಅಲ್ಪಾವಧಿಯಲ್ಲಿ ಇಂಥ ಒಂದು ಮುಖ್ಯ ಸಮಸ್ಯೆಯನ್ನು ಬಿಡಿಸುವುದರಲ್ಲಿ ಒಮ್ಮತಕ್ಕೆ ಬಂದುದು ಅಂತಾರಾಷ್ಟ್ರೀಯ ವ್ಯವಹಾರದಲ್ಲೇ ಹಿಂದು ಅಸಾಧಾರಣ ಸಂಗತಿ ಎಂದು ಅವರು ಹರ್ಷವನ್ನು ವ್ಯಕ್ತಪಡಿಸಿದರು.

ಇರಾಣಿನ ಪ್ರತಿನಿಧಿ ಎಂ. ಪೂಸ್ತಾನೌರಿ ಎಸ್ ಫಂಡಿಯಾರಿ ಮತ್ತು ಫಿಲಿಪೈನ್ಸಿನ ಪ್ರತಿನಿಧಿ ಜನರಲ್ ರೋಮುಲೋ ಅವರು ಪರಿಷತ್ತಿನ ಉದ್ದೇಶವನ್ನೂ ಭಾರತದ ಔದಾರ್ಯ ಮುತ್ತು ಮುತ್ಸದ್ದಿತನವನ್ನು ಹೃತ್ಪೂರ್ವಕವಾಗಿ ಪ್ರಶಂಸಿಸಿದರು.

ಈಜಿಪ್ಟಿನ ಪ್ರತಿನಿಧಿ ಶ್ರೀ ಇಸ್ಮಾಯಿಲ್ ಕಮೇಲ್ ಬೇಗರು ಎಲ್ಲ ಪ್ರತಿನಿಧಿಗಳ ಪರವಾಗಿ ಭಾರತಕ್ಕೂ ಪಂಡಿತ ನೆಹರುಗಳಿಗೂ ಕೃತಜ್ಞತಾಸಮರ್ಪಣೆ ಮಾಡಿ, ಗವರ್ನರ್ ಜನರಲ್ ರಾಜಗೋಪಾಲಾಚಾರಿಯವರ ಋಷಿ ಸಹಜ ಸರಳತೆಯನ್ನು ಕೊಂಡಾಡಿ, ಅವರೂ ನೆಹರುಗಳೂ ವಿಚಾರ ಆಚಾರಗಳ ಪ್ರತೀಕರೂಪರಾಗಿ ಏಶಿಯ ಜಗತ್ತಿಗೆ ಎತ್ತಿ ಹಿಡಿದ ಧ್ಯೇಯಗಳನ್ನು ಅಳವಡಿಸಿಕೊಂಡ ಮಹಾವ್ಯಕ್ತಿಗಳು ಎಂದರು.

ಇಂಡೋನೇಶಿಯದ ಕೃತಜ್ಞತೆ

ಹಿಂದುಸ್ಥಾನದ ಕರೆಗೆ ಓಗೊಟ್ಟು ಬಂದ ಎಲ್ಲ ನಾಡಿನ ಪ್ರತಿನಿಧಿಗಳಿಗೂ ತಮ್ಮ ಸರಕಾರ ಮತ್ತು ಪ್ರಜೆಗಳ ಪರವಾಗಿ ಇಂಡೊನೇಶಿಯದ ಪ್ರಜಾರಾಜ್ಯದ ಅವಸರದ ಸರಕಾರದ ಅಧ್ಯಕ್ಷರಾದ ಡಾ. ಪ್ರವೀರನೆಗಾರರು ಕೃತಜ್ಞತೆಯ ಸಂದೇಶವನ್ನು ತಂತಿಯ ಮೂಲಕ ತಿಳಿಸಿದರು.

“ ಇಂಡೊನೇಶಿಯದ ಹಿತಸಂಬಂಧ ಗಳಿಗೆ ತಮ್ಮ ಹಿತಸಂಬಂಧ ಸಂಬಂಧಿಸದಿದ್ದರೆ ಇಷ್ಟು ರಾಷ್ಟ್ರಗಳ ಪ್ರತಿನಿಧಿಗಳು ಹೀಗೆ ಸಭೆ ಸೇರುತ್ತಿರಲಿಲ್ಲವೆಂದು ನಮಗೆ ಗೊತ್ತಿದೆ. ನಮ್ಮ ನಾಡಿನಲ್ಲಿ ಶಾಂತಿ ಸುವ್ಯವಸ್ಥೆಗಳಿರಬೇಕಾದುದು ಕೇವಲ ನಮಗೆ ಅಥವಾ ಡಚ್ಚರಿಗೆ ಅಗತ್ಯವಾದುದೆಂದಲ್ಲ, ಅದು ನಮ್ಮ ನೆರೆಯ ರಾಷ್ಟ್ರಗಳಿಗೂ — ಅಷ್ಟೇ ಏಕೆ— ಇಡೀ ಜಗತ್ತಿಗೂ ಬೇಕಾದುದು. ಆದುದರಿಂದ ಈ ಏಶಿಯ ಪರಿಷತ್ತು ಡಚ್ಚರ ಆಕ್ರಮಣವನ್ನು ತಡೆಗಟ್ಟಿ ಏಶಿಯದಲ್ಲಿ ಮತ್ತು ಜಗತ್ತಿನಲ್ಲಿ ಶಾಶ್ವತವಾದ ಶಾಂತಿಯು ನೆಲೆ ನಿಲ್ಲುವಂತೆ ನೆಲಗಟ್ಟನ್ನು ಹಾಕಬಲ್ಲುದೆಂದು ನಮ್ಮ ನಂಬಿಗೆ. ಏಶಿಯ ಪರಿಷತ್ತು ತಾವು ಪಟದಲ್ಲಿ ಹೇಳಿದ ರೀತಿಯಿಂದ ರಾಷ್ಟ್ರಗಳು ಹೇಗೆ ಸಹಕರಿಸಿ ಕೆಲಸ ಮಾಡಬೇಕು ಎಂಬುದಕ್ಕೆ ಸಂ. ರಾ. ಸಂಘಕ್ಕೆ ಒಂದು ಮಾದರಿಯಾಗಲಿ. ಮಾನ್ಯ ಪಂಡಿತ ಜವಾಹರಲಾಲರಿಗೆ ನಾವು ಸೂಚಿಸಿದ ಅಂಶಗಳಂತೆ ನ್ಯಾಯವಾದ ಣರ್ಯಕ್ಕೆ ಡಚ್ಚರು ಒಪ್ಪಿದರೆ ಸರಿ. ಇಲ್ಲವಾದರೆ ಎಂದಿನಂತೆ ಸ್ವಾತಂತ್ರ್ಯ ಸಿಗುವ ವರೆಗೆ ಅಹೋರಾತ್ರ ಹೋರಾಡುವೆವು. ”

ಪಂಡಿತರ ಪತ್ರ

ಏಶಿಯ ಪರಿಷತ್ತಿನ ಅಧ್ಯಕ್ಷ ಸ್ಥಾನದಿಂದ ಪಂಡಿತ ನೆಹರುಗಳು ಭದ್ರತಾಮಂಡಲದ ಅಧ್ಯಕ್ಷರಿಗೆ ಕಳಿಸಿದ ಪತ್ರದಲ್ಲಿ ಪರಿಷತ್ತಿನಲ್ಲಿ ಪ್ರತಿನಿಧಿಸಲ್ಪಟ್ಟ ಸದಸ್ಯರಾಷ್ಟ್ರಗಳು ಸಂ. ರಾ. ಸಂಘದ ಸದಸ್ಯರ ಸಂಖ್ಯೆಯಲ್ಲಿಗಣ್ಯ ಸಂಖ್ಯಕವೆನಿಸಿವೆ ಮತ್ತು ಪರಿಷತ್ತು ತಮಗೆ ಭದ್ರತಾಮಂಡಲವನ್ನು ತನ್ನ ನಿರ್ಣಯಗಳಿಗೆ ಮಾನ್ಯತೆ ಕೊಡಲು ಬಿನ್ನವಿಸಿಕೊಳ್ಳಬೇಕೆಂದು ಕೇಳಿಕೊಂಡಿದೆ ಎಂದು ಕಾಣಿಸಿದ್ದಾರೆ. ಅಲ್ಲದೆ, ಇಂಡೊನೇಶಿಯದ ಶಾಂತಿಭಂಗವು ಆಗ್ನೇಯ ಏಶಿಯ ಮತ್ತು ಆ ಮೂಲಕ ಇಡೀ ಜಗತ್ತಿನ ಶಾಂತಿಭಂಗಕ್ಕೆ ಕಾರಣವಾಗಬಹುದಾದುದರಿಂದ ತಾವು ಪಟದ ತತ್ವಾನುಸಾರ ಶೀಘ್ರವಾಗಿ ಸಮಸ್ಯೆಯನ್ನು ಪರಿಹರಿಸಬೇಕು. ಏಶಿಯ ರಾಷ್ಟ್ರಗಳ ಸಹಾನುಭೂತಿ ಇಂಡೊನೇಶಿಯ ಪ್ರಜಾರಾಜ್ಯದ ಬಗ್ಗೆ ಇರುವುದಕ್ಕೆ ಭೂಜಲಗಗನ ಮಾರ್ಗಗಳಲ್ಲಿ ತಮ್ಮ ದೇಶದ ಮೇಲೆ ಡಚ್ ವಾಹನಗಳು ತಿರುಗಬಾರದೆಂದು ಭಾರತ ಪಾಕಿಸ್ತಾನ, ಸಿಂಹಳ, ಬ್ರಹ್ಮದೇಶ ಮತ್ತು ಸೌದಿ ಅರೇಬಿಯಗಳು ಬಹಿಷ್ಕಾರ ಹಾಕಿದ್ದೇ ಸಾಕ್ಷಿ ಎಂದು ಮುಂತಾಗಿ ಪತ್ರದಲ್ಲಿ ಹೇಳಲಾಗಿದೆ.

ಪ್ರತಿಕ್ರಿಯೆಗಳು

ನ್ಯೂಜಿಲೆಂಡಿನ ಮುಖ್ಯಮಂತ್ರಿ ಶ್ರೀ ವಾಲ್ಟರ್ ನ್ಯಾಶರು ತಮಗೆ ನಿಮಂತ್ರಣಾನುಸಾರ ಪ್ರತಿನಿಧಿಯನ್ನು ಕಳಿಸಲಾಗದುದಕ್ಕೆ ಉಂಟಾದ ತೊಂದರೆಯನ್ನು ವಿವರಿಸಿ, ಆ ಬಗೆ ವಿಷಾದವನ್ನು ನೀರುತಂತಿಯ ಮೂಲಕ ವ್ಯಕ್ತಪಡಿಸಿದ್ದಾರೆ.

ತುರ್ಕಿಯ ಪತ್ರಿಕೆಗಳು ಪರಿಷತ್ತಿನ ಕಾರ್ಯವನ್ನು ಪ್ರಶಂಸಿಸಿ ತುರ್ಕಿ ಅದರಲ್ಲಿ ಭಾಗವಹಿಸದಿದ್ದುದಕ್ಕೆ ಪಶ್ಚಾತ್ತಾಪವನ್ನು ಪ್ರಕಟಿಸಿವೆ.

ನೆದರ್ ಲೆಂಡ್ಸಿನ ಮುಖ್ಯಮಂತ್ರಿ ಡಾ. ವಿಲ್ಲೆಂ ಡ್ರೀಸರು ಡಚ್ಚರ ವಾದವನ್ನು ಏಶಿಯ ಪರಿಷತ್ತಿನ ಪ್ರತಿನಿಧಿಗಳು ಗಮನಿಸಲೇ ಇಲ್ಲ ಎಂದು ದೂರಿಕೊಂಡರು. ಅಂತಾರಾಷ್ಟ್ರೀಯ ಪ್ರಪಂಚವು ಇಂಡೊನೇಶಿಯನ್ ಪ್ರಜಾರಾಜ್ಯದವರು ೬ ತಿಂಗಳ ಒಪ್ಪಂದವನ್ನು ಮುರಿದದ್ದನ್ನೂ ೩೦೦ ಜನ ಇಂಡೊನೇಶಿಯದ ಅಧಿಕಾರಿಗಳನ್ನು ಕೊಲೆ ಮಾಡಿದ್ದನ್ನೂ ಮೊದಲಿಂದಲೂ ಅಲಕ್ಷ್ಯ ಮಾಡುತ್ತ ಬಂದಿದೆ ಎಂದೂ ಅವರು ಉದ್ಗರಿಸಿದರು; ಅಲ್ಲದೆ, ಅನ್ಯರಾಷ್ಟ್ರಗಳು ಹಾಲೆಂಡನ್ನು ಅದರಷ್ಟಕ್ಕೇ ಬಿಟ್ಟರೆ ಸಮಸ್ಯೆ ಪರಿಹಾರವಾಗುವುದು ಎಂದು ಗೊಣಗಿದರು.

“ನ್ಯೂಯಾರ್ಕ್ ಟೈಮ್ಸ್” ನ ಲಂಡನ್ ಸುದ್ದಿಗಾರನ ಪ್ರಕಾರ ಭಾರತದಲ್ಲಿ ಅಮೇರಿಕದ ರಾಯಭಾರಿಯಾಗಿರುವ ಶ್ರೀ ಲಾಯ್ ಹೆಂಡರ್‌ಸನ್ನರು ದಿಲ್ಲಿಯ ಏಶಿಯ ಪರಿಷತ್ತಿನಲ್ಲಿ ಭಾರತವು ಅರ್ಥಗರ್ಭಿತ ಪಾತ್ರವನ್ನು ವಹಿಸಿದೆಯೆಂದರೆಂದೂ ಪರಿಷತ್ತಿನ ಕೊನೆಯ ನಿರ್ಣಯ ಮಧ್ಯಮಾರ್ಗದ್ದೂ ಕಾರ್ಯಾರ್ಹವೂ ಆಗಿರತಕ್ಕದ್ದೆಂದು ಅಮೇರಿಕ ಮತ್ತು ಬ್ರಿಟನ್ನುಗಳು ಆಶಿಸುತ್ತವೆಂದು ಪಂಡಿತ ನೆಹರುಗಳಿಗೆ ಉಪದೇಶಿಸಿರುವರೆಂದೂ ತಿಳಿಯುತ್ತದೆ.

ಸುಮಾತ್ರದಲ್ಲಿ ಹಿಡಿದಿಡಲಾದ ಪ್ರಜಾರಾಜ್ಯದ ಮುಖಂಡರು ನಡುಗಾಲದ ಸಂಯುಕ್ತ ಸರಕಾರದ ರಚನೆಯ ಬಗ್ಗೆ ಡಚ್ಚರೊಡನೆ ಸಂಧಾನ ನಡೆಸಲು ಪ್ರಜಾರಾಜ್ಯದ ಸ್ವಸ್ಥದ ಮಂತ್ರಿ ಮಂಡಲವನ್ನು ಮಾನ್ಯಮಾಡಿ ಅದಕ್ಕೆ ಸಭೆ ಸೇರಗೊಟ್ಟ ಹೊರತು ತಾವು ಒಪ್ಪಿಗೆ ಕೊಡಲಾರೆವೆಂದುದಾಗಿ ನಂಬಲಾರ್ಹವಾದ ಕಡೆಯಿಂದ ಸುದ್ದಿ ಬಂದಿದೆ.

ಲಚ್ಚಮ್ಮನ ಘೋರ ರಸಿಕತೆ !

ಬಣ್ಣಿಸಿದವರು ಎಸ್. ಜಿ. ಬೈಲೂರ, ಗೋಕರ್ಣ

ಅರುಣೋದಯಕ್ಕೆ ಇನ್ನೂ ತುಂಬ ಅವಕಾಶವಿತ್ತು.

ಎಂದಿನಂತೆ ನಸುಕು ಹರಿಯುವದರಲ್ಲಿ ಬಿಟ್ಟಿ ಟಪಾಲು ಮೋಟಾರಿಗೆ ಎಚ್ಚತ್ತ ನಾನು ಅರೆ ನಿದ್ರೆಯ ಮುಚ್ಚುಗಣ್ಣಿನಲ್ಲಿ ಆಗ ತಾನೆ ಅನುಭವಿಸಿದ ಸುಖಸ್ವಪ್ನವನ್ನು ಮೆಲ್ಲುಕಾಡಿಸುತ್ತಿದ್ದೆ; ಹಾಸಿಗೆಯನ್ನು ಬಿಡಲಾರದೆ ಆಲಸ್ಯದ ಸವಿಯನ್ನು ಉಣ್ಣುತ್ತಿದ್ದೆ.

ಒಮ್ಮಿಂದೊಮ್ಮೆ

ಕೃಷ್ಣಾ ಕೃಪೆ ಮಾಡೋ

ನನ್ನಾ ಮುಂದೆ ಆಡೋ

ಎಂದು ಪಲ್ಲ ಹಿಡಿದು ನೆರೆಮನೆಯಿಂದ ಸೂಸುವ ಗದ್ಗದಿತ ಕಿರುಚು ದನಿಯ ಹಾಡಿಗೆ ನಿದ್ದೆಯ ಅವಶೇಷವೆಲ್ಲ ಅಳಿದುಹೋಯಿತು.

ನಾನು ತಟ್ಟನೆ ಜಿಗಿದು ಕುಳಿತು ಆಲಿಸಿದೆ: ಅದೇ ಹಾಡು, ಆದರೆ ಆ ಹಾಡಿನ ಸನ್ನಿವೇಶದಲ್ಲಿ ಇನ್ನಾರೋ 'ಸಾಕ್ಬಿಡು ಸಾಕ್ಬಿಡು' ಅಂದಂತೆ ಭಾಸವಾಗುತ್ತಿತ್ತು.

ಅದೇನಿರಬಹುದು ಎಂದು ಯೋಚಿಸತೊಡಗಿದೆ: ಉಹ್ಞು! ತಲೆಯನ್ನೆಷ್ಟು ಕೆರೆದುಕೊಂಡರೂ ಏನೂ ಹೊಳೆಯದಾಯಿತು. ಜೊತೆಗೆ ಕುತೂಹಲವು ತಡೆಯಲಾರದಷ್ಟರ ಮಟ್ಟಿಗೆ ಏರಿತು.

ನಡೆದೆ ಆ ಮನೆಗೆ ನೆಟ್ಟಗೆ, ಮತ್ತು ಆ ವೇಳೆ ಎಷ್ಟಾಯಿತು ಅಂತ ಕೇಳುವ ನೆವದಿಂದ ನುಗ್ಗಿದೆ ಒಳಗೆ. ನೋಡಿದರೇನು!. ಆ ಹಾಡು ಕಸಗುಡಿಸುತ್ತಿದ್ದ ಭಾವಿಕ ಲಚ್ಚಮ್ಮನ ಗಂಟಲೊಳಗಿಂದ ಭಕ್ತಿಭಾವನ ರಭಸಕ್ಕೆ ಉಕ್ಕೇರಿ ಉಕ್ಕೇರಿ ಉದುಳುತ್ತಿದೆ. ಕೈಯಲ್ಲಿಯ ಕಸಬರಿಗೆಯು ಅದಕ್ಕೆ ತಕ್ಕಂತೆ ಒಳ್ಳೆ ಕಸುವಿನಿಂದ ತಾಲವನ್ನು ಹಿಡಿದು ಒಂದೊಂದು ಪದಕ್ಕೆ ಒಮ್ಮೊಮ್ಮೊ "ಸಾಕ್ಬಿಡು" ತ್ತಿದೆ:

ಕೃಷ್ಣಾ ಕೃಪೆ ಮಾಡೋ

ಸಾಕ್ಬಿಡು ಸಾಕ್ಬಿಡು ಸಾಕ್ಬಿಡು-ಸಾಕ್ಬಿಡು

ವಿಸ್ಮಯದಿಂದ ಬೆಪ್ಪಗಾದೆ. ಆ ಕಸಬರಿಗೆಗು ಕೂಡ 'ಸಾಕ್ಬಿಡು' ಎನ್ನುವಂತೆ ಅನಿಸಿದ್ದು ಈ ಭಾವಿಕಳಿಗೆ ಅನಿಸಬಾರದೇ ! ಅಯ್ಯೋ ಅಜ್ಞಾನವೆ! ಈ ಕಸಗುಡಿತದ ಸನ್ನಿವೇಶವೇನು, ಆ ರಸಿಕಶಿರೋಮಣಿಯಾದ ಶ್ರೀಕೃಷ್ಣನಿಗೆ ಆಟವಾಡಲು ಆಹ್ವಾನಿಸುವದೇನು! ಇಂತಹ ಹಾಡಿನಲ್ಲಿಯ ಸ್ವಾರಸ್ಯವೇನು! ತಾಳಮೇಳವೈಸು ಔಚಿತ್ಯವೇನು!!! ಸಂಗೀತ ಕಚೇರಿಯನ್ನು ಭೈರವಿಯಿಂದ ಪ್ರಾರಂಭಿಸಿದರೆ ಇದಕ್ಕೂ ಹೆಚ್ಚು ಪ್ರಮಾದ ಉಂಟಾಗಬಲ್ಲದೆ? ಜನಸಾಮಾನ್ಯರು ಸಂಗೀತದ ಲವಲೇಶವನ್ನಾದರೂ ಅರಿತಿದ್ದರೆ ಈ ಅನರ್ಥಕ್ಕೆ ಎಡೆಯಿರುತ್ತಿತ್ತೆ?

\+ \+ \+

ಲಚ್ಚಮ್ಮನಂದರೆ ಒಬ್ಬ ಕೋಲ್ಮಡಿಯ ಕರ್ಮಠಳು. ಸೆಕೆಯಿರಲೀ ಚಳಿಯಿರಲಿ, ಮಳೆಯಿರಲೀ ಗಾಳಿಯಿರಲಿ, ಬೆಳಕಿರಲೀ ಕಗ್ಗತ್ತಲೆಯಿರಲಿ, ಹೌದು, ಮನೆಯಲ್ಲಿ ಮೊಮ್ಮಕ್ಕಳಿಗೆ ಜಡ್ಡಾಗಿರಲೀ, ಹೊತ್ತುಮೀರಿದ್ದರಿಂದ ತಾಳಲಾರದ ಹಸಿವಾಗಿರಲಿ!- ಆಕೆ ತಪ್ಪದೇ ದಿನಾಲು ಕೋಟಿತೀರ್ಥದಲ್ಲಿ ಒಮ್ಮೆಯಾದರೂ ಮುಳುಗಿಯೇ ತೀರಬೇಕು, ಅಂದರೇನೇ ಬದುಕಿದಳು! ಅವಳಿಗೆ ದೇವರೆಂದರೆ ತುಂಬ, ಬಾಯಿತುಂಬ (ಕಿವಿತುಂಬ ಎಂತಲೂ ಅನ್ನಬಹುದು; ಯಾಕಂದರೆ ಊರಲ್ಲಾಗುವ ಹರಿಕತೆ ಮುಂತಾದವುಗಳಲ್ಲಿಯ ಒಂದನ್ನೂ ಬಿಡುವಂದರೆಲ್ಲ!) ಶ್ರದ್ಧೆ. ಅದರಲ್ಲೂ ಉಡುಪಿಯ ಶ್ರೀಕೃಷ್ಣನೆಂದರೆ ತೀರಿತು! ಪ್ರತಿವರ್ಷವಲ್ಲದಿದ್ದರೂ ಪ್ರತಿ ಎರಡು ವರ್ಷಕ್ಕೆ ಪರ್ಯಾಯದ ನೆವದಿಂದಾದರೂ ಉಡುಪಿಗೆ ಹೋಗಿ ಶ್ರೀಕೃಷ್ಣನನ್ನು ಪುರೆಹೊಕ್ಕುವದು ಅವಳ ಪರಿಪಾಠವೇನು, ವ್ಯಸನವೆಂದರೂ ತಪ್ಪಾಗದು. ವೈಷ್ಣವಳಾದ ಅವಳು ಕೃಷ್ಣಪಕ್ಷಪಾತಿಯೆಂದು ಬೇರೆ ಹೇಳಬೇಕೆ? ಅವಳಲ್ಲಿದ್ದ ಪ್ರೀತಿ, ವಿಶ್ವಾಸ, ಸ್ವಾರ್ಥತ್ಯಾಗ; ಸೇವಾಸಕ್ತಿ ಇವಷ್ಟು ಸಂಪೂರ್ಣವಾಗಿ ಅವನಿಗೇ ಮೀಸಲಾಗಿವೆಯೋ ಅನ್ನುವಹಾಗೆ ನೆರೆಹೊರೆಯವರ, ಬಂಧುಬಳಗದವರ, ಆಪ್ತ(ಅನ್)ಇಷ್ಟರ ಹತ್ತಿರ ನಡತೆಯುಳ್ಳವಳು. ಸ್ವತಃ ಪತಿದೇವರನ್ನೇ ಎಳ್ಳಷ್ಟು ಲೆಕ್ಕಿಸದೆ, ಜಗಳವಾಡಿ ತನ್ನ ಜೀವನದ ಪಾಕಿಸ್ತಾನ ಮಾಡಲೆಂದು ಎಂದೋ ಮನೆ ಬಿಟ್ಟು ಎದ್ದವಳಿದ್ದು ನಮ್ಮ ಪಕ್ಕದಲ್ಲಿ ಒಬ್ಬೊಂಟಿಗಳಾಗಿದ್ದಂತೆ ಇರಲು ಹವಣಿಸುವವಳು!

ಅವಳ ಮಡಿಯ ಕಲ್ಪನೆ ವಿಚಿತ್ರವಾದದ್ದು. ತನ್ನ ಮೊಮ್ಮಕ್ಕಳು ಹಿತ್ತಲತುಂಬ ಹೇಸಿಗೆ ಮಾಡಿದ್ದರೂ ಅಡ್ಡಿಯಿಲ್ಲ. ತಾನು ಉಡುವ "ಮಡಿಸೀರೆ" ಅದಷ್ಟೋ ಹಬ್ಬ-ಹುಣ್ಣಿವೆಗಳ ಪಾಯಸದ ಕಲೆಗಳಿಂದ ತುಂಬಿ ನಿಜಸ್ವರೂಪವನ್ನು ಅಷ್ಟೂ ಕಳಕೊಂಡಿದ್ದರೂ ಪರಿವೆಯಿಲ್ಲ; ಚಿಂತೆ ಇಲ್ಲ. ವರ್ಷಗಟ್ಟಲೆ ಸೀರನ್ನು ಕಾಣದೆ ನಾರುತ್ತಿದ್ದರೂ ಚಿಂತೆಯಿಲ್ಲ. ಆದರೆ ಮನೆಯನ್ನೆಲ್ಲ ದಿವಸಕ್ಕೆ ಎರಡು ಬಾರಿಯಾದರೂ ಸಾರಿಸದಿರುವಂತಿಲ್ಲ. ಸಾರಿಸೋಣವೆಂದರೇನು! ಎಲ್ಲಿ ನೋಡಿದರೂ ಸಗಣಿ ನೀರಿನ ಒದ್ದೆ ಬಿಟ್ಟದ್ದಲ್ಲ, ಸಗಣಿ ವಾಸನೆ ತಪ್ಪಿದ್ದಲ್ಲ. ಹೊರಗಿನವರು ಯಾರೂ ಕುಡಿಯಲಿಕ್ಕೆ ಒಂದು ತಟಕು ನೀರು ಕೇಳುವಂತಿಲ್ಲ; ಕೇಳಿದರೂ ಇವಳು ಕೊಡುವಂತಿಲ್ಲ; ಒಂದು ವೇಳೆ ಕೊಟ್ಟರೂ ಅವರು ಕುಡಿಯುವಂತಿಲ್ಲ. ಅಷ್ಟು ಸಗಣಿಯ ವಾಸನೆ ಕೆಟ್ಟದ್ದು ಆ ನೀರಿಗೆ. ನೆರೆಮನೆಯವರೂ ನಾಯಿ ಸಾಕುವಂತಿಲ್ಲ. ತಮ್ಮ ಮಕ್ಕಳನ್ನು ಇವಳಂಗಳದಲ್ಲಿ ಬಿಡುವಂತಿಲ್ಲ, ಬಿಟ್ಟದ್ದೇ ಆದರೆ "ಇಲ್ಕಟ್ಟೇಡಾ" ! "ಅಲ್ಕಟ್ಟೇಡಾ" ! ಅನ್ನುವವಳೇ. ಅಪ್ಪಿತಪ್ಪಿ ಮುಟ್ಟಿದರಂತೂ ರಂಭಾಟವಾಗುವದು ಖಂಡಿತ. ಎಂಥ ಜಗಳಗಂಟರಾದರೂ ಅವಳ ವಾಕ್ಪ್ರಹಾರಕ್ಕೆ ತಲೆ ಬಾಗಿ ಕಾಲಿಗೆ ಬುದ್ಧಿ ಹೇಳಲೇಬೇಕು. ಅದರಲ್ಲೇನು ಆಶ್ಚರ್ಯ? ಇನ್ನಾರಿಗೆ ಅವಳಂತೆ ಕಾಲು ಕೆದರಿ ಸಡ್ಡು ಹೊಡೆದು ಜಗಳಕ್ಕೆ ನಿಂತು ಕೇರಿಗೆ ಕೇರಿಯನ್ನೇ ಒಟ್ಟುಗೂಡಿಸಿ ಇನ್ನಷ್ಟು ಸ್ಫೂರ್ತಿಗೊಂಡು ಕೆಟ್ಟಕೆಟ್ಟ, ಅವಾಚ್ಯ, ಅಶ್ರಾವ್ಯ ಬೈಗಳ ಸುರಿಮಳೆಯನ್ನೇ ಆರಂಭಿಸುವ ಘಾಟತನವಿದೆ ?

\+ \+ \+

ಈ ಕೋಲ್ಮಡಿಯಮ್ಮನಿಗೆ ಆ ಹಾಡಿನ ಬಗ್ಗೆ-ಏನಾಗುವದೊ ಆಗಲಿ, ಅಂತ-ನನ್ನ ಮನಸ್ಸಿನಲ್ಲಿ ಬಂದುದನ್ನೆಲ್ಲ ಹೇಳಿಯೇ ಬಿಟ್ಟೆ.

ಏನೋ, ಕೊಂಚವೂ ಸಿಟ್ಟು ಮಾಡದೆ ಶಾಂತವಾಗಿಯೇ ಅಂದಳು. "ಅದರಲ್ಲೇನಿದೆ? ನಾನು ನಿನ್ನೆ ಬ್ರಹ್ಮಾನಂದರ ಕೀರ್ತನೆಗೆ

ಹೋಗಿದ್ದೆ. ತುಂಬ ಚೆನ್ನಾಗಿತ್ತು. ಅವರೇ ನಮಗೆಲ್ಲ ಬೋಧಿಸಿದ್ದು. ಅದೇನಂದರೆ, ದೇವರ ನಾಮಸ್ಮರಣೆಯನ್ನು ಯಾವಾಗಲೂ ಯಾವ ಸ್ಥಿತಿಯಲ್ಲೂ ಮಾಡಬಹುದು. ಕೈಕೊಂಡ ಕೆಲಸಕ್ಕೆ ತೊಂದರೆಯಾಗದಿದ್ದರಾಯಿತು. ಹೆಂಗಸರಿಗಂತೂ ತುಂಬ ಅನುಕೂಲ. ನಿದಾನವಾಗಿ ಮಾಡುವ ಕೆಲಸದ ಸಮಯದಲ್ಲಿ ನಿದಾನ ಹಾಡುವ ಪದ ಇಲ್ಲವೆ ಸ್ತೋತ್ರವನ್ನು ಹೇಳಬೇಕು. ಲಗು ಬಗೆಯಿಂದ ಮಾಡುವ ಕೆಲಸವಾದರೆ ಅದಕ್ಕೆ ಒಪ್ಪುವಂತೆ ಹಾಡಬೇಕು. ಹಿಟ್ಟು ಬೀಸಬೇಕಾದರೆ "ರಘುಪತಿ ರಾಘವ ರಾಜಾರಾಮ" ಇಲ್ಲವೆ "ರಾಧಾಕೃಷ್ಣ ಜೈ ಕುಂಜವಿಹಾರಿ" ಅನುಕೂಲ. ಅದೇ ಭತ್ತ ಕುಟ್ಟುವ ಹೊತ್ತಿಗೆ "ರಾಮ್ ರಾಮ್ ರಾಮ್ ರಾಮ್ ಸೀತಾರಾಮ್" "ರಾಮ ಲಕ್ಷ್ಮಣ ಜಾನಕಿ, ಜೈ ಬೋಲೊ ಹನುಮಾನಕೀ," ಮೊದಲಾದವುಗಳೇ ಚಂದ. ಅಂದ ಮೇಲೆ ನಾನು ಮಾಡಿದ್ದರಲ್ಲಿ ತಪ್ಪೇನು ?"

"ಹರಿದಾಸರು ಹೇಳಿದ ಮಾತ್ರಕ್ಕೆ ಹಗಲಿದ್ದದ್ದು ರಾತ್ರಿಯಾಗುವದಿಲ್ಲವಷ್ಟೆ ? ದೇವರ ಸ್ತೋತ್ರ ಮೊದಲಾದ ಪವಿತ್ರವಾದ, ಪೂಜ್ಯವಾದ ಪದಗಳನ್ನು ಕೊಳಕಾದ ಬಟ್ಟೆಯಲ್ಲಿದ್ದಾಗ, ಹೊಲಸಾದ ಕೆಲಸದಲ್ಲಿ ತೊಡಗಿದ್ದಾಗ ಹಾಡುವದೆಂದರೆ ಮಹಾಪಾಪವಲ್ಲದಿದ್ದರೂ ಅರಸಿಕತೆಯ ಪರಮಾವಧಿಯೇ ಸರಿ," ಅಂತ ಹೇಳಬೇಕಾಯಿತು.

"ತೋರಿಕೆಗೆ ಮಡಿ ಇದ್ದರೇನು ? ಇರದಿದ್ದರೇನು ? ಮನಸ್ಸೊಂದು ನಿರ್ಮಲ ನಿರ್ವಿಕಾರವಿದ್ದರಾಯಿತು."

ಅಬ್ಬಬ್ಬ, ಇವಳ ಮಾತೇನು, ಕೃತಿಯೇನು! ನಿರ್ವಿಕಾರ ಮನಸ್ಸೆ, ಏನು ಕೇರಿಯೆಲ್ಲ ಹೊಲಗೇರಿ ಮಾಡುವಂತಹ ಸಿಡುಕಿನ ಸ್ವಭಾವವೇ? ನಿರ್ಮಲತೆಯೋ, ಏನು ಕೋಲ್ಮಡಿಯೋ ? ಎಂದು ಮನಸ್ಸಿನಲ್ಲಿಯೇ ಅಂದ ಕೊಂಡೆ.

"ಆದರೂ ನಾವು ಸ್ನಾನ ಮಾಡಿ ಮಡಿ ಉಟ್ಟ ಹೊರತು ದೇವರ ಪೂಜೆ ಮಾಡುವದಿಲ್ಲವಲ್ಲ !" ಪೂಜೆ ಮಾಡಿದ ವಿನಾ ಊಟ ಮಾಡುವದಿಲ್ಲವಲ್ಲ ? ಅಂತ ಉದ್ಗರಿಸಿದೆ. ಜೊತೆಗೆ ಪ್ರತಿನಿತ್ಯ ಎರಡಾವರ್ತಿ ಮನೆ ಸಾರಿಸುವದು, ಕೋಟಿತೀರ್ಥದಲ್ಲಿ ಮುಳುಮುಳುಗಿ ಏಳುವದು. ಇವುಗಳ ಉಲ್ಲೇಖ ಮಾಡಬೇಕೆಂತ ಅರೆ ಮನಸ್ಸಾಗಿತ್ತು. ಆದರೆ ಅದಿಲ್ಲದನೇ ಆವಳ ಮುಖದಲ್ಲಿ ಸ್ವಲ್ಪ ಕೆಂಪೇರಿದಂತೆ ಅನಿಸಿತು; ಧೈರ್ಯ ಸಾಲಲಿಲ್ಲ.

"ನಾನು ಯಾವದನ್ನೂ ಯಾರಿಗೂ ಉದ್ದೇಶಿಸಿ ಹೇಳಲಿಲ್ಲವಮ್ಮ, ಸಿಟ್ಟಾಗಬೇಡಿ. ಒಂದು ರೀತಿಯಲ್ಲಿ ನೀವನ್ನುವದೂ ಸರಿಯೇ," ಇಷ್ಟು ಹೇಳಿ ಅಲ್ಲಿಂದ ಕಾಲು ಕಿತ್ತಿದೆ.

\+ + +

ಹ್ಹಾ! ನೆನಪಾಯಿತು.

ನಮ್ಮ ದೇಶದ ವಾಲಗ-ಬಂಡ್ ಬ್ಯಾರಿಸುವವರಲ್ಲಿಯೂ ಇಂತಹದೇ ಅಜ್ಞಾನವು ಮೇಲಿಂದ ಮೇಲೆ ಕಂಡುಬರುತ್ತೆ ಎಂಬಾಶಯದ ಒಂದು ಉದ್ದ ಲೇಖವನ್ನು ಇಂದಿಗೆ ಸುಮಾರು ಮೂರು ವರ್ಷಗಳಾಚೆ ಲಾಹೋರದ "ಟ್ರಿಬ್ಯೂನ್" ಎಂಬ ಆಂಗ್ಲ ದಿನಪತ್ರಿಕೆಯಲ್ಲಿ ಓದಿದ್ದೆ. ಅದರಲ್ಲಿ ಈ ಅಜ್ಞಾನದ ಮೂಲಕ ಉಂಟಾದ ಎರಡು ಹಾಸ್ಯಾಸ್ಪದ ಘಟನೆಗಳು ಬಣ್ಣಿಸಲ್ಪಟ್ಟಿದ್ದುವು. ಅವು ಇಂತಿವೆ:

ಒಮ್ಮೆ ಒಂದು ಬಡಕುಟುಂಬದಲ್ಲಿ ಉಪನಯನವು ನಡೆದಿತ್ತು. ಆಮಂತ್ರಿತರೂ ಅಭ್ಯಾಗತರೂ ಅದೇಷ್ಟೋ ಜನರು ಕೂಡಿದ್ದರು. ಹಾಗೂ ಕೂಡುವವರಿದ್ದರು. ನಾಗ ಒಂದೇ ಸವನೆ ಬಾರಿಸುತ್ತಿತ್ತು. ಹಾಡು ಯಾವದು ಗೊತ್ತೆ? –" ದೇಖೋ ಕಲ ಫಿಗಲಾನ್ ಗರಿಬೋಂಕಾ ತಮಾಷಾ, ಗರಿಬೋಂಕಾ ತಮಾಷಾ! "

ಇನ್ನೊಂದು ಪ್ರಸಂಗದಲ್ಲಿ ಹಣ್ಣಣ್ಣು ತೊಂಭತ್ತು ಮೀರಿದ ವಯಸ್ಸಿನ ಮುದುಕ ನೋರ್ವನ ಸ್ಮಶಾನಯಾತ್ರೆ ಸಾಗಿತ್ತು. ಅದರಲ್ಲಿದ್ದ ಬ್ಯಾಂಡಿನವರು ಒಳ್ಳೇ ಹುರುಪಿನಿಂದ ಬಾರಿಸುತ್ತಿದ್ದರಂತೆ: "ಚಲ್ ಚಲ್‌ರೆ ನವಜವಾನ್! ಚಲ್ ಚಲ್‌ರೆ ನವಜವಾನ್ !"

ನಮ್ಮ "ರಸಿಕರ" ಅರಸಿಕತೆಗೆ ಮಿತಿಯುಂಟೇ ?

ವಾರದ ಭವಿಷ್ಯ

ಜ್ಯೋತಿಷಿ:- ಕೃಷ್ಣಶಾಸ್ತ್ರಿ ಭಿಡೆ ಭವಿಷ್ಯ ಕಥನ ಅಫೀಸ ಖಡೇಬಝಾರ, ಬೆಳಗಾವಿ

ಜನೆವರಿ ತಾ. ೩೧ ರಿಂದ ಫೆಬ್ರುವರಿ ೬ ರ ವರೆಗೆ

ಮೇಷ

ಮನೆಯಲ್ಲಿ ಎಲ್ಲರ ಪ್ರಕೃತಿಯೂ ಉತ್ತಮ, ಪ್ರಾಪಂಚಿಕ ಸುಖ ಬಯಸಿದಂತೆ, ಸ್ಥಾವರದಲ್ಲಿಯೂ ಅಲ್ಪಸ್ವಲ್ಪ ಹೆಚ್ಚಳ. ಆದರೆ ಆ ವಿಷಯದಲ್ಲಿ ದಾಯಾದಿಗಳು ಮಾತ್ರವೇ ಏಕೆ ನಿಮ್ಮ ಸ್ವಂತ ಮಕ್ಕಳು ಕೂಡ ಅಸಂತೋಷಪಡುವರು. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಲಾಭಗಳು ಹೇರಳ. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಒಳ್ಳೆ ಅನುಕೂಲ. ಆದರೆ ಮಿತ್ರರಲ್ಲಿ ನೀವು ಬಹಳ ಎಚ್ಚರಿಕೆಯಿಂದ ನಡೆನುಡಿಗಳನ್ನಿಟ್ಟುಕೊಳ್ಳಬೇಕು. ಏಕೆಂದರೆ ತಪ್ಪು ತಿಳಿವಳಿಕೆಯಿಂದ ಗೊಂದಲವಾಗುವ ಸಂಭವವುಂಟು. ಪೂಜ್ಯ ಜನರ ಸಮಾಗಮ. ಭೆಟ್ಟಿಗಿಂತ ಪತ್ರವ್ಯವಹಾರ ಹೆಚ್ಚು ಫಲಕಾರಿಯಾದೀತು. ಆದರೆ ಅಶ್ವಿನಿಯ ಕೊನೆಯ ಮೂರು ಮತ್ತು ಭರಣಿಯ ಪ್ರಥಮ ಚರಣಗಳಲ್ಲಿ ಹುಟ್ಟಿದವರು ಸಾಹಸಪಡದೆ ಜಯ ಪಡೆಯಲಾರರು. ತಾ. ೩೧, ೧, ೫, ೬ ಅನುಕೂಲ ದಿನಗಳು.

ವೃಷಭ

ಯಾರ ಪ್ರಕೃತಿಗೂ ಏನೂ ಆತಂಕವಿಲ್ಲದಿದ್ದರೂ ಗೃಹಕಲಹದಿಂದ ನಿಮ್ಮ ಪ್ರಾಪಂಚಿಕ ಸುಖ ಮಣ್ಣಾದೀತು. ಇದು ಬಿಟ್ಟರೆ ಉಳಿದ ವಿಚಾರಗಳಲ್ಲಿ ಈ ವಾರ ನಿಮಗೆ ಉತ್ಕರ್ಷವನ್ನೇ ತರುವದು. ಉದ್ಯೋಗದಲ್ಲಿ ಪ್ರಗತಿ ಮಧ್ಯಮವಾಗಿದ್ದರೂ ಪ್ರತಿಷ್ಠೆ ಲಾಭಗಳು ಯಥೇಷ್ಟ. ಸ್ಥಾವರದಲ್ಲಿಯೂ ಕೆಲ ಅನುಕೂಲ ಘಟನೆಗಳಾಗುವವು. ಎಲ್ಲಕ್ಕಿಂತ ಹೆಚ್ಚಾಗಿ, ಅನಿರೀಕ್ಷಿತ ಲಾಭವನ್ನು ನೀವು ನಿರೀಕ್ಷಿಸಬಹುದು! ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಜಯಶೀಲರಾಗುವಿರಿ. ಮಿತ್ರಸುಖಕ್ಕೆ ಕೊರತೆಯಿಲ್ಲ. ಪ್ರವಾಸ ಮಾಡಿ ಕಷ್ಟಪಡಬೇಡಿರಿ, ಭೆಟ್ಟಿ ಮತ್ತು ಪತ್ರವ್ಯವಹಾರದಿಂದಲೇ ನಿಮ್ಮ ಕೆಲಸ ಕೈಗೂಡಬಹುದು. ರೋಹಿಣಿಯ ಕೊನೆಯ ೩ ಮತ್ತು ಮೃಗಶೀರ್ಷದ ಮೊದಲನೆಯ ಚರಣಗಳಿಗೆ ವಿಶೇಷ ಸುಯೋಗ. ತಾ. ೩೧, ೧, ೨, ೩ ಅನುಕೂಲ.

ಮಿಥುನ

“ಸಂಸರ್ಗಜಾ ದೋಷಗುಣಾ ಭವಂತಿ” ಯೆಂದು ಬಲ್ಲವರು ಹೇಳಿದ್ದಾರೆ. ನಿಮಗೆ ಈ ವಾರ ಕೆಟ್ಟವರ ಸಂಸರ್ಗ ಗಂಟುಬೀಳುವಂತಿದೆ. ನಿಮ್ಮ ಮನಸ್ಸು ಸ್ವಂತದ ಮತ್ತು ಮಕ್ಕಳ ಅಸ್ವಸ್ಥತೆಯಿಂದಲೂ ಮನೆಯೊಳಗಿನ ಕಚ್ಚಾಟಗಳಿಂದಲೂ ಕಲುಷಿತವಾಗುವಸಂಭವವಿದ್ದು ಪರಸ್ತ್ರೀಯರ ಬಗ್ಗೆ ಪಾಪಹೇತುಗ್ರಸ್ತವಾಗುವ ಭಯವಿರುವದರಿಂದ ದುಸ್ಸಂಗದ ಬಗ್ಗೆ ಎಚ್ಚರಿಕೆಯಿರಲಿ. ದಾಯಾದಿಗಳ ಒಬ್ಬನಿಗೆ ಕಷ್ಟಬಂದು ಪರಸ್ಪರ ಜಗಳವಾಗಬಹುದು. ಹಣಕಾಸಿನ ವಿಷಯದಲ್ಲಿ ನೀವೇನೂ ಚಿಂತಿಸಬೇಕಾಗಿಲ್ಲ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಲಾಭಗಳು ಬೆಳೆಯುವವಲ್ಲದೆ ಅನಿರೀಕ್ಷಿತ ಲಾಭಗಳು ಕೂಡ ದೊರಕಿಕೊಳ್ಳಬಹುದು. ವಾದ ಸ್ಪರ್ಧೆಗಳಲ್ಲಿ ಮಾತ್ರ ಅತ್ತೂ ಅಲ್ಲ ಇತ್ತೂ ಅಲ್ಲದ ಹೊಯ್ದಾಟ. ಪ್ರವಾಸ ಭೆಟ್ಟಿಗಳು ಸಾಧಕ, ಪತ್ರವ್ಯವಹಾರದಿಂದ ಫಲ ದೊರೆಯದು. ನೀವು ಆರ್ದ್ರೆಯ ಕೊನೆಯ ಮೂರು ಅಥವಾ ಪುನರ್ವಸುವಿನ ಮೊದಲನೆ ಚರಣದವರಾಗಿದ್ದರೆ ದೈವವನ್ನೆ ನಂಬಿ ಕೂಡಬೇಡಿರಿ. ಪ್ರಯತ್ನ ಮಾಡಿರಿ. ತಾ. ೨, ೩, ೪, ೫, ಅನುಕೂಲ.

ಕರ್ಕ

ಹಣವಿದ್ದರೂ ಸುಖದ ಋಣವಿಲ್ಲೆಂದು ಈ ವಾರ ನೀವು ಚಡಪಡಿಸುವಿರಿ. ಉದ್ಯೋಗದಲ್ಲಿ ಪ್ರಗತಿ ಕಡಿಮೆಯಿದ್ದರೂ ಪ್ರತಿಷ್ಠೆ ಲಾಭಗಳು ಸಾಕಷ್ಟಿವೆಯೆಂದು ಸಮಾಧಾನ ಹಚ್ಚಿಕೊಂಡಿದ್ದರೆ ಸರ್ವವಿಧದಿಂದಲೂ ಪ್ರಾಪಂಚಿಕ ವ್ಯಥೆಗಳಿಂದ ಹಣ್ಣಾಗುವಿರಿ. ನಿಮಗೂ ನಿಮ್ಮ ಹೆಂಡತಿಗೂ ಆರೋಗ್ಯವಿರದು. ಮಕ್ಕಳು ಚೆನ್ನಾಗಿದ್ದರೂ ನೆರೆಮನೆಯವರು ಕ್ಷುಲ್ಲಕ ಕಾರಣಗಳಿಗಾಗಿ ಕಾಲುಕೆರೆದು ಜಗಳ ಹೂಡಬಹುದು. ಮಿತ್ರಸುಖ ಸರಿಯಾಗಿದ್ದರೂ ಶತ್ರುಭಲವೂ ಬಿಗಿಯೆ. ವಾದ ಸ್ಪರ್ಧೆಗಳಲ್ಲಿ ಮಧ್ಯಮ ಫಲ. ಪ್ರವಾಸಕ್ಕಿಂತ ಪತ್ರವ್ಯವಹಾರ ಮತ್ತು ಭೆಟ್ಟಿ ಶ್ರೇಯಸ್ಕರ. ಪುಷ್ಯದ ಕೊನೆಯ ೩ ಮತ್ತು ಆಶ್ಲೇಷದ ೧ ನೇ ಚರಣದವರಂತೂ ತುಂಬ ತೊಂದರೆಪಡಬೇಕಾಗಬಹುದು. ತಾ. ೪, ೫, ೬ ಲೇಸು.

ಸಿಂಹ

ಪ್ರಕೃತಿ ಕೆಡುವದು. ಹೆಂಡತಿ ಮಾತು ಮಾತಿಗೆ ಜಗಳಾಡುವಳು. ಸಂತತಿ ಸುಖ ನೆಟ್ಟಗಿದ್ದರೂ ಉಳಿದ ಪ್ರಾಪಂಚಿಕ ಕ್ಲೇಶಗಳ ಕೋಟಲೆ. ಉದ್ಯೋಗದಲ್ಲಿ ಪ್ರಗತಿಯಿದ್ದರೂ ಪ್ರತಿಷ್ಠೆ ಲಾಭಗಳ ಮಾತು ಕೇಳಬೇಡಿರಿ. ಮಿತ್ರರಲ್ಲಿ ವಿರೋಧ, ಆಶ್ರಿತರಿಂದ ವಂಚನೆ. ವಾದ ಸ್ಪರ್ಧೆಗಳಿಗಿಳಿದರೆ ಇಬ್ಬರೂ ಹಾನಿ ಮಾಡಿಕೊಂಡು ಪಶ್ಚಾತ್ತಾಪಪಡಬೇಕಾದೀತು. ಎಷ್ಟು ವ್ಯವಸ್ಥೆಯಿಂದ ಕೆಲಸ ಮಾಡಹೋದರೂ ಕೊನೆಗೆ ಎಲ್ಲ ತಲೆಕೆಳಗಾಗುವ ಭಯವಿದೆ. ಪ್ರವಾಸ ಒಳಿತು, ಭೆಟ್ಟಿ ಪತ್ರವ್ಯವಹಾರದಿಂದ ಫಲವಿಲ್ಲ. ಮಘೆಯ ಕೊನೆಯ ೩ ಮತ್ತು ಪೂರ್ವದ ೧ ಚರಣಗಳಿಗೆ ಹೆಚ್ಚು ತೊಂದರೆ. ತಾ. ೪, ೫, ೬ ಸುದಿನಗಳು.

ಕನ್ಯಾ

ಈ ವಾರ ನಿಮ್ಮ ಪ್ರಕೃತಿಗಾಗಲಿ ಪ್ರಾಪಂಚಿಕ ಸುಖಕ್ಕಾಗಲಿ ಧಕ್ಕೆ ತಟ್ಟದಿದ್ದರೂ ಉಳಿದ ಮನಃಕ್ಲೇಶಗಳು ಸಾಕಷ್ಟಿವೆ. ಬಳಗದವರು ನೆರೆಹೊರೆಯವರೊಡನೆ ತಂಟೆ ತಂಟೆಯುಂಟಾದೀತು. ಮಿತ್ರರೂ ವಿರೋಧಿಗಳಾಗುವರು. ಉದ್ಯೋಗದಲ್ಲಿ ಟೊಳ್ಳು ಪ್ರಗತಿ ಪ್ರತಿಷ್ಠೆ ಧಾರಾಳವಾಗಿದ್ದರೂ ಲಾಭಕ್ಕೆ ಮಾತ್ರ ಸೊನ್ನೆ. ದಾಯಾದ್ಯರ ಉತ್ಕರ್ಷ. ಕೆಟ್ಟ ಕನಸುಗಳಿಂದ ಮನಸು ಉದ್ವಿಗ್ನವಾಗುವದು. ವಾದ ಸ್ಪರ್ಧೆಗಳಲ್ಲೂ ಮಧ್ಯಮ ಫಲ. ಪತ್ರವ್ಯವಹಾರದ ಬದಲು ಪ್ರವಾಸ–ಭೆಟ್ಟಿ ಮಾಡಿದರೆ ಹಿತ. ಹಸ್ತದ ಕೊನೆಯ ಮೂರು, ಚಿತ್ರೆಯ ಮೊದಲಿನ ಚರಣಗಳಿಗೆ ಅಷ್ಟೇನೂ ತೊಂದರೆಯಿಲ್ಲ, ತಾ. ೨, ೩, ೪ ಒಳಿತು.

ತುಲಾ

ಪ್ರಕೃತಿ ಉತ್ತಮ. ಪ್ರಾಪಂಚಿಕ ಸುಖ ಮಧ್ಯಮ. ಸಂಗ್ರಹಕ್ಕೆ ಉಚ್ಚಾಯಕಾಲ. ಪ್ರಿಯಜನರ ಮತ್ತು ಅಪ್ರಿಯ ಜನರ ಸಹವಾಸ ಏಕಕಾಲದಲ್ಲಿ ಒದಗಿ ಮನಸ್ಸು ವಿಚಲಿತವಾಗುವದು. ಉದ್ಯೋಗದಲ್ಲಿ ಪ್ರಯತ್ನಬಲದಿಂದಲೇ ಪ್ರಗತಿ ಪ್ರತಿಷ್ಠೆ ಲಾಭಗಳು ದೊರಕಬಹುದು. ಮಿತ್ರರಲ್ಲಿ ವಿರೋಧ. ಮಾವನ ಮನೆಯವರಿಗೆ ಉನ್ನತಿಕಾಲ. ವಾದ ಸ್ಪರ್ಧೆಗಳಲ್ಲಿ ಅನುಕೂಲ. ಪ್ರವಾಸಾದಿ ಕಾರ್ಯಗಳು ಕಷ್ಟದಾಯಕವಾಗಿದ್ದರೂ ಶುಭಪರ್ಯವಸಾಯಿಗಳಾದಾವು. ಸ್ವಾತಿಯ ಮೂರು ಮತ್ತು

ವೃಶ್ಚಿಕದ ಪ್ರಥಮ ಚರಣಕ್ಕೆ ಪ್ರಯಾಸದಿಂದಲೇ ಇಷ್ಟಸಿದ್ಧಿ. ತಾ. ೩೧,೧,೫,೬ ಅನುಕೂಲ.

ವೃಶ್ಚಿಕ

ಸರ್ವವಿಧದಿಂದಲೂ ಈ ವಾರ ನೀವು ಸುಖವನ್ನೇ ಎದುರು ನೋಡಬಾರದು. ಪ್ರಕೃತಿ ಸ್ತ್ರೀ ಸುಖ ಪುತ್ರ ಸುಖ ಪರಿಪೂರ್ಣ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮಧ್ಯಮವಾದರೂ ಲಾಭ ಕೈತುಂಬ. ಮಿತ್ರ ಸುಖವೂ ಚನ್ನಾಗಿದೆ. ವಾದ ಸ್ಪರ್ಧೆಗಳಲ್ಲಿಯೂ ಗೆಲುವು ಪತ್ರವ್ಯವಹಾರದಿಂದಲೇ ಕೆಲಸಸಾಗುವದು. ಅನುರಾಧೆಯ ಕೊನೆಯ ೩ ಮತ್ತು ಜ್ಯೇಷ್ಠದ ಪ್ರಥಮ ಚರಣಗಳಿಗೆ ಸ್ವಲ್ಪ ತೊಂದರೆಯಾಗುವದು. ತಾ. ೨, ೩, ೪ ಹಿತಾವಹ.

ಧನು

ಮಾನಸಿಕ ವ್ಯಥೆಗಳಿಂದ ನೀವು ಈ ವಾರ ಜರ್ಜರಿತವಾಗಿ ಹೋಗುವ ಸಂಭವವಿರುವದರಿಂದ ಧೈರ್ಯವನ್ನು ನೆಮ್ಮಿರಿ. ಪ್ರಕೃತಿ ಚೆನ್ನಾಗಿದ್ದರೂ ಗೃಹಕಲಹ ಹೆಚ್ಚುವದು. ಮನೆತನದ ಉತ್ಕರ್ಷಕ್ಕೆ ಸಾಧಕವಾದ ಮಾತುಗಳು ಘಟಿಸಿದರೂ ಎಲ್ಲರ ಕಣ್ಣು ಉಬ್ಬಿಕೊಂಡೇ ಇರುವದು. ಲಾಭ ಚನ್ನಾಗಿದ್ದರೂ ಪ್ರತಿಷ್ಠೆ ಪ್ರಗತಿ ಅಷ್ಟಕ್ಕಷ್ಟೆ. ವಾದ ಸ್ಪರ್ಧೆಗಳಲ್ಲಿ ನೀವೇ ಗೆದ್ದರೂ ಶತ್ರುವಿನ ಉಪಟಳ ಹೆಚ್ಚುತ್ತಲೆ ಹೋಗುವದು. ಪ್ರವಾಸಕ್ಕಿಂತ, ಭೆಟ್ಟಿ ಪತ್ರ ವ್ಯವಹಾರ ಕ್ಷೇಮ- ಮೂಲದ ಕೊನೆಯ ಮೂರು ಮತ್ತು ಪೂರ್ವಾಷಾಢಾದ೧ ನೆ ಚರಣಗಳಿಗೆ ತುಂಬ ಕಷ್ಟ. ತಾ. ೩೧, ೧, ೫, ೬ ಉತ್ತಮ.

ಮಕರ

ಪ್ರಕೃತಿ ಸುಖ ಅಷ್ಟಕ್ಕಷ್ಟೆ. ಸಂತತಿಯ ಉನ್ನತಿ. ಆದರೂ ಪ್ರಾಪಂಚಿಕ ಸುಖದಲ್ಲಿ ತುಂಬ ಕೊರತೆಗಳು. ಮೇಲೆ ಮನೆಯಲ್ಲಿ ಭೂತಬಾಧೆಯಂಥ ಚಮತ್ಕಾರಿಕ ಘಟನೆಗಳು ನಡೆಯಬಹುದು. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಚನ್ನಾಗಿದೆ. ಆದರೆ ಒಂದಕ್ಕೊಂಬತ್ತು ಖರ್ಚು. ಒಂದು ಧರ್ಮ ಕಾರ್ಯ ನಿಮ್ಮ ಕೈಯಿಂದ ನಡೆಯುವದೊಂದು ಸಮಾಧಾನ. ಪೂಜ್ಯ ಜನರ ಸಹವಾಸ. ವಾದ ಸ್ಪರ್ಧೆಗಳಲ್ಲಿ ಮಧ್ಯಮ ಸ್ಥಿತಿ. ಪ್ರವಾಸಾದಿ ಕಾರ್ಯಗಳು ಇಷ್ಟಾನುಸಾರ. ಶ್ರವಣದ ಕೊನೆಯ ೩ ಮತ್ತು ಪೂರ್ವಾಭಾದ್ರೆಯ ಪ್ರಥಮ ಚರಣಗಳಿಗೆ ಹೆಚ್ಚು ತೊಂದರೆ. ತಾ. ೩೧, ೧, ೨, ೩ ಉತ್ತಮ.

ಕುಂಭ

ಸ್ವಂತದ ಪ್ರಕೃತಿ ಚನ್ನಾಗಿದ್ದರೂ ಹೆಂಡತಿ ಜಡ್ಡು ಬೀಳುವಳು. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆಗಳು ಇಳಿಮುಖವಾಗಿದ್ದರೂ ದ್ರವ್ಯ ಲಾಭ ಯಥೇಚ್ಛ. ಮಿತ್ರ ಸುಖವೂ ಶತ್ರುಗಳ ಕಾಟವೂ ಬೇಕಾದಷ್ಟು ! ವಾದ ಸ್ಪರ್ಧೆಗಳಿಗೆ ಮಧ್ಯಮ. ವೆಚ್ಚ ಬಹಳ. ಪ್ರವಾಸಾದಿ ಕಾರ್ಯಗಳಲ್ಲಿ ಸುಖವಿಲ್ಲ. ಶತತಾರಿಕೆಯ ಕೊನೆಯ ಮೂರು ಮತ್ತು ಪೂರ್ವಾಭಾದ್ರದ ಮೊದಲನೆ ಚರಣಗಳಿಗೆ ಇನ್ನಷ್ಟು ತೊಂದರೆ. ತಾ. ೨, ೩, ೪, ೫ ಅನುಕೂಲ.

ಮೀನ

ಪ್ರಕೃತಿ ಉತ್ತಮ. ಸ್ತ್ರೀ ಸುಖವೂ ಚನ್ನಾಗಿದೆ. ಆದರೆ ಮಕ್ಕಳ ಅಪ್ರಿಯ ವರ್ತನೆಯಿಂದ ಮನೆಯಲ್ಲಿ ಕಲಹ. ಉದ್ಯೋಗದಲ್ಲಿ ಎಲ್ಲವೂ ಬಯಸಿದಂತೆ ಕೈಗೂಡುವದು. ವೆಚ್ಚವೂ ಬಹಳ. ವಾದ ಸ್ಪರ್ಧೆಗಳಲ್ಲಿ ಜಯಶೀಲರಾಗುವಿರಿ. ಮಿತ್ರಸುಖ ಸಾಮಾನ್ಯ. ಪ್ರವಾಸಾದಿ ಕಾರ್ಯಗಳು ಹಿತಕರ. ಉತ್ತರಾಭಾದ್ರದ ಕೊನೆಯ ಮತ್ತು ರೇವತಿಯ ಪ್ರಥಮ ಚರಣಗಳಿಗೆ ಸ್ವಲ್ಪ ಅನಿಷ್ಟ. ತಾ. ೨, ೩, ೪, ೫. ಹಿತಕರ.

‘ಬಾಪು’ಗೆ ಅತ್ಯಂತ ನಮ್ರಭಾವದಿಂದ

ಲೇ:— ಶ್ರೀಮತಿ ಅಮೃತ ಕೌರ

ಬಾಪುವಿನ ಪ್ರಕಾಶಮಾನವಾದ ಪ್ರೇಮ ಸೂರ್ಯನಬಿಸಿಲಿನಲ್ಲಿ ದಿನವೂ ಚಳಿಕಾಸಿಕೊಳ್ಳುವ ದೇವದತ್ತ ವರ ಯಾರಿಗೆ ಇದ್ದಿತೋ ಅಂಥವರಿಗೆ ಅವರು ಅಗಲಿಹೋಗಿ ಒಂದುಶತಕವಾಗಿ ಹೋಗಿದೆಯೆಂದು ಸತ್ಯವಾಗಿ ಎನಿಸುತ್ತದೆ. ಪ್ರತ್ಯಕ್ಷವಾಗಿ ಯಾವನೊಬ್ಬನು ಅವರ ಹತ್ತಿರ ಇರಲಿ ಇಲ್ಲದಿರಲಿ, ಸಂಪೂರ್ಣವಾಗಿ ಅವರನ್ನೆ ಅವಲಂಬಿಸುತ್ತಿದ್ದನು. ಅವರೆಡೆಗೆ ಹೋಗುವವರೆಗೆ ಮಾತ್ರ ಅಡಚಣಿಗಳು ಬಾಧಿಸುತ್ತಿದ್ದವು. ಒಮ್ಮೆ ಅವರ ಸಲಹೆ ಮತ್ತು ಮಾರ್ಗದರ್ಶನ ದೊರೆತ ಬಳಿಕ ಶಾಂತಿ ಮತ್ತು ಭದ್ರತೆ ಎನಿಸುತ್ತಿದ್ದವು. ನಿಜವಾಗಿ ಅವರ ಪರಿಹಾರೋಪಾಯಗಳು ತೀರ ಸಾದಾ ಇರುತ್ತಿದ್ದುವು. ತಮಗೇಕೆ ಅವು ಕೂಡಲೆ ಹೊಳೆಯಲಿಲ್ಲ ಎಂದು ಪ್ರತಿಯೊಬ್ಬನಿಗೆ ಆಶ್ಚರ್ಯವೆನಿಸುತ್ತಿದ್ದಿತು. ಅದುದರಿಂದ ಕ್ಷಣಕ್ಷಣಕ್ಕೆ ಅವರ ಅಗಲಿಕೆ ನಮಗೆನಿಸುವದು ಸ್ವಾಭಾವಿಕವಾಗಿದೆ. ದಿನಗಳೆಯುತ್ತ ನಡೆದಂತೆ ಈ ವಿಯೋಗ ಭಾವನೆ ಹೆಚ್ಚುತ್ತ ಹೋಗುವದು. ಅವರು ನಮ್ಮ ರಾಷ್ಟ್ರೀಯ ಜೀವನದ ಅಂಗಾಂಗಗಳಲ್ಲಿ ಅಪೂರ್ವವಾಗಿ ಬೆರೆತು ಹೋಗಿದ್ದರಾದ್ದರಿಂದ ಅವರು ನಮ್ಮನ್ನು ಬಿಟ್ಟು ಹೋದಂದಿನಿಂದ ವಿಘಟನೆಯ ಗಂಡಾಂತರ ನಮಗೆ ಯಾವಾಗಲೂ ಬಾಧಿಸುತ್ತದೆ.

ಅದರೂ ಅವರ ಪಾರ್ಥಿವ ಶರೀರವು ಮಾಯವಾಗಲೆ ಬೇಕಾಗಿದ್ದಿತೆಂಬುದು ಪ್ರತಿಯೊಬ್ಬನಿಗೆ ಅರಿತ ವಿಷಯ. ಈ ಜಗತ್ತಿನಲ್ಲಿಯ ಅವರ ಕೊನೆಯದಾದ ವರ್ಷದಲ್ಲಿ ಅವರ ಆಧ್ಯಾತ್ಮಿಕ ಉನ್ನತಿಯು ತೀರ ಮೇಲ್ಮಟ್ಟವನ್ನು ಮುಟ್ಟಿದ್ದಿತು. ಅವರು ಏನ ಮಾಡುತ್ತಿರುವರು ಮತ್ತು ಹೇಳುತ್ತಿರುವರು ಎಂಬುದನ್ನು ತಿಳಿದುಕೊಳ್ಳುವುದೇ ಅನೇಕ ಸಲ ಅಶಕ್ಯವೆನಿಸುತ್ತಿದ್ದಿತು. ಒಂದು ದಿನ ನಾನು ಅವರಿಗೆ ಹೀಗೆ ಹೇಳಿಯೆ ಬಿಟ್ಟೆ, ‘ಬಾಪೂ, ನೀವೇನು ಈಗ ನಡೆಯುತ್ತಿರುವದಿಲ್ಲ; ಇಷ್ಟೊಂದು ತೀವ್ರಗತಿಯಿಂದ ನೀವು ಚಲಿಸುತ್ತಿರುವಿರಲ್ಲ ಸಾಮಾನ್ಯ ಮರ್ತ್ಯನಿಗೆ ಅದು ಗೋಚರವಾಗದು ಎಂದು ನನಗೆನಿಸುತ್ತದೆ’ ಎಂದೆ; ಅದಕ್ಕೆ ಅವರು ತಮ್ಮದೇ ಅದ ವಿನಮ್ರ ಭಾವನೆಯಿಂದ ಇಷ್ಟೊಂದು ದ್ರುತಗತಿಯಿಂದ ನಾನು ಪ್ರಗತಿಹೊಂದುತ್ತಿರುವೆನೆಂದು ನನಗೆನಿಸಲಿ ಎಂದು ನಾನು ಬಯಸುವೆ; ಪರಮಾತ್ಮನೊಬ್ಬನೆ ಅದರ ನಿರ್ಣಾಯಕನು” ಎಂದು ಉತ್ತರಿಸಿದರು. ನಮ್ಮ ತಿಳುವಳಿಕೆಯಂತೆ ಅವರ ಅವಶ್ಯಕತೆ ಅತ್ಯಂತವಾಗಿ ಇರುವ ಈ ಸಮಯದಲ್ಲಿ ಅವರನ್ನು ಎತ್ತಿಕೊಂಡು ಹೋದಂತಾಯಿತು ಎಂಬಲ್ಲಿ ಸಂದೇಹವಿಲ್ಲ. ಅದರೆ ಪರಮಾತ್ಮನ ದೃಷ್ಟಿಯಿಂದ ಅವನ ಸನ್ನಿಧಿಗೆ ಹೋಗಿ ಅವನು ಬೇಡಿದ ಸರ್ವಾರ್ಪಣಪೂರ್ವಕ ಸೇವೆ ಸಲ್ಲಿಸುವದಕ್ಕೆ ಅವರು ಸಿದ್ಧರಾಗಿದ್ದರು, ಎಂತಲೆ ಅವರನ್ನು ಈ ರೀತಿಯಲ್ಲಿ ಎತ್ತಿಕೊಂಡು ಹೋಗಲಾಯಿತು ಎಂಬುದು ನಿಃಸಂಶಯವಾಗಿದೆ.

ಈ ರೀತಿ ಬಾಪು ನಮ್ಮನ್ನು ಅಗಲಿಹೋಗಿದ್ದರೂ ಯಾವಾಗಲೂ ಚೈತನ್ಯರೂಪದಲ್ಲಿ ನಮ್ಮ ಮಧ್ಯದಲ್ಲಿಯೇ ಇರುವರು. ಪಾರ್ಥಿವ ಶರೀರದಿಂದ ಅವರು ನಮ್ಮಲ್ಲಿ ಇಲ್ಲದಿದ್ದುದಕ್ಕಾಗಿ ನಾವು ಶೋಕಿಸುತ್ತಿರುವೆವಾದರೂ ನಾವು ಪಾಲಿಸಬೇಕಾಗಿದ್ದ ಪ್ರತಿಜ್ಞೆಯಂತೆ ನಡೆದುಕೊಳ್ಳದಿದ್ದುದಕ್ಕಾಗಿ ಕಣ್ಣೊಳಗಿಂದ ನೀರು ಹರಿಯುತ್ತಿದ್ದರೂ ಈ ಜಗತ್ತಿನಲ್ಲಿ ಇರುವುದಕ್ಕಿಂತ ಹೆಚ್ಚು ಅವರು ಇಂದು ಜಾಗ್ರತರಿರುವರು ಮತ್ತು ಈ ಭಾವನೆಯಿಂದಲೆ ಉಚ್ಚ ಜೀವನಕ್ಕೆಸಾಗಿರುವ ಅವರ ಈ ಮೊದಲ ಪುಣ್ಯ ದಿನಕ್ಕಾಗಿ ವಿಶೇಷ ಮುಡಿಪನ್ನು ನಾವು ಸಲ್ಲಿಸಬೇಕಾಗಿದೆ.

ನಾವೇಕೆ ಅವರನ್ನು ಪ್ರೀತಿಸಿದೆವು ? ಏಕೆಂದರೆ ಅವರಷ್ಟೊಂದು ಮಾನವ, ಸರಳಜೀವಿ, ತಿಳುವಳಿಕೆಯುಳ್ಳವ, ಜಾಣ ಮತ್ತು ಒಳ್ಳೆಯವರಿದ್ದರೆಂದು. ಯಾವ ಮನುಷ್ಯನಲ್ಲಿಯ ಇಂಥ ಸದ್ಗುಣಗಳು ಯಾವ ಗಂಡಸು ಹೆಂಗಸು ಮತ್ತು ಮಕ್ಕಳಿಗೆ ಮೆಚ್ಚಿಗೆಯಾಗದೆ ಉಳಿದಾವು?

ಅವರು ಮಾನವರಾಗಿದ್ದರೂ ಜೀವನದ ನೈತಿಕ ಮತ್ತು ಆಧ್ಯಾತ್ಮಿಕ ಮೌಲ್ಯದ ಮಹತ್ವಕ್ಕೆ ಜೋರುಕೊಡದೆ ಇರುತ್ತಿರಲಿಲ್ಲ. ಮನುಷ್ಯನು ತನ್ನನು ತಾನು ಜಯಿಸಬೇಕು, ಮಾನವ ಸ್ವಭಾವದಲ್ಲಿಯ ಎಲ್ಲ ಲೋಪದೋಷಗಳನ್ನು ಹೋಗಲಾಡಿಸಿಕೊಂಡು ತನ್ನಲ್ಲಿಯ ದೈವೀಶಕ್ತಿಗೆ ಅನುಗುಣವಾಗಿ ನಡೆಯಬಯಸುತ್ತಿದ್ದರೆ ಸೇವಾಕಾರ್ಯಕ್ಕೇ ಬದ್ಧನಾಗತಕ್ಕದ್ದು. ಬಾಪುನ ಸೌಮ್ಯತ್ವ ಅವರಲ್ಲಿದ್ದ ಅಹಿಂಸಾ ಭಾವನೆಯಿಂದ ಹೊರಹೊಮ್ಮಿತ್ತು ಆದರೆ ತತ್ವಾಚರಣೆಯ ಪ್ರಶ್ನೆ ಬಂದಾಗ ಅವರು ಎಂದೂ ಹಿಂದೆ ಸರಿಯುತ್ತಿರಲಿಲ್ಲ. ಅಷ್ಟೊಂದು ಕಠೋರರಾಗುತ್ತಿದ್ದರವರು. ಅವರಲ್ಲಿಯ ಆ ಪ್ರೇಮಮಯ ಸೌಮ್ಯತ್ವ ಅಶಕ್ತತೆಯ ದ್ಯೋತಕವಾಗಿರಲಿಲ್ಲ. ಯಾರೇ ಯಾವದೇ ಬಗೆಯ ತಪ್ಪು ಮಾಡಿದಾಗ ಅವರ ನ್ಯಾಯ್ಯವಾದ ಕೋಪವು ಎಂತು ಪ್ರಜ್ವಲಿತವಾಗಬಹುದೆಂಬುವದನ್ನು ತಿಳಿಯುವದು ಯಾವಾಗಲೂ ಸಾಧ್ಯವಾಗುತ್ತಿರಲಿಲ್ಲವಾದರೂ ಆ ಸೌಮ್ಯತ್ವವು ಅವರ ದಾರ್ಢ್ಯದಿಂದ ಮತ್ತಷ್ಟು ಹೆಚ್ಚಿತ್ತು.

ಮಾನವಸ್ವಭಾವವನ್ನು ತಿಳಿದುಕೊಳ್ಳುವ ಅವರ ಬುದ್ಧಿಯೂ ಅಸಾಮಾನ್ಯವಾಗಿದ್ದಿತು ದಕ್ಷಿಣ ಆಫ್ರಿಕೆಯಲ್ಲಿ ಅವರು ಇರುವಾಗಿನ ತೀರ ಪ್ರಾರಂಭದ ದಿನಗಳಿಂದಲೆ ಅವರ ಸಾಂಘಿಕ ಜೀವನವು ಸುರುವಾಗಿದ್ದಿತು. ಅವರಲ್ಲಿದ್ದ ಸದ್ಗುಣಗಳಿಗಾಗಿ ಧುರೀಣತ್ವವು ಅವರ ಮೇಲೆ ತಾನಾಗಿಯೇ ಬಂದು ಬಿಟ್ಟಿತು. ಅದುದರಿಂದ ಎಲ್ಲ ಬಗೆಯ ಮತ್ತು ಪರಿಸ್ಥಿತಿಯ ಸ್ತ್ರೀ ಪುರುಷರ ಸಹವಾಸ ಅವರಿಗೆ ಲಭಿಸಿತು. ಅಲ್ಲದೆ ಯಾರಿಗೂ ಶಕ್ಯವಾಗದಂತಹ ವಿಶ್ವಾಸ ಅವರಲ್ಲಿ ಹುಟ್ಟಿತು. ಅವರು ತಮ್ಮ ಜೀವನದ ಪ್ರಯೋಗಶಾಲೆಯಲ್ಲಿ ಎಲ್ಲ ಬಗೆಯ ಪ್ರಯೋಗಗಳನ್ನು ಮಾಡಿ ಅನುಭವ ಪಡೆದವರಾಗಿದ್ದರಾದ್ದರಿಂದ ಮಾನವ ದೇಹದ ಲೋಪದೋಷಗಳ ಪರಿಚಯ ಅವರಿಗೆ ಚನ್ನಾಗಿ ಇದ್ದಿತು. ಜಗತ್ತಿನ ದೃಷ್ಟಿಯಿಂದ ಎಂಥ ಕ್ಷುಲ್ಲಕ ಮನುಷ್ಯನದೇ ಆಗಿದ್ದ ಸಮಸ್ಯೆಗಳು ಅವರಿಗೆ ಕ್ಷುಲ್ಲಕವೆನಿಸುತ್ತಿರಲಿಲ್ಲ ಅವರು ಸ್ವತಃ ಆ ಸಮಸ್ಯೆಗಳತ್ತ ಗಮನಿಸುತ್ತಿದ್ದರು. ಅದರಿಂದ ಸಂಬಂಧಿಸಿದ ಆ ವ್ಯಕ್ತಿಯು ಮುನ್ನಡೆಯಲಿಕ್ಕೆ ಶಕ್ತಿಸಂಪನ್ನನಾಗುತ್ತಿದ್ದನು. ಇಷ್ಟೊಂದು ಆತ್ಯಂತಿಕ ಪ್ರೇಮ ಮತ್ತು ಸಹಾನುಭೂತಿಯನ್ನು ಅವರು ತೋರಿಸುತ್ತಿದ್ದುದರಿಂದಲೆ ಎಲ್ಲರೂ ಅವರೆಡೆಗೆ ಧಾವಿಸುತ್ತಿದ್ದರು. ಮತ್ತು ಜನತೆಯ ಮೇಲೆ ಆಶ್ಚರ್ಯಕರವಾದ ವರ್ಚಸ್ಸನ್ನು ಅದು ದಯಪಾಲಿಸಿತು. ಜನತೆಯ ಮನಸ್ಸಿನ ಮೇಲೆ ನೀವು ಬೀರುತ್ತಿರುವ ಪ್ರಭುತ್ವಕ್ಕಾಗಿ ನಿಮಗೆ ಕೆಲಸಮಯ ಗಾಬರಿಯೆನಿಸುವದಿಲ್ಲವೇ” ಎಂದು ನಾನೊಮ್ಮೆ ಅವರನ್ನು ಕೇಳಿದೆ. ”ಪ್ರಾಮಾಣಿಕವಾಗಿ ನಾನು ಅವರ ಸೇವೆ ಮಾಡುತ್ತಿರುವದರಿಂದ ನಾನೇಕೆ ಗಾಬರಿಯಾಗತಕ್ಕದ್ದು, ಎಂದು ಕೂಡಲೆ ಉತ್ತರ ಬಂದಿತು ಅವರಿಂದ.

ಅವರ ಜಾಣತನದ ಬಗ್ಗೆ ನಾನೇನು ಹೇಳಬಲ್ಲೆ. ಎಲ್ಲಬಗೆಯ ವಿದ್ವಾಂಸರ ಮತ್ತು ಜಾಣರ ಕೂಡ ಅವರು ಸಂಭಾಷಣ ಮಾಡುತ್ತಿರುವಾಗ ಅದನ್ನು ಕೇಳುವ ಸದ್ಭಾಗ್ಯ ನನಗೆ ದೊರೆತಿತ್ತು. ಸಸ್ಥಾನದಲ್ಲಿಯೇ ತಮ್ಮ ಕೈಬೆರಳನ್ನಿಡುವ ಮತ್ತು ವಿಷಯದ ಮೂಲಕ್ಕೇ ನೇರವಾಗಿ ಹೋಗುವ ಅವರ ಅಪ್ರಮತ್ತ ಅಂತಃಪ್ರವೃತ್ತಿಯನ್ನು ನೋಡಿ ನನಗೆ ದಂಗು ಬಡೆದು ಹೋಗುತ್ತಿದ್ದಿತು.

ಅವರ ಒಳ್ಳೆತನದ ಬಗ್ಗೆ ಹೇಳುವದೆಂದರೆ ಒಂದು ಬಗೆಯಿಂದ ಅಧಿಕಪ್ರಸಂಗತನವೆನಿಸಬಹುದು. ಯಾವದು ಒಳಿತು, ಯಾವುದು ಕೆಡಕು ಅದನ್ನು ನಿರ್ಣಯಿಸುವವರಾರು; ಯಾರ ನಿರ್ಣಯವು ಸರಿ, ಯಾವದು ತಪ್ಪು ಎಂಬ ಬಗ್ಗೆ ಶ್ರೇಷ್ಠ ತತ್ವಜ್ಞಾನಿಗಳಲ್ಲಿ ಶಾಶ್ವತವಾದ ವಿವಾದ ನಡೆದೇ ಇದೆ. ಬಾಪುವಿನ ಮನಸ್ಸಿನಲ್ಲಿ ಮತ್ತು ಜೀವನದಲ್ಲಿ ಎಂದಿಗೂ ಯಾವದೇ ಬಗೆಯ ಸಂಶಯವಿರಲಿಲ್ಲ. ಸತ್ಯವೇ ಪರಮಾತ್ಮ; ಸತ್ಯ ಮತ್ತು ಅಹಿಂಸೆ ಇವೆರಡೂ

—ತಿರುಗಿ ೩ನೆಯ ಪುಟಕ್ಕೆ

ಗಾಂಧಿಯವರು ಬಿಟ್ಟುಹೋದ ಆಸ್ತಿ

ಲೇ:- ನಿರ್ಮಲಕುಮಾರ ಬೋಸ

'ಬೆತ್ತಬೇಡ, ಮಗು ಕೆಟ್ಟರೂ ಕೆಡಲಿ' ಎಂಬ ಹಳೆಯ ಶಾಲೆಯ ಗಾದೆಯನ್ನು ನಾವಿಂದು ನಂಬುವದಿಲ್ಲ. ಶಿಕ್ಷಣಕ್ಷೇತ್ರದಲ್ಲಿ ಹಿಂಸಾಕ್ರಮವನ್ನು ಸಂಪೂರ್ಣವಾಗಿ ತೆಗೆದು ಹಾಕಲಾಗಿದೆ.

ಅದೇ ಮೇರೆಗೆ, ಶಿಕ್ಷಣದಲ್ಲಿ ಹುಡುಗರನ್ನು ನಡೆಸಿಕೊಂಬ ತಂತ್ರ ಮುಟ್ಟಿದಷ್ಟು ಸಂಪೂರ್ಣತೆಯನ್ನು ಮುಟ್ಟಿದಿದ್ದರೂ ಹಿಂಸೆಯನ್ನು ಕಾಲಕ್ಕೆ ತಕ್ಕ ಕ್ರಮವಲ್ಲವೆಂದು ತಿಳಿಯಬೇಕಾದ ಮತ್ತೆರಡು ಮಾನಸಿಕ ರೋಗ ಮತ್ತು ಅಪರಾಧಗಳ ಚಿಕಿತ್ಸೆಯ ಕ್ಷೇತ್ರಗಳಿವೆ.

ಆದರೆ ಸಾಮಾಜಿಕ ವಿಕಾಸದಲ್ಲಿ ಬಾಳಿನ ಒಂದು ಭಾಗದ ಬದಲಾವಣೆಗಳು, ಮತ್ತೊಂದರ ಬದಲಾವಣೆಗಳಿಗಿಂತಲೂ ಯಾವಾಗಲೂ ಹಿಂದೆ ಬೀಳುವುದುಂಟು. ಜಗತ್ತು ವೈಯಕ್ತಿಕ ಮನಃಪ್ರವೃತ್ತಿಶೋಧದಲ್ಲಿ ಪಡೆದಷ್ಟು ಗೆಲುವನ್ನು ಅನೇಕ ಜನರು ಕೂಡುವ ಕ್ಷೇತ್ರಗಳಲ್ಲಿ ಪಡೆಯಲು ಶಕ್ತವಾಗಿಲ್ಲ. ನಾವು ಎಲ್ಲ ಜನರನ್ನೂ ಬದಲಿಸಬೇಕಾದಾಗ ಯುದ್ಧ ಪದ್ಧತಿಯನ್ನು ಅವಲಂಬಿಸುವೆವು. ಪದೇ ಪದೇ ಅದು ನೇರವಾಗಿ ನಮ್ಮ ಗುರಿಯನ್ನು ಸಾಧಿಸದೆಂದು ಅನುಭವಕ್ಕೆ ಬಂದರೂ ನಾವು ಅದನ್ನು ಬಿಡುವದಿಲ್ಲ. ಹಲವು ವೇಳೆ ಅದು ಧ್ಯೇಯ ಸಾಧನೆಗೆ ಬಹಳ ಕಾಲದ ವರೆಗೆ ಅಡ್ಡಿಯೊದಗಿಸುವಂಥ ಶಕ್ತಿಗಳನ್ನು ಎತ್ತಿ ಕಟ್ಟುವುದು. ಆದರೆ ಅದಕ್ಕಿಂತ ಉತ್ತಮವಾದ ಇನ್ನೊಂದು ನಮಗೆ ಗೊತ್ತಿಲ್ಲವಾದುದರಿಂದ ಹಳೆಯ ಪದ್ಧತಿಯೇ ಇಂದಿನ ನಾಣ್ಯವೆನಿಸಿ ಚಲಾವಣೆಯಲ್ಲಿದೆ.

ಇದರಿಂದ ಮತ್ತೂ ಒಂದು ವಿನಾಶಕಾರಕ ಪರಿಣಾಮವುಂಟು. ಒಳ್ಳೆಯ ನಾಣ್ಯವನ್ನು ಕೆಟ್ಟನಾಣ್ಯವೊಂದು ಚಲಾವಣೆಯಿಂದ ಹೊರದೂಡುವಂತೆ ಜನಸ್ತೋಮದೊಡನೆ ನಡೆಸುವ ವ್ಯವಹಾರದಲ್ಲಿ ಇದು ವೈಯಕ್ತಿಕ ಮನಃಸಂಶೋಧನ ಕ್ಷೇತ್ರದಲ್ಲಿ ಸಾಧಿಸಿದ ಪ್ರಗತಿಯನ್ನು ಹದಗೆಡಿಸುತ್ತದೆ. ಜಗತ್ತಿಗೆ ಬಹುಬೇಗ ಒಂದರ ಮೇಲೊಂದರಂತೆ ಬರುವ ಸಂಕಟಗಳಲ್ಲಿ ಹೊಕ್ಕು ಹೊರಡುತ್ತಿದೆ. ಒಂದು ಯುದ್ಧವನ್ನು ಇನ್ನೊಂದು ಬೆಂಬತ್ತಿ ಬರುತ್ತದೆ. ನಡುಗಾಲವನ್ನು ಶಾಂತಿ ಸಾಧನೆಗಳಿಗಾಗಿ ಬಳಸದೆ ಬರುವ ಯುದ್ಧದ ಸಿದ್ಧತೆಗಾಗಿಯೇ ಕಳೆಯಲಾಗುತ್ತಿದೆ. ರಾಷ್ಟ್ರೀಯ ಅಸ್ತಿತ್ವದಲ್ಲಿ ಬಿಕ್ಕಟ್ಟು ಬಂದಾಗ ಹಿಂಸೆಗೆದ್ದರೆ, ಆಗ ಶಾಂತಿಕಾಲದಲ್ಲಿ ತಲೆಯೆತ್ತಬಹುದಾದ ಅಡಚಣೆಯನ್ನು ಒರಸಿ ಒಗೆಯಲು ಅದರ ಎಲ್ಲ ಸಾಧನ ಸಾಮುಗ್ರಿಗಳನ್ನೂ ಬಳಸಲಾಗುತ್ತದೆ. ಆತ್ಮರಕ್ಷಣೆಗೆ ಹಿಂಸೆಯನ್ನೂ ಸಾರ್ವತ್ರಿಕ ಸೈನ್ಯ ಭರತಿಯನ್ನೂ ನಂಬಿದ ದೇಶವು ಆತ್ಮರಕ್ಷಣೆಯ ಸಿದ್ಧತೆಯಲ್ಲಿರುವಾಗ ಅದಕ್ಕಿಂತ ಕಡಿಮೆಯನ್ನೆಂದೂ ಮಾಡದು. ಹೀಗೆ ಸರ್ವಾಧಿಕಾರಿತ್ವವು ಶಿಕ್ಷಣ ಮತ್ತು ಮನೋವೈದ್ಯದಲ್ಲಿ ಸಾಧಿಸಲ್ಪಟ್ಟ ಅಲ್ಪ ಸ್ವಲ್ಪ ಪ್ರಗತಿಯನ್ನೂ ಗುಡಿಸಿ ಚೆಲ್ಲುತ್ತದೆ. ಇದಕ್ಕೂ ಹೆಚ್ಚಿನ ದುರಂತ ಪ್ರಸಂಗವೆಂದರೆ, ಮನಃಶಾಸ್ತ್ರದಲ್ಲಿ ನಾವು ಗಳಿಸಿದ ಹೊಸ ಜ್ಞಾನವನ್ನು ವ್ಯಕ್ತಿಯ ಸುಧಾರಣೆಗೆ ಬಳಸದೆ, ಸರಕಾರದ ಉದ್ದೇಶಗಳಿಗಾಗಿ ಹೆಚ್ಚು ಪರಿಣಾಮಕರವಾಗಿ ಜನವೃಂದವನ್ನು ಹಿಡಿತದಲ್ಲಿ ತರಲು ಬಳಸಲಾಗುತ್ತಿದೆ. ಶಿಕ್ಷಣಾಧಿಕಾರಿಗಳು ತಮ್ಮ ಸ್ವಾತಂತ್ರ್ಯವನ್ನು ಕಳೆದುಕೊಂಡು ಸಮರವೀರರಿಗೆ ಪಾದಸೇವಕರಾಗುತ್ತಾರೆ. ಅದರ ಫಲವಾಗಿ, ತತ್ವಬೋಧವು ತೈಮೂರಲಿಂಗನ ಕಾಲಕ್ಕಿಂತ ಹೆಚ್ಚು ದಕ್ಷತೆಯಿಂದ ಸಾಗುವಂತಾಗಿದೆ!

ಈ ಹಿಂಸಾ ಪ್ರಪಂಚದಲ್ಲಿ ಗಾಂಧಿಯವರು ನಮಗೆ ಬಿಟ್ಟು ಹೋದ ಆಸ್ತಿಯಾವುದು? ಸತ್ಯವೆಂಬುದು ಎಂದೂ ಯಾವನಾದರೊಬ್ಬನ ವಿಶಿಷ್ಟ ಆಸ್ತಿಯೆನಿಸದು. ನಮಗೆ ಮಾನವ ಲೋಕದ ಕಲ್ಯಾಣ ಮಾಡಬೇಕೆಂಬ ಭಾವನೆಯಿದ್ದರೆ, ಜಂಭದಿಂದ ಇಡೀ ಸತ್ಯ ಪ್ರಕ್ರಿಯೆ ನಮ್ಮ ಕಡೆಗಿದೆಯೆಂದು ನಂಬಬಾರದು. ಎದುರಾಳಿನ ಅಭಿಪ್ರಾಯದಲ್ಲಿ ಕೂಡ ಸತ್ಯವೆಂದು ಕಂಡು ಬಂದ ಅಂಶಕ್ಕೆ ನಾವು ತಕ್ಕ ಮನ್ನಣೆ ಕೊಡಬೇಕು. ಜೈನ ತತ್ವಜ್ಞಾನಿಗಳಂತೆ ಅವನ ದೃಷ್ಟಿಕೋನದ ಪ್ರಕಾರ ಅವನದು ಸರಿಯಿರಬಹುದು ಎಂದೇ ಗಾಂಧಿಯವರು ಯಾವಾಗಲೂ ಅನ್ನುತ್ತಿದ್ದರು. ಆದುದರಿಂದ ಅವರು ತಮ್ಮ ಎದುರಾಳಿನ ಅಭಿಪ್ರಾಯವನ್ನು ತುದಿವರೆಗೆ ಹೋಗಿ ನೋಡಲು ಶ್ರಮ ವಹಿಸಲು ಎಂದೂ ಹಿಂದೆಗೆಯುತ್ತಿದ್ದಿಲ್ಲ; ಅದೇ ವೇಳೆಗೆ ತಮ್ಮ ಸತ್ಯ ಕವಚದಲ್ಲಿ ಯಾವುದಾದರೂ ದೌರ್ಬಲ್ಯವಿದ್ದೀತೆಂದು ಅದನ್ನು ಹುಡುಕಿ ತೆಗೆಯಲು ಪ್ರಯತ್ನಿಸುತ್ತಿದ್ದರು.

ಸಂಪೂರ್ಣ ವೈಜ್ಞಾನಿಕವೆನಿಸುವ ಮತ್ತು ಆಮೂಲಾಗ್ರವಾಗಿ ಪ್ರಜಾ ತಂತ್ರಬದ್ಧವೆನಿಸುವ ದೃಷ್ಟಿಕೋನವು ಗಾಂಧಿಯವರು ನಮಗೆ ಬಿಟ್ಟು ಹೋದ ಅತ್ಯಮೂಲ್ಯ ವಸ್ತುಗಳಲ್ಲಿ ಒಂದು.

ಇನ್ನು ಎರಡನೆಯದು: ಯುದ್ಧವು ಅನಿವಾರ್ಯವಾಗಿ ನಮ್ಮನ್ನು ಸರ್ವಾಧಿಕಾರಿತ್ವದತ್ತ ಕರೆದೊಯ್ಯುವುದರಿಂದ ಮತ್ತು ಅಹಿಂಸೆಯೊಂದು ಮಾತ್ರ ಪ್ರಜಾಸತ್ತೆಯತ್ತ ಕರೆದುಕೊಂಡು ಹೋಗುವದರಿಂದ, ಪ್ರಕಟ ಅಥವಾ ಪ್ರಚ್ಛನ್ನ ರೀತಿಯ ಕಾಳಗವನ್ನು ಬಿಟ್ಟು ಅಹಿಂಸಾಮಾರ್ಗದಿಂದಲೇ ನಾವು ನಮ್ಮ ಸಾಮಾಜಿಕ ಘರ್ಷಣೆಗಳನ್ನು ಬಗೆಹರಿಸಿಕೊಳ್ಳಬೇಕು, ಹಿಂದಿನದಕ್ಕಿಂತ ಉತ್ತಮವೆನಿಸುವ ಸಾಮಾಜಿಕ ಸಂಘಟನೆಯನ್ನು ಘಟಿಸುವನೆಂದು ನಟಿಸುವ ಜೇತಾರನ ಇಚ್ಛೆಯಂತೆ ವಿಧೇಯರಾಗಿ ನಡೆದುಕೊಳ್ಳಲು ಒಪ್ಪುವವರೆಗೆ ಹಗೆಯನ್ನು ದಂಡನೆಯಿಂದ ಶರಣಾರ್ಥಿತ್ವಕ್ಕೆ ಇಳಿಸುವುದೇ ಯುದ್ಧದ ಉದ್ದೇಶ; ಅವನ ವ್ಯಕ್ತಿತ್ವಕ್ಕೆ ಭಂಗ ತಂದು ಅವನಲ್ಲಿ ಏನಾದರೂ ಅಲ್ಪ ಸ್ವಲ್ಪ ಪ್ರಯೋಜನವಾಗುವಂಥ ಗುಣವಿದ್ದರೆ ಅದನ್ನು ನಾವು ಮನುಷ್ಯರ ಪಾಲಿಗೆ ಇಲ್ಲದಂತೆ ಮಾಡಲಾರೆವು. ಅದರ ಬದಲು, ನಾವು ಅವನನ್ನು ಅಹಿಂಸಾ ಮಾರ್ಗದಿಂದ ಪ್ರತಿಭಟಿಸಿ, ಅವನ ಅಪಕೃತ್ಯದಲ್ಲಿ ಸಹಕರಿಸಲು ಒಲ್ಲೆವೆಂದು, ಅವನು ನಮ್ಮ ಮೇಲೆ ಸ್ವಚ್ಛಂದವಾಗಿ ತಂದೊಡ್ಡುವ ಕಷ್ಟ ನಿಷ್ಠುರಗಳನ್ನು ಸಹಿಸಿಕೊಳ್ಳಬೇಕು. ನಾವು ಈ ಆತ್ಮಕ್ಲೇಶ ತಂತ್ರದಿಂದ ಅವನನ್ನು ಬೆರಗುಗೊಳಿಸಿ ಕೂಪಮಂಡೂಕ ಸ್ಥಿತಿಯಿಂದ ಹೊರಗೆತ್ತುವ ಭರವಸೆಯನ್ನು ತಾಳಬಹುದು. ಆ ಬಳಿಕ ಈ ವರೆಗೆ ಪರಸ್ಪರ ಕಲಹಮಗ್ನವಾಗಿದ್ದ ಪಕ್ಷಗಳ ಸಹಕಾರದಿಂದ ಹೊಸ ಸಾಮಾಜಿಕ ಪದ್ಧತಿಯನ್ನು ರಚಿಸಲು ಅವಕಾಶ ಉಂಟಾಗುವದು. ಇದು ಬಲಾತ್ಕಾರದ ಮಾರ್ಗವಲ್ಲ, ಪರಿವರ್ತನದ ಮಾರ್ಗವಿದು. ಪ್ರಸಿದ್ಧಾರ್ಥದ ಪ್ರಕಾರ ಗೆದ್ದವ ಸೋತವನೆಂಬುದಿಲ್ಲವಾದ್ದರಿಂದ ಇದು ಯಾವ ತರದ ಕಹಿಯನ್ನೂ ತನ್ನ ಹಿಂದೆ ಬಿಟ್ಟುಹೋಗುವುದಿಲ್ಲ.

ಗಾಂಧಿಯವರು ಮಾನವರ ವಿವಿಧ ಕಲಹಗಳನ್ನು ಬಗೆಹರಿಸಲು ಸತ್ಯಾಗ್ರಹ ಮಾರ್ಗವನ್ನು ಅನ್ವಯಿಸಿದರು. ಸಾಕ್ಷಾತ್ ಯುದ್ಧದ ಬದಲಿಯೆನಿಸಿದ ಇದನ್ನು ಬಳಸಿಕೊಂಡು ಅವರು ಸಾಧಿಸಿದ ಉದ್ದೇಶಗಳು ಅನೇಕವಾಗಿವೆ. ವೈಕೋಮಿನಲ್ಲಿ ಅಸ್ಪೃಶ್ಯತಾನಿವಾರಣೆಗಾಗಿ; ಗುರುಕಾ ಬಾಗಿನಲ್ಲಿ ಒಂದು ನಾಗರಿಕ ಮತ್ತು ಧಾರ್ಮಿಕ ಹಕ್ಕನ್ನು ಸ್ಥಾಪಿಸುವುದರ ಸಲುವಾಗಿ; ಅಸಹಕಾರ ಮತ್ತು ಶಾಸನಭಂಗ ಚಳವಳಗಳಲ್ಲಿ ಭಾರತದ ನಷ್ಟ ಸ್ವಾತಂತ್ರ್ಯದ ಪುನಃಪ್ರಾಪ್ತಿಗಾಗಿ. ಅವರು ಈ ಗುರಿಗಳಿಗಾಗಿ ದುಡಿಯಬೇಕಾದಾಗ ನಾವು ಕೆಲವೊಮ್ಮೆ ಹಿಂಸೆ ಅಹಿಂಸೆಗಳನ್ನು ಬೆರಕೆ ಮಾಡಿ ಬಿಟ್ಟೆವು; ಮತ್ತೆ ಕೆಲವೊಮ್ಮೆ ಅಹಿಂಸಾ ಮಾರ್ಗದಿಂದ ಸಿದ್ಧತೆ ನಡೆಸುವುದರಲ್ಲಿ ವಹಿಸಬೇಕಾದ್ದಕ್ಕಿಂತ ಹೆಚ್ಚು ಆಸಕ್ತಿಯನ್ನು ಹೋರಾಟದಲ್ಲೇ ವಹಿಸಿದೆವು. ಏಕೆಂದರೆ, ಅಹಿಂಸಾತ್ಮಕ ಸಮರಕ್ಕೆ ಸಾಮಾನ್ಯ ಸಮರದ ಸರಿಸಮ ಅಥವಾ ಇನ್ನೂ ಹೆಚ್ಚು ಕ್ರಾಂತಿಕಾರಕವಾದ ಆರ್ಥಿಕ ಸಿದ್ಧತೆ ಬೇಕಾಗುತ್ತದೆ. ಗಾಂಧಿಯವರ ಮಾರ್ಗದರ್ಶನದಲ್ಲಿ ಭಾರತದಲ್ಲಿ ನಾವು ಕಾಳಗಗಳನ್ನು ಹೂಡಲಾರಂಭಿಸಿದಾಗ ಆಗೀಗ ಅದನ್ನು ಸಂದಿಗ್ಧ ಉದ್ದೇಶಗಳಿಗಾಗಿ ಕೂಡ ಬಳಸಿಕೊಂಡೆವು. ಈ ಪರಿಸ್ಥಿತಿಯಲ್ಲಿ ಸತ್ಯಾಗ್ರಹದ ಫಲಿತಾಂಶಗಳು ಅನೇಕವೂ ವಿವಿಧವೂ ಆದವು.

ಕಾಳಗದಲ್ಲಿ ವಿನಾಶ ಅಥವಾ ಚಲನದ ಹೊಸದೊಂದು ಸಾಧನವನ್ನು ಇಲ್ಲವೆ ಪ್ರತಿಹನನ ಅಥವಾ ಆತ್ಮರಕ್ಷಣೆಯ ತಂತ್ರದಲ್ಲಿ ಒಂದು ಬದಲಾವಣೆಯನ್ನು ಬಳಕೆಗೆ ತಂದಾಗ ಸೈನ್ಯದ ಕೇಂದ್ರವು ಫಲಿತಾಂಶಗಳನ್ನು ವಿವರವಾಗಿ ಪರಿಶೀಲಿಸಿ, ಮುಂದೆ ತದನುಸಾರ ಅದರ ಬಳಕೆಯನ್ನು ಸುಧಾರಿಸುವುದು. ಒಂದೇ ಮಾತಿನಲ್ಲಿ ಹೇಳುವುದಾದರೆ, ದಂಡು ಅನುಭವದಿಂದ ಪಾಠ ಕಲಿಯುತ್ತದೆ. ಸತ್ಯಾಗ್ರಹದಲ್ಲಿ ಕೂಡ ನಮ್ಮ ಕಾರ್ಯಗತಿ ಅದೇ ತರಹದ್ದಾಗಿರಬೇಕು. ಪ್ರತಿಯೊಂದು ಅಹಿಂಸಾತ್ಮಕ ದಾಳಿಯನ್ನೂ ನಾವು ಎಲ್ಲ ದೃಷ್ಟಿಕೋನಗಳಿಂದಲೂ ಅವಲೋಕಿಸಬೇಕು. ಸಿದ್ಧತೆ ಸಾಕಷ್ಟಿತ್ತೋ ಇಲ್ಲವೋ; ಇದ್ದರೆ ಅದು ಎಲ್ಲಿ ನ್ಯೂನವಾಗಿದೆ; ಏಕೆ ಹಾಗಾಯಿತು; ಗುರಿಯು ಯೋಗ್ಯವಾಗಿತ್ತೋ ಇಲ್ಲವೋ; ಕಾರ್ಯಕರ್ತರು ವಿರೋಧಿಸುವಾಗಲೂ ವಿರೋಧಿಯ ಬಗ್ಗೆ ಗೌರವಭಾವವನ್ನು ಎಲ್ಲಿಯ ವರೆಗೆ ಉಳಿಸಿಕೊಂಡಿದ್ದರು; ಸತ್ಯಾಗ್ರಹಿಗಳ ಧೀರ ಅಸಹಕಾರ ಮತ್ತು ತತ್ಪರಿಣಾಮವಾದ ಆತ್ಮಕ್ಲೇಶಗಳು ಶತ್ರುವಿನ ಮೇಲೆ ಹೇಗೆ ಪರಿಣಾಮವನ್ನುಂಟುಮಾಡಿದವು; ಸಮರದ ಅವಧಿ ಮತ್ತು ಅದರಿಂದಾದ ನಷ್ಟ; ಸಮರವು ಕೇವಲ ಯಾಂತ್ರಿಕವಾಗಿ ಕಾರ್ಯಕ್ಷಮವಿತ್ತೋ ಅಥವಾ ಅರ್ಥಿಕವಾಗಿಯೂ ಪರಿಣಾಮಕರವಾಗಿತ್ತೋ ಇತ್ಯಾದಿ. ಬೇರೆಯ ಮಾತಿನಲ್ಲಿ ಹೇಳುವುದಾದರೆ, ಅದೇ ಪರಿಸ್ಥಿತಿಯಲ್ಲಿ ಹಿಂಸಾತ್ಮಕ ಸಮರ ಹೂಡಿದ್ದರೆ ಆಗ್ತುತ್ತಿದ್ದ ಫಲಿತಾಂಶಗಳೊಡನೆ ಈ ಫಲಿತಾಂಶ ಳನ್ನು ಹೋಲಿಸಿ, ಒಟ್ಟನಲ್ಲಿ ಎಷ್ಟೆಷ್ಟು ಜನವರು ಎರಡು ಕ್ರಮಗಳಲ್ಲಿ ಜೀವ ತೆರಜ್ಯಕಾಯಿತೆಂಬುದನ್ನು ತೂಗಿ ನೋಡಬೇಕು.

ಭಾರತದ ನೆಲದ ಮೇಲೆ ಅಹಿಂಸೆಯ ಪ್ರಯೋಗಗಳನ್ನು ನಡೆಸುವಲ್ಲಿ ನಾವು ಇನ್ನೊಂದು ವಿಷಯವನ್ನು ಗಣನೆಗೆ ತಂದುಕೊಳ್ಳಬೇಕು. ಇಡೀ ಜೀವಮಾನದಲ್ಲಿ ಮಾಡಿದ ಸಾರ್ವಜನಿಕ ಸೇವೆಯಿಂದ ಪಡೆದ ಕೀರ್ತಿ ಪ್ರಭಾವಗಳ ದೆಸೆಯಿಂದ ಗಾಂಧಿಯವರೇ ಸ್ವತಃ ನೇತೃತ್ವ ವಹಿಸಿದ ಸಮರಗಳಲ್ಲಿ ಶತ್ರುವಿನ ಮೇಲೆ ಆಗುವ ಸತ್ಯಾಗ್ರಹದ ಪರಿಣಾಮವೇ ಒಂದು ಬಗೆಯದು. ಅಂಥ ಪರಿಣಾಮವಾದಲ್ಲೆಲ್ಲ ಹಗೆಯನ್ನು ಪರಿವರ್ತಿಸುವುದರಲ್ಲಿ ಅವರ ವ್ಯಕ್ತಿತ್ವವು ಅಸಾಧಾರಣ ಕಾರಣವಾಗುತ್ತಿತ್ತು. ಅವರಿಗಿಂತ ಕೆಳವರ್ಗದ ಜನರು ಹೂಡಿದಾಗ ಈ ಮಾರ್ಗ ಹೇಗೆ ಸಾಗುವುದೆಂಬುದನ್ನು ನೋಡಬೇಕಾಗಿದೆ; ಮತ್ತು ಇಷ್ಟಪಟ್ಟ ದಿಶೆಯಲ್ಲಿ ವಿರೋಧಿಯನ್ನು ಎಷ್ಟರ ಮಟ್ಟಿಗೆ ತಿರುಗಿಸಲು ಶಕ್ತರಾಗುತ್ತಾರೆಂಬುದನ್ನೂ ಪರೀಕ್ಷಿಸಬೇಕಾಗಿದೆ.

ಈ ತರ್ಕಶುದ್ಧ ಬುದ್ಧಿಯಿಂದ ನಾವು ಸತ್ಯಾಗ್ರಹ ತಂತ್ರವನ್ನು ಗಮನಿಸಿದರೆ ಮಾತ್ರ ತಾನು ಕಳೆದ ೩ ದಶಕಗಳಲ್ಲಿ ಪಡೆಯಲು ಆರಿಸಿಕೊಂಡ ನೇತೃತ್ವದಿಂದ ಲಾಭ ಹೊಂದುವ ಅವಕಾಶ ಭಾರತಕ್ಕೆ ದೊರೆಕೀತು. ಉದಾಹರಣೆಗಾಗಿ ಹೇಳುವುದಾದರೆ, ಒಂದು ವೇಳೆ ಈ ತಂತ್ರವನ್ನು ಹಿಂದೆ ಅಯೋಗ್ಯವಾದ ಗುರಿಗಳನ್ನು ಸಾಧಿಸಲು ಬಳಸಿಕೊಂಡಿದ್ದರೂ ಸ್ವತಃ ತಂತ್ರವೇ ಅದರಿಂದ ಬಹಿಷ್ಕೃತವೆನಿಸದು. ಅಭ್ಯಾಸ ಮಾಡಿದಲ್ಲಿ ಅಹಿಂಸಾಮಾರ್ಗವು ಶ್ರೇಷ್ಠತರವೆಂದು ಕಂಡು ಬಂದರೆ ಆಗ ನಾವು ಉದಾತ್ತವೆಂದು ತಿಳಿದ ಗುರಿಗಳನ್ನು ಸಾಧಿಸಲು ಅದನ್ನು ಬಳಸಿಕೊಳ್ಳಬಹುದು. ಹಾಗೆ ನೋಡಿದರೆ, ಈ ತಂತ್ರವನ್ನು ಬಳಸಬೇಕಾಗಿರುವ ಹೊಸಕಾರ್ಯಕ್ಷೇತ್ರಗಳಿಗೆ ಸರಿಹೊಂದುವಂತೆ ತಂತ್ರದ ಸ್ವರೂಪವನ್ನೇ ಬದಲಾಯಿಸಬೇಕಾಗಿ ಬಂದರೂ ಬರಬಹುದು. ಏಕೆಂದರೆ, ಹಾಗೆ ನಡೆದುಕೊಂಡರೆ ಮಾತ್ರ ನಮಗೆ ಬಿಟ್ಟುಹೋಗಲಾದ ಆಸ್ತಿಗೆ ನಾವು ಯೋಗ್ಯ ಅಧಿಕಾರಿಗಳಾಗಬಲ್ಲೆವು.

ಏಕೆಂದರೆ, ಅನುಯಾಯಿಯು ತನ್ನ ಗುರುವನ್ನು ಅನುಸರಿಸುವನಷ್ಟೇ ಅಲ್ಲದೆ ಅವನಿಗಿಂತಲೂ ಮುಂದೆ ಹೋಗುವನು; ತನ್ನ ಗುರುವಿನ ವ್ಯಕ್ತಿತ್ವಕ್ಕಿಂತ ಸತ್ಯವೇ ಗುರುತರವೆಂದು ಅವನು ಗ್ರಹಿಸುವುದೇ ಅದಕ್ಕೆ ಕಾರಣ. ಆಚಾರ್ಯ ಪ್ರಫುಲ್ಲಚಂದ್ರ ರಾಯರು ನಿವೃತ್ತರಾದಾಗ ಯಾವನೋ ಒಬ್ಬನು ಅವರ ಶಿಷ್ಯರು ಅವರಿಗಿಂತ ಹೆಚ್ಚು ಪ್ರಸಿದ್ಧರಾದರೆಂದು ಹೇಳಿದರು. ಆಗ ಪ್ರಫುಲ್ಲಚಂದ್ರರು ರಸಾಯನ ಶಾಸ್ತ್ರದಲ್ಲಿ ತಮ್ಮ ಶಿಷ್ಯರು ತಮಗಿಂತ ಮುಂದೆ ಹೋದದ್ದು ಉಪಾಧ್ಯಾಯರಾದ ತಮಗೆ ಹೆಮ್ಮೆಯ ಮಾತೇ ಸರಿ ಎಂದು ಆ ಕ್ಷಣ ಉತ್ತರವಿತ್ತದ್ದು ನನಗೆ ನೆನಪಾಗುತ್ತದೆ.

ನಾವೆಲ್ಲರೂ ಗಾಂಧಿಯವರು ಬಿಟ್ಟು ಹೋದ ಆಸ್ತಿಗೆ ಈ ಪ್ರಕಾರ ಅರ್ಹರಾಗೋಣ.

ಕಲಕತ್ತ

೧೮-೧೨-೪೮ (ಹರಿಜನ)

(೬ನೆಯ ಪುಟದಿಂದ)

ನೋವಾಗಬಾರದೆಂಬ ಬಗ್ಗೆ ಅವರು ಯಾವಾಗಲೂ ದಕ್ಷತೆ ವಹಿಸುತಿದ್ದರು. ತಪ್ಪು ಮಾಡಿದ ಎರಡನೆಯವರನ್ನು ಅವರು ಕ್ಷಮಿಸುತಿದ್ದರೂ ತಾವು ಸತ್ಯ ಮತ್ತು ನ್ಯಾಯಾಚರಣೆಯಲ್ಲಿ ಅತ್ಯಂತ ನಿಷ್ಠರಾಗಿದ್ದರು.

ಹಿಂದೂ ಧರ್ಮದ ಸನಾತನತ್ವದಲ್ಲಿ ಅವರಿಗೆ ಅತ್ಯಂತ ಆದರವಿದ್ದರೂ ಉಳಿದ ಧರ್ಮಗಳ ಮಹತ್ವದ ಉಪದೇಶಗಳನ್ನು ಅವರು ಅಲಕ್ಷಿಸುತಿರಲಿಲ್ಲ. ಕುರಾಣ ಮತ್ತು ಬಾಯಿಬಲ್ಲಗಳಿಗೆ ಅವರು ಅಷ್ಟೇ ಗಮನ ಕೊಡುತಿದ್ದರು; ಅವರ ಬಗ್ಗೆ ಎಷ್ಟೋ ಹೇಳಲಾಗಿದೆ ಮತ್ತು ಬರೆಯಲಾಗಿದೆ. ಆದರೆ ಅವರನ್ನು ಸಂಪೂರ್ಣವಾಗಿ ತಿಳಿದುಕೊಂಡು ಅವರ ಉಪದೇಶಗಳಂತೆ ಒಳ್ಳೆ ಆಸ್ಥೆಯಿಂದ ನಡೆಯುವವರು ಕೆಲ ಜನರು ಮಾತ್ರ ಸಿಕ್ಕಬಹುದು. ನಮ್ಮ ದೇಶದ ಭಾವೀ ಜನಾಂಗದಲ್ಲಿ ಅವರಿಗೆ ಬಹಳ ವಿಶ್ವಾಸವಿದ್ದಿತು; ಉಳಿದ ದೇಶಗಳಲ್ಲಿಯ ಜನತೆಗೆ ಸತ್ಯ ಮತ್ತು ಅಹಿಂಸೆಯ ಸಂದೇಶವನ್ನು ಮುಟ್ಟಿಸಲು ಅವರು ಸಮರ್ಥರಾಗಬಲ್ಲರೆಂದೂ ಅವರು ನಂಬಿದ್ದರು. ಅದುದರಿಂದ ಶಕ್ಯವಿದ್ದಷ್ಟರ ಮಟ್ಟಿಗೆ ಅವರನ್ನು ಅನುಕರಿಸಿ ಆ ಮಹಾಕಾರ್ಯಕ್ಕೆ ನಮ್ಮನ್ನು ಅರ್ಪಣೆ ಮಾಡಿಕೊಳ್ಳುವದು ನಮ್ಮೆಲ್ಲರ ಕರ್ತವ್ಯವಾಗಿದೆ.

ಗುಂಟೂರ

೧೪-೧ ೧೯೪೯ (ಹರಿಜನ)

(೨೯ ನೇ ಪುಟದಿಂದ)

ಒಂದೇ ನಾಣ್ಯದ ಎರಡು ಮುಖಗಳು. ಒಂದನ್ನು ಬಿಟ್ಟು ಎರಡನೆಯದನ್ನು ನೀವು ಇಟ್ಟುಕೊಳ್ಳಲಾರಿರೆಂದು. ಅವರ ನಿಶ್ಚಿತ ನಂಬಿಕೆ ಇದ್ದಿತು; ಅದರಂತೆಯೆ ಅವರು ತಮ್ಮ ಆಚರಣೆಯನ್ನಿಟ್ಟಿದ್ದರು. ಸತ್ಯವಂತನಲ್ಲದವನು ಎಂದಿಗೂ ಒಳ್ಳೆಯವನಾಗನು. ಪ್ರೀತಿಯಿಲ್ಲದ ಮನುಷ್ಯನೆಂದಿಗೂ ಒಳ್ಳೆಯವನಾಗನು. ಎಲ್ಲ ಧರ್ಮಗಳ ಸಾರಸರ್ವಸ್ವವು ಇದೇ ಎಂದು ಬಾಪು ನಂಬುತ್ತಿದ್ದರು. ಮರ್ತ್ಯಶ್ರೇಷ್ಠರಲ್ಲಿ ಅವರು ಹೆಚ್ಚುಶ್ರೇಷ್ಠರೆಂದು ಭವಿಷ್ಯತ್ತು ಭಾವಿಸುವದೆಂಬುದು ನಿಶ್ಚಿತ. ಬೇರೆಯಾವದೇ ಗುರುವಿನಿಂದ ಕಲಿತದ್ದಕ್ಕಿಂತ ಹೆಚ್ಚಿಗೆ ನಾನು ಬಾಪುನಿಂದ ಜೀಸಸ್ ಕ್ರಾಯಿಸ್ಟನ ಬಗ್ಗೆ ಕಲಿತೆನೆಂದು ಕೃತಜ್ಞತಾಪೂರ್ವಕವಾಗಿ ಸ್ಮರಿಸದಿರಲಾರೆ: ನಾನು ಚಿಕ್ಕವಳಿದ್ದಾಗ ಸಜ್ಜನ ಸ್ತ್ರೀಪುರುಷರ ಬಳಿ ಶಿಕ್ಷಣಪಡೆಯುವ ಭಾಗ್ಯ ನನ್ನದಾಗಿತ್ತು. ಅವರು ಹಿಂದುಗಳಾಗಿದ್ದರೂ ಯಾವದೇ ಯುಗದಲ್ಲಿಯ ಶ್ರೇಷ್ಠ ಕ್ರಿಶ್ಚನ್‌ರಲ್ಲಿ ಇವರೊಬ್ಬರೆಂದು ಅವರು ಪೂಜಿಸಲ್ಪಡುವರೆಂದು ನಾನು ಧೈರ್ಯದಿಂದ ಹೇಳಬಲ್ಲೆ.

ಅತ್ಯಂತಭೀತಿಗ್ರಸ್ತವಾದಜಗತ್ತಿನಲ್ಲಿನಾವೀಗ ಇರುತ್ತೇವೆ. ಪ್ರೀತಿಯ ಅಭಾವದಲ್ಲಿ ಮತ್ತು ಮನುಷ್ಯರು ಸತ್ಯವನ್ನು ಪರಸ್ಪರರಿಂದ ಮುಚ್ಚಿಡುವಾಗ ಭೀತಿಯು ಆವರಿಸುತ್ತದೆ. ನಮ್ಮ ದೇಶದಲ್ಲಿ ಬಗೆಬಗೆಯ ಅಡಚಣೆಗಳು ನಮ್ಮನ್ನು ಮುತ್ತಿವೆ. ಈಗ ಸತ್ಯನಿಷ್ಠೆಯ ಮಟ್ಟಲನ್ನು ಹೆಚ್ಚಿಸಬೇಕಾಗಿದೆ. ಮನುಷ್ಯರ ಮನಸ್ಸಿನಲ್ಲಿ ಹುದುಗಿದ ಅಂಜಿಕೆಯನ್ನು ಹೊಡೆದೋಡಿಸಬೇಕಾಗಿದೆ. ಹಿಂಸೆಯು ರಾಕ್ಷಸ ಸ್ವರೂಪಿಯಾಗಿದೆ; ಅದೆಲ್ಲವನ್ನು ಈಗ ಬಿಡಿಸಬೇಕಾಗಿದೆ. ಬಾಪುನ ಉದಾಹರಣೆ ಇದ್ದೇ ಇದೆ. ಅವರ ಚೈತನ್ಯವು ನಮಗೆ ಸ್ಫೂರ್ತಿಯನ್ನು ಕೊಡುತ್ತದೆ ಮತ್ತು ಸತ್ಯ ಮತ್ತು ಪ್ರೇಮದ ಸಂದೇಶವನ್ನು ಆಲಿಸಲು ನಾವು ನಮ್ಮ ಹೃದಯವನ್ನು ತೆರೆದದ್ದಾದರೆ ಅವರ ಚೈತನ್ಯವು ಮಾರ್ಗದರ್ಶನವನ್ನು ಮಾಡುವದು ಅವರು ಬಯಸುವ ಆರಾಧನೆಯ ಮಾರ್ಗ ಇದೊಂದೇ. ಈ ಶಾಶ್ವತವಾದ ಸತ್ಯವನ್ನು ಹುಡುಕುವುದಕ್ಕಾಗಿಯೆ ನಮ್ಮ ಜೀವನವನ್ನು ಮುಡುಪಿಡತಕ್ಕದ್ದು ಅವರ ದಿವ್ಯ ಸ್ಮೃತಿ ಪ್ರೀತಿಯ ಸ್ಮಾರಕ ಮಂದಿರಕ್ಕೆ ನಾವು ಸಲ್ಲಿಸತಕ್ಕ ಏಕಮೇವ ಮುಡುಪೆಂದರೆ ಇದೇ.

೧೩-೧-೪೯ (ಹರಿಜನ)

'ನಮ್ಮ ಬೇಡಿಕೆಗಳನ್ನು ಮನ್ನಿಸಿರಿ'

ಮುಂಬಯಿ ಸರಕಾರಕ್ಕೆ ಬಿನ್ನಹ

ಕುಲಕರ್ಣಿ ಸಂಘದ ಸಭೆ

ಕರ್ನಾಟಕ ವತನದಾರ ಕುಲಕರ್ಣಿ ಸಂಘದ ವಿಶೇಷ ಸಾಧಾರಣ ಸಭೆಯು ಹುಬ್ಬಳ್ಳಿಯ ತುಳಜಾಭವಾನಿ ಗುಡಿಯಲ್ಲಿ ಬಾಗಲಕೋಟೆಯ ಶ್ರೀ ಹಣಮಂತರಾವ ಬೆಣ್ಣೂರ ವಕೀಲರ ಅಧ್ಯಕ್ಷತೆಯಲ್ಲಿ ನಡೆಯಿತು. ಧಾರವಾಡ, ವಿಜಾಪುರ ಮತ್ತು ಬೆಳಗಾವಿ ಜಿಲ್ಲೆಗಳಿಂದ ಸುಮಾರು ಮುನ್ನೂರು ಸದಸ್ಯರೂ ಹಲವು ಆಮಂತ್ರಿತ ಸದ್ಗೃಹಸ್ಥರೂ ಬಂದಿದ್ದರು. ಸಭೆಯ ಪ್ರಾರಂಭಕ್ಕೆ ಗದುಗಿನ ಶ್ರೀ ಜಾಲೀಹಾಳ ಅನಂತರಾಯರು ಮಾತಾಡುತ್ತ ಹೀಗೆ ಹೇಳಿದರು. ವತನದಾರ ಕುಲಕರ್ಣಿಯರ ಪೋಟಗಿಯು ಹಿಂದೆ ಎಂದೋ ನಿರ್ಧರಿಸಲ್ಪಟ್ಟದೆ. ಈಗ ಅವರ ಕೆಲಸದ ಸ್ವರೂಪವು ಬಹಳ ಹೆಚ್ಚುತ್ತ ನಡೆದದ್ದರಿಂದಲೂ ತುಟ್ಟಿಯ ಕಾಲವಿರುವದರಿಂದಲೂ ಹಿಂದೆ ನಿರ್ಧರಿಸಲ್ಪಟ್ಟ ಪೋಟಗಿಯು ಉಪಜೀವನಕ್ಕೆ ಸಾಕಾಗುವದಿಲ್ಲ. ಅದುದರಿಂದ ಪರಿಹಾರ ಕೇಳುವದು ನ್ಯಾಯ್ಯವಾಗಿದೆ. ತಮ್ಮ ಸಂಘದ ಮೂಲಕ ಕುಲಕರ್ಣಿಯರು ಸಂಘಟಿತ ರೀತಿಯಿಂದ ತಮ್ಮ ಬೇಡಿಕೆಗಳನ್ನು ಮುಂಡಿಸಿದ್ದಾರೆ. ಆದರೆ ಸರಕಾರದಿಂದ ಪರಿಹಾರ ದೊರೆಯದ್ದರಿಂದ ಈಗ ರಾಜೀನಾಮೆ ಕೊಡುವ ಪ್ರಸಂಗ ಅವರಿಗೆ ಬಂದಿತು. ನೀವು ಒಮ್ಮೆ ರಾಜೀನಾಮೆ ಕೊಟ್ಟ ಬಳಿಕ ಸಂಘದ ಆದೇಶ ಆಗುವವರೆಗೆ ಹೋರಾಡಿರಿ.

ಈ ಪ್ರಕಾರ ಶ್ರೀ ಅನಂತರಾಯರು ಮಾತಾಡಿದ ಬಳಿಕ ಶ್ರೀ ನೇಗಿನಹಾಳ ವಕೀಲರು ಭಾಷಣ ಮಾಡಿ ಕುಲಕರ್ಣಿಯರ ಬೇಡಿಕೆಗಳನ್ನು ಸಹಾನುಭೂತಿಯಿಂದ ನೋಡದೆ ಬಿದರಿಕೆ ಹಾಕುವ ಕ್ರಮವನ್ನು ಅಧಿಕಾರಿಗಳು ವಹಿಸಿದ್ದು ಸೂಕ್ತವಾಗಿಲ್ಲ ಎಂದು ಮುಂತಾಗಿ ಹೇಳಿದರು. ಅನಂತರ ಆರ್. ಕೆ. ಕುಲಕರ್ಣಿ ವಕೀಲರು ಮತ್ತು ಎಂ. ಬಿ. ಕುಲಕರ್ಣಿ ವಕೀಲರ ಭಾಷಣವಾದ ಬಳಿಕ ಹತ್ತು ಗೊತ್ತುವಳಿಗಳು ಸ್ವೀಕೃತವಾದವು. ಸಂಘದ ಆಧಾರ ಸ್ವರೂಪರಾಗಿದ್ದ ಶ್ರೀ ಸ್ವಾಮಿರಾವ ಕುಲಕರ್ಣಿ ಮತ್ತು ನರಸಿಂಗರಾವ ದೇಸಾಯಿ ಕಲ್ಲಾಪೂರರು ನಿಧನ ಹೊಂದಿದ ಬಗ್ಗೆ ದುಃಖ ಪ್ರದರ್ಶಿಸಲಾಯಿತು. ಕುಲಕರ್ಣಿಯರು, ಸಂಘದ ಆದೇಶಕ್ಕನುಸಾರವಾಗಿ ರಾಜೀನಾಮೆ ಕೊಟ್ಟ ಬಗ್ಗೆ ಅವರನ್ನು ಅಭಿನಂದಿಸಿ ಇನ್ನುಳಿದವರೂ ರಾಜೀನಾಮೆ ಕೊಟ್ಟು ಸಂಘದ ಶಿಸ್ತನ್ನು ಪಾಲಿಸಬೇಕೆಂದು ಬಿನ್ನವಿಸಲಾಯಿತು. ನಿಕೃಷ್ಟ ಪರಿಸ್ಥಿತಿಯಲ್ಲಿ ಜೀವನವು ಸಾಗದ್ದಕ್ಕಾಗಿ ಕುಲಕರ್ಣಿಯರು ಅನಿವಾರ್ಯವಾಗಿ ರಾಜೀನಾಮೆ ಕೊಟ್ಟದ್ದರ ಹಿನ್ನೆಲೆಯನ್ನು ವಿವರಿಸಿ ಈ ಗಂಭೀರ ಪರಿಸ್ಥಿತಿಯಲ್ಲಿ ಸರಕಾರದವರು ಕುಲಕರ್ಣಿಯರ ಬೇಡಿಕೆಗಳನ್ನು ಸಹಾನುಭೂತಿಪೂರ್ವಕ ಪುನರ್ವಿಮರ್ಶಿಸಬೇಕೆಂದು ಬಿನ್ನವಿಸುವ, ಜನತೆ, ಕಾಂಗ್ರೆಸ ಧುರೀಣರು ಮತ್ತು ಶಾಸನ ಸಭೆಯ ಸದಸ್ಯರು ಸಹಾನುಭೂತಿಪೂರ್ವಕ ಈ ಪ್ರಶ್ನೆಯನ್ನು ನೋಡಬೇಕೆಂದು ಬಿನ್ನವಿಸಲಾಯಿತು. ಅಧಿಕಾರಿಗಳ ದರ್ಪದ ಪ್ರಕಟನೆಗಳನ್ನು ಖಂಡಿಸಿ ಇನ್ನಾದರೂ ಪರಿಸ್ಥಿತಿಯನ್ನು ತಿಳಿದುಕೊಳ್ಳಬೇಕೆಂದು ಅಧಿಕಾರಿಗಳಿಗೆ ಬಿನ್ನವಿಸಲಾಯಿತು. ಅನಂತರ ಹೊಸ ವರುಷಕ್ಕೆ ಅಧಿಕಾರಿಗಳನ್ನು ಮತ್ತು ಕಾರ್ಯ ಸಮಿತಿಯನ್ನು ಆರಿಸಲಾಯಿತು.

ಶ್ರೀ ಹ. ರಾ. ಬೆಣ್ಣೂರ ವಕೀಲರು ಅಧ್ಯಕ್ಷರಾಗಿಯೂ ಶ್ರೀ ರಾ. ಬ ದೇಶಪಾಂಡೆ ಮತ್ತು ಎಚ್. ಕೆ. ದೇಸಾಯರು ಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟರು. ಶ್ರೀ ಆರ್. ಕೆ. ಕುಲಕರ್ಣಿ, ಎಚ್. ಎಂ. ಕುಲಕರ್ಣಿ, ವಿ. ಎಚ್. ನೇಗಿನಹಾಳ, ಎ. ಬಿ. ಕುಲಕರ್ಣಿ, ವಿ. ಎಚ್. ಕಂಬಾಗಿ ಇವರು ಕಾರ್ಯಕಾರಿ ಸಮಿತಿಗೆ ಆರಿಸಲ್ಪಟ್ಟರು ಇನ್ನು ಮೂವರು ಸದಸ್ಯರನ್ನು ಸೇರಿಸಿಕೊಳ್ಳುವ ಅಧಿಕಾರವನ್ನು ಅಧ್ಯಕ್ಷರಿಗೆ ಕೊಡಲಾಯಿತು. ಸರಕಾರದ ಕೂಡ ವಿಚಾರವಿನಿಮಯ ಮಾಡುವ ಮತ್ತು ಕುಲಕರ್ಣಿಯರಿಗೆ ಅವಶ್ಯಕವಾದ ಆದೇಶ ಕೊಡುವ ಅಧಿಕಾರವನ್ನು ಈ ಸಮಿತಿಗೆ ಕೊಡಲಾಯಿತಲ್ಲದೆ ಈ ಸಮಿತಿಯ ಆದೇಶದಂತೆ ನಡೆದುಕೊಳ್ಳಲು ಸದಸ್ಯರಿಗೆಲ್ಲ ವಿಧಿಸಲಾಯಿತು. ಅನಂತರ ಅಧ್ಯಕ್ಷರ ಸಮಾರೋಪ ಆಭಾರಮನ್ನಣೆ ರಾಷ್ಟ್ರಗೀತೆಗಳಾಗಿ ಜಯಘೋಷದಲ್ಲಿ ಸಭೆಯ ಕಾರ್ಯ ಕೊನೆಗಂಡಿತು.


ಪ್ರಾಂತಾಧ್ಯಕ್ಷರ ಸಹಾನುಭೂತಿ

ಪರಿಸ್ಥಿತಿಯಲ್ಲಿ ಕುಲಕರ್ಣಿಯರಿಗೆ ಪರಿಹಾರ ಕೊಡುವದು ಸಮಂಜಸವಾದುದು. ನಾನು ಈ ಬಗ್ಗೆ ಪ್ರಯತ್ನ ಮಾಡುವೆನು. ಪ್ರಾಂತಿಕ ಸರಕಾರಕ್ಕೆ ಬರೆದು ಅವರ ಮನೋಭಾವವನ್ನು ತಿಳಿದುಕೊಳ್ಳುವೆನು' ಎಂದು ಕರ್ನಾಟಕಪ್ರಾಂತೀಯ ಕಾಂ. ಅಧ್ಯಕ್ಷರಾದ ಶ್ರೀ ನಿಜಲಿಂಗಪ್ಪನವರು ೨೪ಕ್ಕೆ ಕುಲಕರ್ಣಿ ಸಂಘದ ಶಿಷ್ಟಮಂಡಳದವರು ಅವರನ್ನು ಭೆಟ್ಟಿಯಾದಾಗ ಅಶ್ವಾಸಿಸಿದರು. ಶಿಷ್ಟಮಂಡಳದವರು ಅಧ್ಯಕ್ಷ ಬೆಣ್ಣೂರರ ಮೂಲಕ ಪ್ರಾಂತಾಧ್ಯಕ್ಷರಿಗೆ ಮನವಿಯೊಂದನ್ನರ್ಪಿಸಿ ತಮ್ಮ ಬೇಡಿಕೆಗಳನ್ನು, ರಾಜೀನಾಮೆಯ ಹಿನ್ನೆಲೆಯನ್ನು ತಿಳಿಸಿದರು. ಈ ಬಗ್ಗೆ ಕೂಡಲೆ ಸರಕಾರಕ್ಕೆ ಬರೆಯುವೆವೆಂದು ಪ್ರಾಂತಾಧ್ಯಕ್ಷರು ಶಿಷ್ಟಮಂಡಳದವರಿಗೆ ಅಶ್ವಾಸನ ಕೊಟ್ಟರು.

Regd. No. B. 3148
LICENCE No. 3
Licenced to Post without Prepayment

ಕಳೆದ ವರ್ಷ ಜನೇವರಿ ೩೧:

೧೯೪೮, ಜನೇವರಿ ೩೧ ನೇ ದಿನ ರಾಷ್ಟ್ರದ ಹೃದಯ ರಾಷ್ಟ್ರಪಿತನ ಕಳೇವರವನ್ನು ಅಗ್ನಿನಾರಾಯಣನಿಗರ್ಪಿಸುವ ಅತ್ಯಂತ ವಿಷಾದಮಯ ಕಾರ್ಯದಲ್ಲಿ ತೊಡಗಬೇಕಾಗಿ ಬಂದುದಕ್ಕೆ ಅಸೀಮ ಪರಿತಾಪದಿಂದ ಬೆಂದಿತು. ಬಲಗಡೆ ತೋರುವ ಚಿತ್ರ ದಿಲ್ಲಿಯಲ್ಲಿ ಮಹಾತ್ಮಾ ಗಾಂಧಿಯವರ ಸ್ಮಶಾನ ಯಾತ್ರೆಯ ಅಪೂರ್ವ ದೃಶ್ಯ. ಮಾನವ ಸಾಗರವೇ ಈ ದುಃಖಾಸ್ಪದ ಅಂತ್ಯೇಷ್ಟಿಗಾಗಿ ನೆರೆದಿತ್ತು. ಚಿತ್ರದ ಎಡಗಡೆ ಮಹಾತ್ಮರ ಕಳೇವರ ಕಾಣಿಸುತ್ತಿದೆ



ಈ ಪತ್ರಿಕೆಯನ್ನು ಹುಬ್ಬಳ್ಳಿ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ "ಲೋಕಶಿಕ್ಷಣ ಟ್ರಸ್ಟಿನ" ಪರವಾಗಿ ಹ. ರಾ. ಪುರೋಹಿತರು ಮುದ್ರಿಸಿ ಪ್ರಕಟಿಸಿದರು.

Regd. No. B. 3148
LICENCE No. 3
Licenced to Post without
Prepayment

ಕಳೆದ ವರ್ಷ ಜನೇವರಿ ೩೧:

೧೯೪೮, ಜನೇವರಿ ೩೦ ನೇ ದಿನ ರಾಷ್ಟ್ರದ ಹೃದಯ ರಾಷ್ಟ್ರಪಿತನ ಕಳೇವರವನ್ನು ಅಗ್ನಿನಾರಾಯಣನಿಗರ್ಪಿಸುವ ಅತ್ಯಂತ ವಿಷಾದಮಯ ಕಾರ್ಯದಲ್ಲಿ ತೊಡಗಬೇಕಾಗಿ ಬಂದುದಕ್ಕೆ ಅಸೀಮ ಪರಿತಾಪದಿಂದ ಬೆಂದಿತು. ಬಲಗಡೆ ತೋರುವ ಚಿತ್ರ ದಿಲ್ಲಿಯಲ್ಲಿ ಮಹಾತ್ಮಾ ಗಾಂಧಿಯವರ ಸ್ಮಶಾನ ಯಾತ್ರೆಯ ಅಪೂರ್ವ ದೃಶ್ಯ. ಮಾನವ ಸಾಗರವೇ ಈ ದುಃಖಾಸ್ಪದ ಅಂತ್ಯೇಷ್ಟಿಗಾಗಿ ನೆರೆದಿತ್ತು. ಚಿತ್ರದ ಎಡಗಡೆ ಮಹಾತ್ಮರ ಕಳೇವರ ಕಾಣಿಸುತ್ತಿದೆ



ಈ ಪತ್ರಿಕೆಯನ್ನು ಹುಬ್ಬಳ್ಳಿ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ "ಲೋಕಶಿಕ್ಷಣ ಟ್ರಸ್ಟಿನ" ಪರವಾಗಿ ಹ. ರಾ. ಪುರೋಹಿತ... ನೊಹರೆಯವರು ಮುದ್ರಿಸಿ ಪ್ರಕಟಿಸಿದರು.